ನಮ್ಮ ಮಾನಸ

ಸಂಪುಟ : 5 ಡಿಸೆಂಬರ್ 2011 ಸಂಚಿಕೆ: 8 ಬೆಲೆ: 10/-



ಸಾಧನೆಗೆ ಅಂಗವಿಕಲತೆ ಸಮಸ್ಯೆಯೇ ಅಲ್ಲ...

ಅಂಗವಿಕಲರಲ್ಲಿ ಹುದುಗಿರುವ ಪ್ರತಿಭೆಯು ಬೆಳಕಿಗೆ ಬರುವಂತಾಗಲು ಸರ್ಕಾರ ಅವರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು

- ಶಿಕ್ಷಣ
- ಉದ್ಯೋಗ ಮತ್ತು ತರಬೇತಿ
- ಪುನರ್ವಸತಿ
- ಸಾಮಾಜಿಕ ಭದ್ರತೆ
- ವಿದ್ಯಾರ್ಥಿ ವೇತನ
- ಶ್ರವ್ಯ ಗ್ರಂಥಾಲಯ ಸ್ಥಾಪನೆ
- ಸ್ವಯಂ ಉದ್ಯೋಗ
- ದೂರವಾಣಿ ಬೂತ್ ಸೌಲಭ್ಯ
- ಸಾಲ ಸೌಲಭ್ಯ
- ವಿಮಾ ಯೋಜನೆ
- ಮಾಸಿಕ ನಿರ್ವಹಣೆ ಭತ್ಯೆ (ರೂ. 400/-)
- ಉದ್ಯೋಗದಲ್ಲಿ ಶೇಕಡ 5ರಷ್ಟು ಮೀಸಲು
- ವಿಶೇಷ ವಾಹನ
- ರಿಯಾಯಿತಿ ಬಸ್ ಪಾಸ್
- ಅಂಗವಿಕಲರಿಗಾಗಿ ಶಾಲೆಗಳು

ಉದಾಸೀನತೆ ಬಿಡಿ – ಉತ್ತೇಜನ ನೀಡಿ

ಕರ್ನಾಟಕ ವಾರ್ತೆ

ನಮ್ಮ ಮಾನಸ

ಡಿಸೆಂಬರ್ 2011
ಸಂಪುಟ : 5 ಸಂಚಿಕೆ : 8

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಸಂಪಾದಕ ಮಂಡಳಿ
ಚಂಪಾವತಿ ಹೆಚ್.ಎಸ್., ಸವಿತಾ ಎ.
ವೆಂ. ವನಜಾ, ಗೀತಾ, ಎಚ್.ಎಸ್. ಪುಷ್ಪಾ.

ಸಲಹೆ – ಸಹಕಾರ
ಇಳಾ ವಿಜಯಾ, ಸುಮಿತ್ರಾಬಾಯಿ ಬಿ.ಎನ್.

ಮಾನಸ ಬಳಗ
ತಸ್ನೀಂ ತಾಜ್, ವೇದವಲ್ಲಿ ಜಿ.ವಿ.
ವತ್ಸಲ ವೈ.ಎನ್., ಶ್ಯಾಮಲ, ತಾಜುಮಾ

ಚಂದಾ ವಿವರ

ಬಿಡಿಪ್ರತಿ	**10–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ
ವೆಂ. ವನಜ
2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ಸರ್ಕಾರಿ ಯೋಜನೆಗಳಲ್ಲಿ ಹೈಜಾಕ್ ಆಗಿರುವ ಮಹಿಳಾ ಸಬಲೀಕರಣ

ಮಹಿಳೆಯರಿಗಾಗಿ ಪ್ರಭುತ್ವ ಆಯೋಜಿಸಿರುವ, ರೂಪಿಸಿಕೊಂಡಿರುವ ಕಾರ್ಯಕ್ರಮಗಳು ಮೇಲ್‌ಸ್ತರದಲ್ಲಿ ಮಹಿಳಾ ಪರವಾಗಿ ಎಂಬಂತೆ ಕಾಣಿಸಿಕೊಂಡರೂ ಒಟ್ಟು ರೂಪುರೇಷೆಯಲ್ಲಿ ಅಂತಸ್ಥವಾಗಿರುವ ಪಿತೃಪ್ರಧಾನ ಮೌಲ್ಯಗಳ ಹಳೆಯ ಸಂಪ್ರದಾಯವನ್ನು ಹೊಸ ರೂಪದಲ್ಲಿ ಮುಂದುವರಿಸಿಕೊಂಡು ಹೋಗುತ್ತಿವೆ. ಮಹಿಳೆಯರ ವೋಟ್‌ಬ್ಯಾಂಕ್ ಹಾಗೂ ಜನಪ್ರಿಯತೆಯ ಗುಂಗಿನಿಂದ ಚಾರಿತ್ರಿಕವಾಗಿ ರೂಪುಗೊಂಡ ಇಂತಹ ಮಹಿಳಾ ಯೋಜನೆಗಳು ಅವುಗಳ ವಿಷನ್‌ನಲ್ಲಿ ಹಾಗೂ ಕಾರ್ಯರೂಪದಲ್ಲಿ ಪ್ರತಿಪಾದಿಸುವುದಾದರೂ ಏನನ್ನು?

1951ರಲ್ಲಿ ಪ್ರಾರಂಭವಾದ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಹೆಚ್ಚು ಒತ್ತು ನೀಡಲಾಗಿತ್ತು. ಮಹಿಳೆಯರ ಸ್ಥಾನಮಾನದ ಬಗ್ಗೆಯಾಗಲೀ, ಅವರ ಅಭಿವೃದ್ಧಿ ಬಗ್ಗೆಯಾಗಲೀ ಕಿಂಚಿತ್ತೂ ಗಮನವನ್ನು ನೀಡಿರಲಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಒತ್ತಡದಿಂದಾಗಿ ಶಿಶುಮರಣ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಮಹಿಳೆಯರ ಆರೋಗ್ಯಕ್ಕೆ ಮಾತ್ರ ಪ್ರಾಮುಖ್ಯತೆ ನೀಡಲಾಗಿತ್ತು. ನಂತರದ ಯೋಜನೆಗಳಲ್ಲೂ ಮಹಿಳೆಯನ್ನು ಹೆರುವ ಯಂತ್ರಗಳೆಂದೇ ಭಾವಿಸಲಾಗಿದೆ. ಜನಸಂಖ್ಯೆಯ ನಿಯಂತ್ರಣ, ಶಿಶುಮರಣದ ಹಿನ್ನೆಲೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿದ್ದು ಈ ಮೂಲಕ ಮಹಿಳೆಯರನ್ನು 'ಸಾಮಾಜಿಕ ಕ್ಷೇತ್ರ' ವ್ಯಾಪ್ತಿಯ ಪರಿಧಿಯಲ್ಲಿ ಸೇರಿಸಲಾಗಿತ್ತು.

5ನೆಯ ಪಂಚವಾರ್ಷಿಕ ಯೋಜನೆಯ ನಂತರ 1974–78ರಲ್ಲಿ ಭಾರತದಲ್ಲಿ ಮಹಿಳೆಯರ ಸ್ಥಾನಮಾನವನ್ನು ವ್ಯಾಖ್ಯಾನಿಸುವಲ್ಲಿ ಮಹತ್ವದ ಬದಲಾವಣೆಯಾದುದನ್ನು ಗಮನಿಸಬಹುದು. 1975ರ ವರ್ಷವನ್ನು ವಿಶ್ವಸಂಸ್ಥೆ ಮಹಿಳಾವರ್ಷ ಎಂದು ಘೋಷಿಸಿದ ಹಿನ್ನೆಲೆ ಕೂಡಾ ಇದಕ್ಕೆ ಕಾರಣವಿರಬಹುದು. ಮಹಿಳಾ ಕಲ್ಯಾಣದ ಧೋರಣೆಯಲ್ಲಿ ಮೊದಲು ಯೋಜನೆಗಳು ಹುಟ್ಟಿಕೊಂಡವು. ನಂತರದಲ್ಲಿ ಮಹಿಳಾ ಸಮಾನತೆ, ಹಕ್ಕುಬಾಧ್ಯತೆ, ಲಿಂಗತಾರತಮ್ಯ, ಲಿಂಗಸಮಾನತೆಯಂತಹ ಪರಿಕಲ್ಪನೆಗಳು ಹುಟ್ಟಿಕೊಂಡವು. ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ವಿವಿಧ ಮಹಿಳಾ ವಿಚಾರ ಸಂಕಿರಣಗಳು, ಅವುಗಳ ತೀರ್ಮಾನಗಳು, ಕಾರ್ಯಗಳು, ಅನುಸರಣ ಕಾರ್ಯಕ್ರಮಗಳು ಭಾರತದ ಮಹಿಳೆಯರ ಸ್ಥಾನ ಮಾನ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. 1975ರ ಮೆಕ್ಸಿಕೋ ಪ್ಲಾನ್ ಆಫ್ ಆಕ್ಷನ್, ನೈರೋಬಿ ಹಾಗೂ ಬೀಜಿಂಗ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳು ಭಾರತದ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದವು.

1975ರಲ್ಲಿ ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆ, ಹಿಂಸೆಯ ಸ್ವರೂಪ, ಆಕೆಯ ಹಕ್ಕುಬಾಧ್ಯತೆ ಕುರಿತಾಗಿ ಮಹಿಳಾ ಚಳವಳಿ ಎತ್ತಿದ ಪ್ರಶ್ನೆಗಳು ಪ್ರಭುತ್ವಕ್ಕೆ ಸವಾಲಾಗಿದ್ದರಿಂದ 1990ರಲ್ಲಿ ಮಹಿಳೆಯರಿಗೆ ಸಂವಿಧಾನಬದ್ಧ ಹಕ್ಕನ್ನು ನೀಡುವ ನಿಟ್ಟಿನಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ಪ್ರಾರಂಭಿಸಲಾಯಿತು. ಸಂವಿಧಾನದ ಆಶಯದ ಹಿನ್ನೆಲೆಯಲ್ಲಿ ಮಹಿಳೆಯರ ಅಸ್ತಿತ್ವವನ್ನು ವ್ಯಾಖ್ಯಾನಿಸಲು ಪ್ರಯತ್ನ ನಡೆಯಿತು. ಸಾಮಾಜಿಕ ನ್ಯಾಯದ ಪರಿಕಲ್ಪನೆಯ ವ್ಯಾಪ್ತಿಯೊಳಗೆ ಮಹಿಳೆಯ ಸ್ಥಾನಮಾನವನ್ನು ಸೇರಿಸಲಾಯಿತು. ಹಾಗಾಗಿ ಕುಟುಂಬದ ಒಳಗಡೆ ಹಾಗೂ ಸಮಾಜದಲ್ಲಿ ನಡೆಯುವ ಹಿಂಸೆಯನ್ನು ಸಂವಿಧಾನಬದ್ಧ ಹಕ್ಕುಗಳ ಹಿನ್ನೆಲೆಯಲ್ಲಿ ಹೋರಾಡಲು ಕಾನೂನುಗಳಲ್ಲಿ ಹಲವಾರು ಬದಲಾವಣೆಗಳನ್ನು ತರಲಾಯಿತು. ಜೊತೆಗೆ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಅಸ್ತಿತ್ವವನ್ನು ಗುರುತಿಸುವ ಉದ್ದೇಶದಿಂದ ಹಲವಾರು ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ಅನುದಾನಿತ, ದೀರ್ಘಾವಧಿ ಯೋಜನೆಗಳನ್ನು ಕೇಂದ್ರ ಸರ್ಕಾರ ಹಮ್ಮಿಕೊಂಡಿತು. ಇದರಲ್ಲಿ

ಕೆಲವು ನಿರ್ದಿಷ್ಟ ವರ್ಷಗಳಿಗೆ ಸೀಮಿತವಾಗಿರುವಂತಹವು. ಕೆಲವು ಪುನರ್ ನವೀಕರಣಕ್ಕೆ ಒಳಗಾಗುವಂತಹವು. ಕಿಶೋರಿ ಶಕ್ತಿ ಯೋಜನೆ, ರಾಷ್ಟ್ರೀಯ ಮಹಿಳಾಕೋಶ, ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಕಲ್ಯಾಣದ ರಾಷ್ಟ್ರೀಯ ಸಂಸ್ಥೆ ಇಂತಹ ಹಲವಾರು ಯೋಜನೆಗಳಲ್ಲಿ ಮಹಿಳೆಯರನ್ನು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ತೊಡಗಿಸುವುದು ಕೇಂದ್ರ ಸರ್ಕಾರದ ಉದ್ದೇಶವಾಗಿತ್ತು.

ಆದರೆ ರಾಷ್ಟ್ರೀಯ ಅಭಿವೃದ್ಧಿಯ, ಮಹಿಳೆಯರ ಪ್ರಗತಿಯ ಹೆಸರಿನಲ್ಲಿ ಪ್ರಾರಂಭವಾದ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಇನ್ನೂ ಅನೇಕ ಯೋಜನೆಗಳಲ್ಲಿ ಗ್ರಾಮೀಣ ಹೆಣ್ಣುಮಕ್ಕಳು ನೇಮಕಗೊಂಡಿದ್ದಾರೆ. ಇಲ್ಲಿ ಕೆಲಸದ ಸ್ಪಷ್ಟ ಕಲ್ಪನೆ ಇಲ್ಲ. ವೇತನವನ್ನು ಗೌರವಧನವೆಂದು ವ್ಯಾಖ್ಯಾನಿಸಲಾಗುತ್ತದೆ. ತಳಮಟ್ಟದಲ್ಲಿ ದುಡಿಯುವ ಈ ಕಾರ್ಯಕರ್ತೆಯರು ಇತರ ನೌಕರರು ಪಡೆಯುವ ಯಾವುದೇ ಸೌಲಭ್ಯವನ್ನೂ ಪಡೆಯುವುದಿಲ್ಲ. ದಾಖಲೆಗಳನ್ನು ಇಡುವುದು, ಪೌಷ್ಟಿಕ ಆಹಾರ ತಯಾರಿಸುವುದು, ಸ್ತ್ರೀಶಕ್ತಿ ಗುಂಪುಗಳ ವ್ಯವಹಾರ ನಿರ್ವಹಣೆ, ಸಭೆಗಳಲ್ಲಿ ಭಾಗವಹಿಸುವುದು ಮುಂತಾದ ಕೆಲಸಗಳೊಂದಿಗೆ ಹೆಚ್ಚುವರಿ ಕೆಲಸವನ್ನೂ ಇವರು ಧ್ವನಿ ಎತ್ತದೇ ಮಾಡಬೇಕಾಗುತ್ತದೆ. ಗೌರವ ಧನದ ಹೆಸರಿನಲ್ಲಿ ಇವರನ್ನು ಶೋಷಿಸಲಾಗುವುದಲ್ಲದೇ, ಇವರ ಹೋರಾಟವನ್ನು ಮುರಿಯುವ ಹುನ್ನಾರಗಳನ್ನೂ ಸರ್ಕಾರಗಳು ಮಾಡುತ್ತಿರುತ್ತವೆ. ರಾಷ್ಟ್ರೀಯ ಅಭಿವೃದ್ಧಿಯ ಹೆಸರಿನಲ್ಲಿ ಮಹಿಳೆಯರ ಶ್ರಮವನ್ನು ದೋಚುವ ಇಂತಹ ಯೋಜನೆಗಳು ಪಿತೃಪ್ರಧಾನತೆಯನ್ನು ಬಲಪಡಿಸುತ್ತಲೇ ಇರುತ್ತವೆ.

1977ರಲ್ಲಿ ಗ್ರಾಮೀಣ ಪ್ರದೇಶದ ಸಣ್ಣ ಹಿಡುವಳಿದಾರರು ಹಾಗೂ ಮಹಿಳೆಯರನ್ನು ಕೇಂದ್ರೀಕರಿಸಿ ಅವರ ಬಡತನ ಹಾಗೂ ಅಪೌಷ್ಟಿಕತೆಯನ್ನು ದೂರ ಮಾಡುವ ಉದ್ದೇಶದಿಂದ ಜಾರಿಗೆ ಬಂದ ಅಂತರರಾಷ್ಟ್ರೀಯ ಕೃಷಿ ಅಭಿವೃದ್ಧಿಯ ಬಂಡವಾಳದಿಂದ 20 ವರ್ಷಗಳ ಅವಧಿಯಲ್ಲಿ 489 ಯೋಜನೆಗಳಿಗೆ ಹಣಕಾಸು ನೆರವನ್ನು ನೀಡಲಾಗಿತ್ತು. 20 ವರ್ಷಗಳ ನಂತರದಲ್ಲಿ ಈ ಯೋಜನೆಯನ್ನು ಕೈ ಬಿಡಲಾಯಿತು. ಇಂದು ರಾಯಚೂರು ಹಾಗೂ ಇತರ ಗ್ರಾಮೀಣ ಪ್ರದೇಶಗಳಲ್ಲಿ ಬಡತನಗಳಲ್ಲಿ ಬೇಯುತ್ತಿರುವ ಮಹಿಳೆಯರು ಹಾಗೂ ಅಪೌಷ್ಟಿಕತೆಯಿಂದ ಸಾಯುತ್ತಿರುವ ಮಕ್ಕಳ ಕರಾಳ ದೃಶ್ಯಗಳು ಇಂತಹ ಯೋಜನೆಗಳನ್ನು ಅಣಕವಾಡುವಂತಿವೆ. ಯೋಜನೆಗಳೊಳಗೆ ಅಂತರ್ಗತವಾಗಿರುವ ಬಂಡವಾಳಶಾಹಿತ್ವ ಹಾಗೂ ಪಿತೃ ಸ್ವರೂಪದ ಹಿಡಿತಗಳಿಗೆ ಇವು ಉದಾಹರಣೆಗಳಾಗಿವೆ.

ಗ್ರಾಮೀಣ ಕೃಷಿ ಕಾರ್ಮಿಕರಿಗೆ, ವಿಶೇಷವಾಗಿ ಮಹಿಳೆಯರಿಗೆ ಹೆಚ್ಚಿನ ಪ್ರಾಮುಖ್ಯ ನೀಡಬೇಕಾಗಿದ್ದ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಕೂಡಾ ವಿಫಲವಾಗಿದೆ. ಗುಲ್ಬರ್ಗ, ರಾಯಚೂರು, ಗದಗ್ ಜಿಲ್ಲೆ ಹಾಗೂ ಇತರ ಗ್ರಾಮೀಣ ಪ್ರದೇಶಗಳಿಂದ ಗಂಡಸರು, ಮಹಿಳೆಯರು, ಮಕ್ಕಳು ಬೆಂಗಳೂರಿಗೆ ಗುಳೆ ಬಂದು ಕಟ್ಟಡ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ರಾಜಕೀಯ ಪ್ರಭಾವ ಹೊಂದಿರುವ ವ್ಯಕ್ತಿಗಳು ಮಹಿಳೆಯರ ಉದ್ಯೋಗದ ಕಾರ್ಡ್‌ಗಳನ್ನು ಇಸಿದುಕೊಂಡು ಜೆಸಿಬಿ ಯಂತ್ರದಿಂದ ಕೆಲಸ ಮಾಡಿಸಿ, ಹಣವನ್ನು ತಾವು ಪಡೆದುಕೊಳ್ಳುವ ನಿದರ್ಶನಗಳೂ ನಮ್ಮ ಮುಂದಿವೆ.

33% ಮೀಸಲಾಯ್ತಿಯಿಂದಾಗಿ ಗ್ರಾಮ, ಜಿಲ್ಲೆ, ನಗರ ಪಂಚಾಯ್ತಿಗಳಲ್ಲಿ ಇಂದು ಮಹಿಳೆಯರ ಸಂಖ್ಯೆ ಅಧಿಕವಾಗುತ್ತಿದೆ. ಇವರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ತರಬೇತಿ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿತು. ಈ ತರಬೇತಿಯನ್ನು ಒಂದು ಹಂತದಲ್ಲಿ ಮಾತ್ರ ನೀಡಲಾಯಿತು. ಅಲ್ಲಿಗೆ ಅವರ ಸಬಲೀಕರಣದ ಕಾರ್ಯಕ್ರಮ ಕೊನೆಗೊಂಡಿತು. ಬಹುತೇಕ ಪಂಚಾಯಿತಿಗಳಲ್ಲಿ ಮಹಿಳೆಯರು ರಬ್ಬರ್‌ಸ್ಟ್ಯಾಂಪುಗಳು ಮಾತ್ರ. ರಾಜಕೀಯ ಇಚ್ಛಾಶಕ್ತಿ, ಬದ್ಧತೆ, ವಿಚಾರಧಾರೆ ಇರದ ಇಂತಹ ಯೋಜನೆಗಳು ಮಹಿಳೆಯರು ತಮ್ಮ ಹೊಸ ಪಾತ್ರಗಳನ್ನು ಕೂಡಾ ಕುಟುಂಬದ ಮೌಲ್ಯಗಳ ನೆರಳಿನಲ್ಲಿಯೇ ನಿರ್ವಹಿಸಬೇಕೆಂದು ನಿರೀಕ್ಷಿಸುತ್ತಿರುತ್ತವೆ. ಅಧಿಕಾರದಲ್ಲಿರುವ ಒಂದು ಪಕ್ಷ ಸ್ತ್ರೀಶಕ್ತಿ ಗುಂಪುಗಳಿಂದ ಮಹಿಳೆಯರ ಸಬಲೀಕರಣದ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ, ನಂತರ ಗದ್ದುಗೆ ಏರುವ ಸರ್ಕಾರ ಸ್ತ್ರೀ ಶಕ್ತಿಯನ್ನು ಬದಿಗೊತ್ತರಿಸಿ, ತಾಳೀಭಾಗ್ಯ, ಸೀರೆಭಾಗ್ಯ ಹೀಗೇ ಭಾಗ್ಯದ ಭಾಷೆಗಳಲ್ಲಿ ಮಹಿಳೆಯರ ಸಬಲೀಕರಣದ ಮಾತಾಡುತ್ತದೆ. ಈಗ ಮಹಿಳೆಯರಿಗೆ ಸಾರ್ವಜನಿಕ ವಿವಾಹದಂತೆ, ಸಾರ್ವಜನಿಕ ಸೀಮಂತ ಕಾರ್ಯಕ್ರಮಗಳನ್ನು ನಡೆಸಿಕೊಡಲು ರಾಜಕಾರಣಿಗಳು ಮುಂದಾಗಿ ಮಹಿಳಾ ಸಬಲೀಕರಣದ ಅರ್ಥವನ್ನು ಹಿಗ್ಗಾಮುಗ್ಗಾ ಎಳೆಯತೊಡಗಿದ್ದಾರೆ. ಹೀಗೆ ಪ್ರಭುತ್ವದ ಭಾಷೆ, ಯೋಜನೆ, ವಿಷನ್‌ಗಳಲ್ಲಿ ಮಹಿಳಾ ಸಬಲೀಕರಣ ಅಂತರ್ಗತವಾಗಿದೆ ಎಂಬ ಹುಸಿ ಚಿತ್ರಣದ ಬಗ್ಗೆ ಮಹಿಳೆ ಸದಾ ಎಚ್ಚರದಿಂದ ಇರಬೇಕು. ಮಹಿಳಾ ಹಕ್ಕಿನ ಹೋರಾಟದ ಮೊನಚನ್ನು ಮೊಂಡುಗೊಳಿಸುವ ಇಂತಹ ಪ್ರಯತ್ನಗಳನ್ನು ನಿರಾಕರಿಸುವುದು ಮುಖ್ಯ. ●

ಒಳಗಿನ ಪುಟಗಳಲ್ಲಿ....

ಈ ಸಂಚಿಕೆಯ ಪ್ರಾಯೋಜಕರು:
ಸವಿತಾ ಶೆಟ್ಟಿ
ಮಮತಾ ಜಿ. ಸಾಗರ
ವಿ.ಎನ್. ಆರತಿ

ಓದುಗರಲ್ಲಿ ಮನವಿ

ಜಾಗತೀಕರಣದ ಇಂದಿನ ಸಂದರ್ಭದಲ್ಲಿ 'ನಮ್ಮ ಮಾನಸ'ದಂತಹ ಸಣ್ಣ ಪತ್ರಿಕೆಗೆ ಓದುಗರೇ ಜೀವಾಳ. ಪತ್ರಿಕೆಗೆ ಚಂದಾದಾರರಾಗುವ ಮೂಲಕ ಹಾಗೂ ಈ ವರ್ಷದ ಚಂದಾ ನವೀಕರಿಸುವ ಮೂಲಕ ಪತ್ರಿಕೆಯ ಪ್ರಕಟಣೆಗೆ ಸಹಕಾರ ನೀಡಿ.



ಪ್ರಜಾಪ್ರಭುತ್ವದ ಸವಾಲುಗಳು ಸ್ತ್ರೀವಾದದ ಮಿತಿಗಳೇ?

■ ಸರಸ್ವತಿ ಕೆ.ಬಿ.

'ಪ್ರಜೆ'ಯ ಪ್ರಭುತ್ವವು ಹೆಚ್ಚು ಹೆಚ್ಚಾಗಿ ತಲ್ಲಣಗಳಿಗೆ ಒಳಪಡುತ್ತಿರುವ ಈ ಸಂದರ್ಭದಲ್ಲಿ ಸ್ತ್ರೀವಾದಗಳ ಆತ್ಮಾವಲೋಕನ ಅವಶ್ಯ. ಭಾರತದಂತಹ ಬಹು ಸಂಸ್ಕೃತಿಯ ಬದುಕಿನಲ್ಲಿ ಸ್ತ್ರೀಯನ್ನು ಏಕವಾಗಿ ಗ್ರಹಿಸುವುದು ಕಠಿಣ. ಈ ಬರಹವು ಪ್ರಜಾಪ್ರಭುತ್ವದ ಸವಾಲುಗಳು ಹೇಗೆ ಸ್ತ್ರೀವಾದಗಳಿಗೂ ಮಿತಿಗಳಾಗಿರುತ್ತವೆ ಎಂದು ಓದಲು ಪ್ರಯತ್ನಿಸುತ್ತದೆ.

ಭಾಷಾ ಸಂದಿಗ್ಧತೆಗಳು

ಭಾಷೆ ಎಂಬುದು ನಮ್ಮ ಬದುಕಿನ ಅಭಿವ್ಯಕ್ತಿಯೆಂಬುದು ಎಷ್ಟು ಸತ್ಯವೊ, ಭಾಷೆಯ ಭಾವಕ್ಕೆ ನಿಲುಕದ ಅನೇಕ ಜನಸ್ಪಂದಗಳಿರುವುದೂ ಅಷ್ಟೇ ಸತ್ಯ. ಪ್ರಭುತ್ವದ ಭಾಷೆಗೆ ಮೌನದ ನೆರಳು ಗ್ರಹೀತವಾಗುವುದು ಸುಲಭವಲ್ಲ. ಪರಿಧಿಗೆ ತಳ್ಳಲ್ಪಟ್ಟ ಅನೇಕ ಅಸ್ತಿತ್ವಗಳು, ಉದಾ: ಕಾಡು, ನದಿ, ಸಸ್ಯ-ಪ್ರಾಣಿಗಳು, ಬಡವರು ಮತ್ತು ಮಹಿಳೆಯರು ಮೌನಕ್ಕೆ ಶರಣಾಗುತ್ತಾರೆ. ಮೌನದ ಈ ಅಭಿವ್ಯಕ್ತಿಯು ಪುರುಷಾಧಿಕಾರದ/ಪ್ರಭುತ್ವದ ಕೈಯಲ್ಲಿ ಸಮ್ಮತಿಯ ಲಕ್ಷಣವಾಗಿ, ಲಜ್ಜೆಯ ಉಪಮೆಗಳಾಗಿ, ನಯವಾಗಿ ಪಕ್ಕಕ್ಕೆ ಸರಿಸಲ್ಪಟ್ಟಿದೆ. ಈ ಮೌನವು ಒಂದು ಭಾಷೆ. ಆ ಚಿಹ್ನೆಯಲ್ಲಿ ಈ ಎಲ್ಲಾ ಅಸ್ತಿತ್ವಗಳ ಹಸಿವು, ಮಾನಾಪಮಾನಗಳು, ಬೇಕು-ಬೇಡಗಳು, ನ್ಯಾಯ-ಅನ್ಯಾಯಗಳು ಮಾತಿನ ಅಲಂಕಾರವಿಲ್ಲದೆ, ಚಿಹ್ನೆಯಾಗಿ, ಪ್ರಕ್ರಿಯೆಗಳಾಗಿ ಕಾಣಿಸುತ್ತಿರುತ್ತವೆ. ಪ್ರಜಾಪ್ರಭುತ್ವವು ರಾಷ್ಟ್ರಲಾಂಛನದ ಅಡಿಯಲ್ಲಿ ಏಕಭಾಷಾ ಸ್ವಾಮ್ಯಕ್ಕೆ ಒಳಪಡುವುದರಿಂದ ಬಹುಸಂಜ್ಞಾ ರೂಪಗಳು ಭಾಷಾವಲಯದ ಹೊರಗೆ ಉಳಿದುಬಿಡುತ್ತವೆ. ಇವುಗಳನ್ನು ಓದಲು ಬೇಕಾದ ಸಂವೇದನೆಯನ್ನು ಉಳಿಸಿಕೊಳ್ಳದ ಪ್ರಭುತ್ವವು ಇವರೆಲ್ಲರ ಇರುವಿಕೆಯನ್ನು ಇಲ್ಲವಾಗಿಸುತ್ತದೆ.

ಸ್ತ್ರೀವಾದೀ ಚಿಂತನೆಗಳಿಗೆ ಸವಾಲಾಗಿರುವುದು ಈ ಮೌನವನ್ನು ಅದರೆಲ್ಲಾ ಸಂಕಥನದೊಂದಿಗೆ ವಿವರಿಸಿಕೊಳ್ಳುವುದೇ ಆಗಿದೆ.

ಕುರುಡು ಪ್ರಜ್ಞೆ ಮತ್ತು ಆತ್ಮವಂಚನೆ V/s ವಾಸ್ತವತೆ

ಮಾಧ್ಯಮದ ವರ್ಚುಯಲ್ ಆವರಣವು ಕಾರ್ಪೊರೇಟ್ ಜಗತ್ತಿಗೆ ಪೂರಕವಾಗಿ ಕುರುಡು ಪ್ರಜ್ಞೆಯನ್ನು ಸೃಷ್ಟಿಸುವಲ್ಲಿ ನಿರತವಾಗಿದೆ ಹಾಗೂ ಯಶಸ್ವಿಯಾಗಿದೆ. ಮಾರ್ಕ್ಸ್ ವಿವರಿಸುವ ಹಾಗೆ ವ್ಯಕ್ತಿಯೊಬ್ಬ ತಾನು ತೊಡುವ ಅಂಗಿ ಮತ್ತು ಅದಕ್ಕಾಗಿ ತಾನು ಪಾವತಿಸುವ ಹಣ ಇವುಗಳ ನಡುವೆ ಮೌಲ್ಯ ಸಂಬಂಧವನ್ನಷ್ಟೇ ಪರಿಗಣಿಸುತ್ತಾನೆಯೇ ಹೊರತು ಆ ಅಂಗಿಯ ತಯಾರಿಕೆಯಲ್ಲಿ ಬಳಕೆಯಾದ ಮಾನವ ಶ್ರಮವನ್ನಲ್ಲ. ತನ್ನ ಬಳಿ ಇರುವ ದುಬಾರಿ ವಸ್ತು ತನ್ನ ಸಾಮಾಜಿಕ ಸ್ಥಾನ-ಮಾನವನ್ನು (ಅದರ ತಯಾರಿಕೆಯ ಹಿಂದೆ ಇರುವ ಮಾನವ ಶ್ರಮ-ಸಂಬಂಧವನ್ನು ನಿರ್ಲಕ್ಷಿಸಿ) ನಿರ್ಧರಿಸುವುದರಿಂದ ತಾನು ಬಾಳುವ ಬದುಕು ತನ್ನ ಯೋಗ್ಯತೆಗನುಗುಣವಾಗಿ ಇದೆ ಎಂಬ ಕುರುಡು ಪ್ರಜ್ಞೆಯಲ್ಲಿ ಜೀವಿಸತೊಡಗುತ್ತಾನೆ. ಶ್ರಮದ ಲಾಭವನ್ನು ಅನುಭವಿಸುವವನೂ ಮತ್ತು ಶ್ರಮಿಕನ ನಡುವಿನ ಸಾಮಾಜಿಕ ಸಂಬಂಧ ಸಹಜ ನಿಯಮದಂತಾಗುವುದರಿಂದ ಮೌಲ್ಯವು ಹಣವಿರುವವನ ಬಳಿಯೇ ಇರುವಂತೆ ಭಾಸವಾಗುವುದಲ್ಲದೆ ಅದೇ ಯೋಗ್ಯವೆಂದು ಸ್ಥಾಪಿತವಾಗುತ್ತದೆ. ಈ ಕುರುಡು ಪ್ರಜ್ಞೆಯು ಮಾಡುವ ಅವಾಂತರಗಳು ಒಂದೆರಡಲ್ಲ. Brand ಮಾಡುವುದು ಒಂದು ಮಾದರಿ. ಪ್ರಕೃತಿಯು ನೀಡುವ ನೈಸರ್ಗಿಕ ವಸ್ತುಗಳೆಲ್ಲವೂ ನಮ್ಮಿಂದಲೇ ದೊರೆಯುತ್ತಿರುವುದಾಗಿಯೂ ಹಾಗೂ ಅದನ್ನು ಬಳಸುವ



ಗ್ರಾಹಕನು ಅದನ್ನು ಅನುಭವಿಸಲು ತಕ್ಕವನೆಂದೂ ಸಮರ್ಥಿಸುತ್ತಾ, ಜಗತ್ತೆಲ್ಲಾ ನಡೆಯುತ್ತಿರುವುದು ತಮ್ಮಿಂದಲೇ ಎಂಬ ಭಾವವನ್ನು ಕಾರ್ಪೊರೇಟ್ ವಲಯ ಮೂಡಿಸುತ್ತದೆ. ತಂಪಾದ ಗಾಳಿ ಬೀಸುವುದು Khaitan ಫ್ಯಾನ್‌ನಿಂದ, ಅಕ್ಕಿ ದೊರೆಯುವುದು Embee ಯಿಂದ, ನೀರು ದೊರೆಯುವುದು Bisleri ಯಿಂದ ಇತ್ಯಾದಿ. ಪ್ರಕೃತಿ ಮತ್ತು ಶ್ರಮಿಕನನ್ನು ಗ್ರಾಹಕನಿಂದ ಬೇರೆ ಮಾಡುವ ಈ ತಂತ್ರವು ವರ್ಗ ತಾರತಮ್ಯವನ್ನು ಸೃಷ್ಟಿಸುವುದಲ್ಲದೆ, ಭಾಗಿಗಳಾಗಿರುವ ವರ್ಗಗಳಿಗೂ ಸಹ ಪರಕೀಯತೆ ತಮ್ಮಿಂದ ಉಂಟಾಗುತ್ತಿದೆ ಎಂದು ತಿಳಿಯದಂತೆ ಅಜ್ಞಾನದಲ್ಲಿ ಇರುವಂತೆ ವ್ಯವಹರಿಸಲಾಗುತ್ತದೆ.

ವಾಸ್ತವವನ್ನು ಮರೆಸುವ ಆತ್ಮವಂಚನೆಯ ಈ ಬದುಕಿಗೆ ಸುಲಭವಾಗಿ ಈಡಾಗುವುದು ಮಹಿಳೆಯರು.

ಆಧುನಿಕತೆ ಮತ್ತು ಸಂಪ್ರದಾಯ V/s ಬಹುವೈವಿಧ್ಯ

ಭಾರತೀಯ ಪ್ರಭುತ್ವವು ಏಕಕಾಲಕ್ಕೆ ಆಧುನಿಕತೆಯನ್ನೂ, ಸಂಪ್ರದಾಯ ಬದ್ಧತೆಯನ್ನೂ ಹೊಂದಿರುವಂತೆ ತೋರುತ್ತಿದೆ. ಬಹು ಅಸ್ತಿತ್ವಗಳನ್ನು ಏಕ ಕಾಲಕ್ಕೆ ಬಾಳುತ್ತಿರುವಂತೆ ಅನಿಸುತ್ತಿದೆ. ಹಿಂದೂ ರಾಷ್ಟ್ರವಾಸಿಯಾಗಿ ಸನಾತನ ಸಂಸ್ಕೃತಿಯ ರಕ್ಷಕನಾಗಿ ಮತಾಂಧತೆಯನ್ನು ಹೊದ್ದು ರಾಷ್ಟ್ರಪ್ರೇಮವನ್ನು ಆಚರಿಸುವುದು, ತನ್ಮೂಲಕ ಹಿಂದೂ ಸಂಪ್ರದಾಯವನ್ನು ಕಾಯುವವರೆಂದು ಹೇಳಿಕೊಳ್ಳುವ ಹಿಂದೂ ಮತಾಂಧರು ಭಾರತ ಭೂಮಿ, ನೆಲ, ಜಲವನ್ನು ಎಂ.ಎನ್.ಸಿ.ಗಳಿಗೆ ಅಥವಾ ಎಸ್.ಇ.ಜೆಡ್. ಗಳಿಗೆ ಮಣೆ ಹಾಸುತ್ತಾ ಆಧುನಿಕರೆನಿಸುತ್ತಾರೆ. ಗೋರಕ್ಷಣೆಯ ಮಾತನ್ನಾಡುತ್ತಲೇ ರೈತರಿಂದ ಭೂ ಹಕ್ಕನ್ನು ಕಿತ್ತುಕೊಂಡು ಅಭಿವೃದ್ಧಿಯ ನಾಂದಿ ಹಾಡುತ್ತಾರೆ.

ಭೂ ಹಕ್ಕು ನಾಶವಾದರೆ ಅನೇಕ ರೈತಾಪಿ ಮಹಿಳೆಯರು ಸ್ವಾವಲಂಬನೆಯ ಬದುಕನ್ನು ತ್ಯಜಿಸಿ ಗಾರ್ಮೆಂಟ್‌ಗಳಲ್ಲಿ ಕೂಲಿಗಳಾಗಿ, ವೇಶ್ಯೆಯರಾಗಿ, ನಗರೀಕರಣದ ಎಲ್ಲಾ ಅನಿಷ್ಟಗಳಿಗೆ ತೆರೆದುಕೊಳ್ಳುತ್ತಾ ಬದುಕು ಸವೆಸಬೇಕಾಗುತ್ತದೆ. ಅವರೆಲ್ಲಾ ತಮ್ಮ ತಮ್ಮ ಸಾಂಸ್ಕೃತಿಕ ವೈವಿಧ್ಯವನ್ನು ಮರೆತು ಜೀವಂತ ಶವಗಳಂತೆ ಬದುಕುವುದು ಅನಿವಾರ್ಯವಾಗುತ್ತದೆ.

ಪ್ರತಿನಿಧೀಕರಣ, ಐಡೆಂಟಿಟಿ ಮಿಥ್‌ಗಳು, ಜಾತಿರಾಜಕಾರಣ V/s ಬಹುಸಂಸ್ಕೃತಿಗಳು


ಪ್ರಜಾಪ್ರಭುತ್ವವು ಪ್ರತಿನಿಧಿಗಳ ಆಯ್ಕೆಯ ಮೂಲಕ ಕಾರ್ಯ ನಿರ್ವಹಿಸುತ್ತದೆ. ತಮ್ಮ ಆಯ್ಕೆ ತಮ್ಮೆಲ್ಲಾ ಕಷ್ಟ-ಸುಖಗಳನ್ನು ಅರಿಯಬಲ್ಲದು ಎಂದೇ ಮುಗ್ಧವಾಗಿ ನಂಬುತ್ತದೆ. ಪ್ರತಿನಿಧಿಯಾಗ ಬೇಕಾದ ವ್ಯಕ್ತಿ ನಿಧಾನವಾಗಿ ಸಮುದಾಯವನ್ನು ನಿರ್ಲಕ್ಷಿಸಿ ಸ್ವಾರ್ಥಿ ಯಾಗುವುದನ್ನು ಪ್ರಜೆಗಳು ಸಹಿಸಬೇಕಾಗುತ್ತದೆ. ಪ್ರತಿನಿಧಿಯು ತನ್ನ ಜಾತಿ, ಪಂಗಡದ ಐಡೆಂಟಿಟಿಯ ಮುದ್ರೆ ಹೊತ್ತು ಗುಂಪುಗಾರಿಕೆಯಲ್ಲಿ ತೊಡಗುವ ಕ್ರಿಯೆಯು ಪ್ರತಿನಿಧಿಯನ್ನು ಇಲ್ಲವಾಗಿಸಿ ಜಾತಿನಾಯಕ ನೊಬ್ಬನನ್ನು ರೂಪಿಸುವುದಲ್ಲದೆ, 'ಪ್ರಜೆ'ಯನ್ನು ಇಲ್ಲವಾಗಿಸಿ ಜಾತಿಯ ಚೇಲನನ್ನು ಸೃಷ್ಟಿಸುತ್ತದೆ. ವೋಟ್ ಬ್ಯಾಂಕ್ ರಾಜಕಾರಣವು ಪ್ರಜಾಪ್ರಭುತ್ವದ ಲಕ್ಷಣವಾಗುತ್ತದೆ!

ಪ್ರಜೆಯಾದವನಿಗೆ ಬಹುಸಂಸ್ಕೃತಿಗಳೊಡನೆ ಸಹಬಾಳ್ವೆ ಸಾಧ್ಯ. ಆದರೆ ಯಾವುದೋ ಒಂದು ಜಾತಿಯ ಹಿಂಬಾಲಕನಿಗೆ ಅನ್ಯಜಾತಿಯವನು ಶತ್ರು / ಅನ್ಯನಾಗದೆ ಹೇಗೆ ಉಳಿದಾನು? ಈ ಪರಕೀಯತೆ / ಅನ್ಯತೆ ಪ್ರಜಾಪ್ರಭುತ್ವಕ್ಕೆ ಮಾರಕ.

ಜಾತಿ ಸಂಘರ್ಷಗಳಲ್ಲಿ ತೀವ್ರವಾಗಿ ಹಿಂಸೆ ಅನುಭವಿಸುವವಳು ಮಹಿಳೆಯೇ. ಪ್ರಜೆಯಾದಾಗ ಇರುವ ತನ್ನ ಹಕ್ಕನ್ನು (ಸಮಾನತೆ, ಶಿಕ್ಷಣ, ವಿವಾಹದ ಆಯ್ಕೆ ಇತ್ಯಾದಿ) ಆಕೆ ಕಳೆದುಕೊಳ್ಳುತ್ತಾಳೆ. ತನ್ನ ಜಾತಿ/ಪಂಗಡದ ಐಡೆಂಟಿಟಿಯನ್ನು ಬಲವಂತವಾಗಿ ಉಳಿಸಿಕೊಳ್ಳಲು ಹೆಣಗುತ್ತಾಳೆ. ಬದುಕಿನ ಐಡೆಂಟಿಟಿಯೆಂಬುದು ಹರಿಯುವ ನೀರಿನ ಹಾಗೆ; ಯಾವುದೋ ಒಂದು ನಿಶ್ಚಿತ ಪಾತ್ರಕ್ಕೆ ಅಂಟಿಕೊಳ್ಳುವುದೆಂದರೆ ಬಾಳಿನ ಅಂದವನ್ನು ಕೆಡಿಸಿಕೊಂಡಂತೆಯೇ. ಬದುಕಿನ ಅನೇಕ ಸ್ತರಗಳು ಹೊಸ-ಹೊಸ ಕಲಿಕೆಗಳ ಮೂಲಕ ಭಿನ್ನ ಭಿನ್ನ ಗುರುತನ್ನು ವ್ಯಕ್ತಿತ್ವಕ್ಕೆ ಹಚ್ಚುತ್ತಿರುತ್ತವೆ. ಈ ಹೊಸ ಹೊಸ ಬಣ್ಣಗಳನ್ನು ಹೊದೆಯದೆ ಬಾಳುವುದೆಂದರೆ...? ಐಡೆಂಟಿಟಿ ಎಂಬುದು ಒಂದು ಮಿಥ್ಯವೇ ಸರಿ.

ಪ್ರಜಾಪ್ರಭುತ್ವದ ಈ ಸುಳಿಗಳು ಮಹಿಳೆಯರನ್ನು ಹೆಚ್ಚು ಹೆಚ್ಚು ಸೆಳೆಯುತ್ತಿವೆ. ನಾವು ಪ್ರಜೆಗಳ ಪ್ರಭುತ್ವವನ್ನು ಒಗ್ಗಿಸಿಕೊಳ್ಳಬೇಕೆಂದರೆ, ಈ ಸಿಕ್ಕುಗಳನ್ನು ಬಿಡಿಸಿಕೊಳ್ಳುವುದಲ್ಲದೆ ಬೇರೆ ದಾರಿಯಿಲ್ಲ. ❑

ಕರ್ನಾಟಕ ರಾಜ್ಯ ಸರ್ಕಾರವು ಲೇಖಕಿಯರ ಸಾಧನೆಯನ್ನು ಗುರುತಿಸಿ ನೀಡುವ ಅತ್ಯುನ್ನತ ಪ್ರಶಸ್ತಿಯೆನಿಸಿರುವ 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ'ಯು ಶ್ರೀಮತಿ ಶಾಂತಾದೇವಿ ಕಣವಿ ಹಾಗೂ ಶ್ರೀಮತಿ ಸುಧಾಮೂರ್ತಿ ಅವರಿಗೆ (2 ವರ್ಷಗಳ ಪ್ರಶಸ್ತಿ) ಸಂದಿದೆ. 'ನಮ್ಮ ಮಾನಸ' ಪತ್ರಿಕಾ ಬಳಗವು ಇವರನ್ನು ಅಭಿನಂದಿಸುತ್ತದೆ.



'ಹೆಣ್ಣು ಬರೆಹದ ಒಳಬಂಡಾಯ'– ಒಂದು ಅನಿಸಿಕೆ

■ ಚಂಪಾವತಿ ಎಚ್.ಎಸ್.

ಶ್ರೀಮತಿಯವರ ಈ ಕೃತಿ ಕನ್ನಡದ ಓದುಗರಿಗೆ ಮುಖ್ಯವಾಗುವುದು ಹಲವಾರು ಕಾರಣಗಳಿಂದ. ಒಳಬಂಡಾಯ ಎನ್ನುವ ಶೀರ್ಷಿಕೆಯೇ ಹೆಣ್ಣಿನ ಬದುಕಿನ ಲಯಗಳನ್ನು, ಮೌನವನ್ನು, ಮೌನದ ನಡುವಿನ ಭಾಷೆಯನ್ನು, ಭಾಷಾರಹಿತ ಹೋರಾಟವನ್ನು ವಿಸ್ತರಿಸಿ ಹೇಳುವ ಒಂದು ತಾತ್ತ್ವಿಕ ಕಲ್ಪನೆಯಾಗಿದೆ. ಈ ತಾತ್ತ್ವಿಕ ಚೌಕಟ್ಟನ್ನು ಹೆಣ್ಣಿನ ನಿತ್ಯ ಬದುಕಿನಲ್ಲಿ ಹೇಗೆ ಕಾಣಬಹುದೋ ಹಾಗೆಯೇ ಹೆಣ್ಣಿನ ಬರಹಗಳಲ್ಲಿಯೂ ಕಾಣಬಹುದು ಎಂಬುದು ಲೇಖಕಿಯ ಗ್ರಹಿಕೆ. 'ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ' – ಕನ್ನಡೀಕರಿಸಿದ ಈ ಪುಸ್ತಕದ ಪ್ರಸ್ತಾವನೆ ಈ ಸಂಕಲನದ ಮೊದಲನೆಯ ಲೇಖನ. ಇದರಲ್ಲಿ ಭಾಷೆಯು ಹೆಣ್ಣಿನ ಬದುಕು ಹಾಗೂ ಬರಹದ ಮೇಲೆ ಉಂಟುಮಾಡಿರುವ ಸಂಚಲನವನ್ನು ಶ್ರೀಮತಿಯವರು ಚರ್ಚಿಸುತ್ತಾರೆ. ಸ್ತ್ರೀವಾದಿ ಭಾಷಾಶಾಸ್ತ್ರ ಸ್ತ್ರೀವಾದದ ಹರಹನ್ನು ಭಾಷಿಕ ನೆಲೆಯಲ್ಲಿ ಪರೀಕ್ಷಿಸುವುದಲ್ಲದೇ, ಪರಿಷ್ಕರಿಸುವ ಕೆಲಸವನ್ನೂ ಮಾಡಿದೆ. ಅಸಮಾನತೆಯ ಸ್ವರೂಪವನ್ನು ಭಾಷೆಯ ವ್ಯವಸ್ಥೆಯಲ್ಲಿ ಗುರುತಿಸಿರುವ ಸ್ತ್ರೀವಾದ ಅಸಮಾನ ಸಾಮಾಜಿಕ ನೆಲೆಗಟ್ಟಿನ ಜೊತೆ ಭಾಷೆ ತಳಕು ಹಾಕಿಕೊಂಡಿರುವುದನ್ನು ಹಾಗೂ ಅದಕ್ಕಿರುವ ಚಾರಿತ್ರಿಕ ಬೇರುಗಳನ್ನು ಶೋಧಿಸಿದೆ. ತನ್ನ ಚಿಂತನೆಯ ಚೌಕಟ್ಟಿನಲ್ಲಿ ಸ್ತ್ರೀವಾದ ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ, ಗಂಡು ಹೆಣ್ಣುಗಳ ನಡುವಣ ತಾರತಮ್ಯಗಳನ್ನು ಭಾಷೆಯು ಕಾಯ್ದಿಡುತ್ತಿರುವ ಬಗೆಗಳ ವಿಶ್ಲೇಷಣೆಗಳ ಜೊತೆಗೇ ಭಾಷೆಯ ಬಳಕೆಯಲ್ಲಿ ಆಗಬೇಕಾದ ಪರಿವರ್ತನೆಯ ಬಗ್ಗೆಯೂ ಗಮನ ಹರಿಸುತ್ತಿದೆ ಎಂಬುದರ ಬಗ್ಗೆ ಶ್ರೀಮತಿಯವರು ಈ ಪ್ರಸ್ತಾವನೆಯಲ್ಲಿ ಚರ್ಚಿಸುತ್ತಾರೆ.

ಕನ್ನಡದಂತಹ ಭಾಷಾ ಸಂಸ್ಕೃತಿಯಲ್ಲಿ ನಡೆಯುತ್ತಿರುವ ದೇಶೀ ಬೇರುಗಳ ಚರ್ಚೆಯ ಮೇಲೆ ಬೆಳಕು ಚೆಲ್ಲುವ ಲೇಖಕಿ ಸ್ತ್ರೀವಾದ ಎದುರಿಸುತ್ತಿರುವ ಪಾಶ್ಚಾತ್ಯ ಪ್ರಭಾವದ ಆರೋಪ ಕುರಿತು ಮಾತನಾಡುತ್ತಾರೆ. ದಿಟವಾದ ಸ್ತ್ರೀವಾದಿ ಚಿಂತನೆಗಳ ಪ್ರಕ್ರಿಯಾತ್ಮಕ ಹಾದಿಯನ್ನು ಪರಿಚಯ ಮಾಡಿಕೊಡುವ ಬಗೆಯನ್ನು ತಾವು ಆಯ್ಕೆ ಮಾಡಿಕೊಂಡಿದ್ದರಿಂದಲೇ ಪಾಶ್ಚಾತ್ಯ ಮಾದರಿಗಳ ನೇರ ಅನುವಾದಕ್ಕೆ ತಾವು ತೊಡಗಿಸಿಕೊಳ್ಳಬೇಕಾಯಿತು ಎಂದು ಕೂಡಾ ಅವರು ನುಡಿಯುತ್ತಾರೆ. ದೇಸೀ ಚಿಂತನೆಯ ಅಪಬಳಕೆ, ಹುಸಿ ಸ್ತ್ರೀವಾದದ ತಿರುಳಿಲ್ಲದ ವಾದ, ವಿಜೃಂಭಣೆ, ಸ್ನೇಹಮಯಿ ಮುಖವಾಡ ಹೊತ್ತು ಬರುತ್ತಿರುವ ಸ್ತ್ರೀವಾದಿ ಚಿಂತನೆಗಳ ಬಗ್ಗೆ ಕಟುವಾಗಿ ಟೀಕೆ ಮಾಡುವ ಲೇಖಕಿ ಸದ್ಯದ ವಾಸ್ತವ ಚಿತ್ರಣವನ್ನು ನಮ್ಮ ಮುಂದೆ ಬಿಚ್ಚಿ ಇಡುತ್ತಾರೆ. ಸ್ತ್ರೀವಾದಿ ಚಿಂತನೆಯು ಶುದ್ಧ ಬೌದ್ಧಿಕ ಚಟುವಟಿಕೆಯಲ್ಲ, ಅದು ಲಿಂಗ ಸಮಾನತೆಯ ನ್ಯಾಯ ಎತ್ತಿ ಹಿಡಿಯುವ ಒಂದು ರಾಜಕಾರಣದ ಚಟುವಟಿಕೆ. ಈ ನ್ಯಾಯದ ತಾತ್ತ್ವಿಕ ಕಲ್ಪನೆ ಜಾಗತಿಕ ನೆಲೆಯ ಮಹಿಳಾ ಬದುಕಿನ ಅನುಭವಗಳ ಬಹುಮುಖಿ ಮಾದರಿಯನ್ನು ಆಧಾರವಾಗಿರಿಸಿ ಕೊಂಡಿರುತ್ತದೆ. ಹಾಗಾಗಿ ಕೂಡಾ ಪಾಶ್ಚಾತ್ಯ ಚಿಂತನೆಗಳ ಮಾದರಿಯನ್ನು ಅನುವಾದಿಸುವ ಆಯ್ಕೆ ತಾವು ಮಾಡಿಕೊಂಡುದಾಗಿ ಲೇಖಕಿ ನುಡಿಯುತ್ತಾರೆ.

ಗಾದೆಗಳ ಮೂಲಕ, ಹೇಳಿಕೆಗಳ ಮೂಲಕ, ಧ್ವನಿ, ಮಾತನಾಡುವ ಬಗೆಯನ್ನು ನಿಯಂತ್ರಿಸುವ ಮೂಲಕ ಭಾಷೆ ಹೇಗೆ ಹೆಣ್ಣನ್ನು ಪಿತೃಪ್ರಧಾನ ಚೌಕಟ್ಟಿನೊಳಗೆ ಬಂಧಿಸಲು ಪ್ರಯತ್ನಿಸುತ್ತದೆ ಎಂಬುದನ್ನು ಸ್ತ್ರೀವಾದದ ಚಿಂತನೆಗಳು ಎತ್ತಿ ತೋರಿಸುತ್ತವೆ. ಹೆಂಗಸರೂ ಕೂಡಾ ಭಿನ್ನ ನೆಲೆಗಳ ಮೂಲಕ ಪ್ರತಿರೋಧ ಒಡ್ಡುತ್ತಾರೆ. ಈ ಪ್ರತಿರೋಧಗಳು ಹಲವೊಮ್ಮೆ ಒಳಗೇ ಸಂಚಿತಗೊಳ್ಳುತ್ತಾ ಸ್ಫೋಟಗೊಳ್ಳುತ್ತವೆ ಎಂದು ಶ್ರೀಮತಿಯವರು ವಿಶ್ಲೇಷಿಸುತ್ತಾರೆ. ಭಾಷೆಯ ವಿಚಾರದಲ್ಲೂ ಇಂತಹ ಒಳಬಂಡಾಯ ಗಳನ್ನು ತೋರಿಸುವ ಮಹಿಳೆಯರು ತಮ್ಮದೇ ಭಿನ್ನ ನೆಲೆಗಳನ್ನು ಸೃಷ್ಟಿಸುತ್ತಿರುತ್ತಾರೆ ಎಂದು ಲೇಖಕಿ ನುಡಿಯುತ್ತಾರೆ. ಸೃಜನಶೀಲವಾದ ಮನಸ್ಸುಗಳು ಇಂತಹ ಪ್ರತಿರೋಧವನ್ನು, ಇಂತಹ ಒಳಬಂಡಾಯವನ್ನು ಭಾಷಿಕ ನೆಲೆಯಲ್ಲಿ ಅಭಿವ್ಯಕ್ತಿಪಡಿಸುತ್ತವೆ ಎನ್ನುವುದು ಇವರ ಅಭಿಪ್ರಾಯ.

ಭಾಷೆಯಲ್ಲಿ ಗಂಡು–ಹೆಣ್ಣುಗಳ ನಡುವೆ ಇರುವ ತಾರತಮ್ಯ, ಗಂಡಿನ ಭಾಷೆ ಅಧೀನಗೊಳಿಸುವ, ಹೆಣ್ಣಿನ ಭಾಷೆ ಸಹಕರಿಸುವ ಮಾದರಿಯಾಗಿ ರೂಪುಗೊಂಡ ಬಗೆ, ಶೈಕ್ಷಣಿಕ ವಲಯದ ಆಚೆ ಈ ಮಾದರಿಗಳು ಮಕ್ಕಳಲ್ಲಿ ಒಡಮೂಡುವ ರೀತಿ ಇಂತಹ ಪ್ರಶ್ನೆಗಳನ್ನು ಸಹ ಶ್ರೀಮತಿಯವರು ಚರ್ಚಿಸುತ್ತಾರೆ. ಒಂದು ಸಮುದಾಯದಲ್ಲಿ ಇರುವ ಭಾಷಾ ಮಾದರಿಗಳ ಒಳಸಂಬಂಧಗಳನ್ನು ಒಪ್ಪುವುದು, ಹೆಣ್ಣಿಗೆ ಆಕೆಯದೇ ಮಾದರಿ ರೂಪಿಸಿಕೊಳ್ಳುವ ಸ್ವಾತಂತ್ರ್ಯವಿರುವುದು ಮುಖ್ಯ ಎನ್ನುವ ಲೇಖಕಿ ಈ ಪ್ರಕ್ರಿಯೆ ನಡೆಯುವುದು ಸಾಮುದಾಯಿಕ ನೆಲೆಯಲ್ಲಿ ಎನ್ನುತ್ತಾರೆ.

ಹೆಣ್ಣಿನ ಕಲ್ಪನೆಯಲ್ಲಿ ಬಹುಮುಖೀ ಮಾದರಿ ಇದೆ ಎನ್ನುವ ಸ್ತ್ರೀವಾದ ಭಾಷಿಕ ನೆಲೆಯ ಸವಾಲುಗಳನ್ನು ಹೇಗೆ ಸ್ವೀಕರಿಸುತ್ತದೆ ಎಂಬುದನ್ನೂ ಸಹ ಇಲ್ಲಿ ಚರ್ಚೆಯ ನೆಲೆಗೆ ಒಡ್ಡಲಾಗಿದೆ. 'ಪ್ರಮಾಣ ಭಾಷೆ, ಉಪಭಾಷೆಯ ಬಗೆಗಿನ ವಾಗ್ವಾದ, ಉಪಭಾಷೆಯ ಹಿತ ಕಾಯುವ ಕಾರ್ಯಕ್ರಮಗಳ ನಡುವೆ ಲಿಂಗ ಸಮಾನತೆಗಾಗಿ,

ಹೆಣ್ಣು ಬರೆಹದಿಂದ....

ಸಮಾಜ ವ್ಯವಸ್ಥೆಯ ಮುಖ್ಯಲಕ್ಷಣವೇ ಆದ ಶ್ರೇಣೀಕರಣದ ಸಮಸ್ಯೆಯನ್ನು ಕುರಿತು ಚಿಂತಿಸಲು, ಚರ್ಚಿಸಲು 'ಭಾಷೆ'ಯನ್ನು ಒಂದು ಪರಿಕರವಾಗಿ ಬಳಸಲು ಸಾಧ್ಯ. ಸ್ತ್ರೀವಾದಿಗಳು ಈ ನಿಟ್ಟಿನಿಂದ ಅಧ್ಯಯನಗಳನ್ನು ನಡೆಸಿ ಹೆಂಗಸರ ಮಾತು, ಬರಹಗಳನ್ನು ಅಧ್ಯಯನ ಮಾಡಿದ್ದಾರೆ. ಮಾತು ಮತ್ತು ಬರಹಗಳು ಮೌನವಾಗುವ, ಮೂಕವಾಗುವ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ. ಹಾಗೆಯೇ ಮೇಲುನೋಟಕ್ಕೆ ಮೌನವೆನಿಸುವ, ಮೂಕವೆನಿಸುವ ಹೆಣ್ಣುದನಿಯು ತನ್ನದೇ ಆದ ವಿಧಾನಗಳಲ್ಲಿ ಒಳಬಂಡಾಯಗಳನ್ನು ರೂಪಿಸುತ್ತಾ, ತನ್ನ ದನಿಗೆ ತಾಖತ್ತನ್ನು ಒದಗಿಸಿಕೊಳ್ಳುವ ಪರಿಯನ್ನು ಗುರುತಿಸಿದ್ದಾರೆ. ಈ ಮೂಲಕ ತನ್ನ ಪ್ರತಿರೋಧವನ್ನು ಒಡ್ಡುವ, ತನ್ನ ಅಸ್ಮಿತೆಯನ್ನು ಸ್ಥಾಪಿಸುವ ಹಾದಿಗಳನ್ನು ಹೆಂಗಸು ಕಂಡುಕೊಳ್ಳಲು ಸಮರ್ಥಳಾಗಿದ್ದಾಳೆಂಬುದನ್ನು ಗುರುತಿಸಿದ್ದಾರೆ. ದಿನನಿತ್ಯದ ಮಾತುಕತೆಗಳಲ್ಲಿಯೂ ಈ ಒಳಬಂಡಾಯ ನುಸುಳಿ ಕ್ರಿಯಾಶೀಲ ಆಗಬಹುದು. ಹೆಂಗಸರ ಬರಹಗಳಲ್ಲಿಯೂ ಈ ಒಳಬಂಡಾಯದ ಚಹರೆಗಳು ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತವೆ. ಏಕೆಂದರೆ ಬರಹದ ನೆಲೆ ಎಷ್ಟೇ ಆದರೂ ಹೆಚ್ಚು ಪ್ರಜ್ಞಾಪೂರ್ವಕವಾಗಿ ತೊಡಗಿಕೊಳ್ಳುವ ಚಟುವಟಿಕೆ.

* * *

ಭಾಷಾಯೋಜನೆ ಎಂಬ ಪರಿಕಲ್ಪನೆಯೇ ಯೋಜಿತ ರೀತಿಯ ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತದೆ. ಹಾಗಿಲ್ಲದಿದ್ದರೆ, ಭಾಷಾಶಾಸ್ತ್ರಜ್ಞರು ಭಾಷಾಯೋಜನೆಯನ್ನೇ ನಿರಾಕರಿಸಬೇಕಾಗುತ್ತದೆ. ಸ್ತ್ರೀವಾದಿ ಭಾಷಾಚಿಂತಕರು ಎದುರಿಸುವ ಸಮಸ್ಯೆಯೇ ಬೇರೆ. ಅವರ ಭಾಷಿಕ ಬದಲಾವಣೆಯ ಪ್ರಸ್ತಾವಗಳು ಅಧಿಕಾರ ಕೇಂದ್ರವನ್ನು ಪ್ರಶ್ನಿಸುವ ನೆಲೆಯಲ್ಲಿ ಇರುವುದರಿಂದ, ಆ ಪ್ರಸ್ತಾವಗಳನ್ನು ವಿರೋಧಿಸುವ ಯತ್ನಗಳು ಬಲವಾಗಿಯೇ ಇರುತ್ತವೆ. ಹಾಗಾಗಿ, ಅವರ ಪ್ರಸ್ತಾವಿತ ಭಾಷಾಯೋಜನೆಗಳು ಸೋತರೆ, ಅದಕ್ಕೆ ಆ ಪ್ರಸ್ತಾವಗಳ ಅಂತಃಸಾಮರ್ಥ್ಯ ಕಾರಣವಾಗಿರದೆ, ಸಾಮಾಜಿಕ ಸನ್ನಿವೇಶಗಳ ವಿರೋಧವೇ ಕಾರಣವಾಗಿರುತ್ತದೆ. ಈ ಅಂಶವು ಸ್ತ್ರೀವಾದಿ ಭಾಷಾಚಿಂತಕರಿಗೆ ಗೊತ್ತಿದೆ.

* * *

ಸ್ತ್ರೀವಾದಿ ಭಾಷಾಚಿಂತನೆಗಳ ಕಾರ್ಯ ಯೋಜನೆಯಲ್ಲಿ ತೀವ್ರವಾದಿ ಹಂತಗಳೂ ಇವೆ. ಈ ತೀವ್ರವಾದಿ ನೆಲೆಗಳು ಭಾಷೆಯ ಬಳಕೆಯಲ್ಲಿ ಮೇಲ್‌ಸ್ತರದ ಬದಲಾವಣೆಗಳಿಂದ ಯಾವ ಪ್ರಯೋಜನವೂ ಆಗದೆಂದು ವಾದಿಸುತ್ತವೆ. ಭಾಷಾ ಸುಧಾರಣೆಗಳು ಪುರುಷ ಕೇಂದ್ರಿತ ನೆಲೆಯನ್ನು ಗುರುತಿಸಿದರೂ ಅದನ್ನು ಭಗ್ನಗೊಳಿಸಲಾರವು. ಹೆಚ್ಚೆಂದರೆ, ಸಮಾನ ಅವಕಾಶಕ್ಕಾಗಿ ಸಂಧಾನಗಳನ್ನು ನಡೆಸುವ ಹಂತದಲ್ಲಿ ನಿಂತು ಹೋಗುತ್ತವೆ. ಪುರುಷ ಪ್ರಧಾನತೆಯ ಅಹಂಗೆ ಇದರಿಂದ ಮತ್ತಷ್ಟು ಪುಷ್ಟಿಯೇ ಒದಗಬಹುದು. ಏಕೆಂದರೆ ಅವಕಾಶಗಳನ್ನು 'ನೀಡಿದ' ಹಮ್ಮು ಅಲ್ಲಿ ನಿರಂತರವಾಗಿ ಉಳಿದೇ ಇರುತ್ತದೆ. 'ಕೊಡುವ' ಗಂಡು, ಮತ್ತು 'ಪಡೆಯುವ' ಹೆಣ್ಣಿನ ಮಾದರಿಗಳು ಸ್ಥಿರಗೊಳ್ಳುತ್ತವೆ.

* * *

ಜಗತ್ತಿನ ಅತಿ ಶ್ರೇಷ್ಠ ಚಿಂತಕರಲ್ಲಿ, ತತ್ತ್ವಜ್ಞಾನಿಗಳಲ್ಲಿ, ವಾಕ್‌ಪಟುಗಳಲ್ಲಿ, ಸಂಧಾನಕಾರರಲ್ಲಿ ಹೀಗೆ ಎಲ್ಲೆಲ್ಲಿ ಭಾಷಾಸಾಮರ್ಥ್ಯಗಳು ಮುಂಚೂಣಿಯಲ್ಲಿ ಇರುತ್ತವೋ ಅಂಥ ಕಡೆಗಳಲ್ಲಿ ಹೆಂಗಸಿನ ಗೈರುಹಾಜರಿಯನ್ನು ಚರಿತ್ರೆಯುದ್ದಕ್ಕೂ ಗುರುತಿಸಲಾಗುತ್ತದೆ. ಭಾಷಾ ಕೌಶಲಗಳು ಮುಖ್ಯವಾಗಿರುವ ಸೃಜನಶೀಲ ಸಾಹಿತ್ಯಕ್ಷೇತ್ರದಲ್ಲೂ ಹೀಗೆ ಹೆಂಗಸು ತನ್ನ ಗುರುತನ್ನು ಉಳಿಸಲಾಗಿಲ್ಲ. ಇಂಥ ವಿಕಲತೆಗಳ ಆರೋಪಗಳು ಎಷ್ಟು ಬಲವಾಗಿವೆ ಎಂದರೆ, ಹೆಂಗಸರು ತಮ್ಮ ಭಾಷಿಕ ಕೊರತೆಗಳನ್ನು ತಮ್ಮ ಅಸಾಮರ್ಥ್ಯಗಳೆಂದೇ ನಂಬುತ್ತಾ ಬಂದಿದ್ದಾರೆ. ಒಮ್ಮೆಯೂ ತಮಗೆ ಬಳಸಲು ದೊರಕಿರುವ ಭಾಷೆಯೇ ಇಂಥ ವಿಕಲತೆಯ ನೆಲೆಗೆ ತಮ್ಮನ್ನು ತಳ್ಳಿರಬಹುದೆಂದು ಊಹಿಸಲು ಮುಂದಾಗಿಲ್ಲ. ತೀವ್ರವಾಗಿ ಭಾಷಾಚಿಂತಕರು ಈ ದಿಕ್ಕಿನಲ್ಲಿ ಚಿಂತಿಸಿ ಭಾಷೆ ಹೆಂಗಸಿಗೆ ತಂದಿಟ್ಟಿರುವ ಬಿಕ್ಕಟ್ಟುಗಳನ್ನು ಬಯಲಿಗೆಳೆಯಲು ತಕ್ಕ ತಾತ್ತ್ವಿಕತೆಯೊಂದನ್ನು ರೂಪಿಸಿ ಕೊಳ್ಳುತ್ತಿದ್ದಾರೆ.

* * *

ನ್ಯಾಯಕ್ಕಾಗಿ ರೂಪುಗೊಂಡ ಮಹಿಳಾ ಭಾಷಾ ಸ್ವರೂಪ ಭಿನ್ನ ನೆಲೆಯ ವಿಶ್ಲೇಷಣೆಯನ್ನು ಬಯಸುತ್ತದೆ ಎಂಬುದು ಮುಖ್ಯವಾಗುತ್ತದೆ' ಎಂದು ಲೇಖಕಿ ನುಡಿಯುತ್ತಾರೆ.

ಭಾಷೆಯಲ್ಲಿ ಅಂತಸ್ಥವಾಗಿರುವ ತಾರತಮ್ಯ ಗುರುತಿಸಿರುವ ಸ್ತ್ರೀವಾದ ರೂಪಿಸಿಕೊಂಡಿರುವ ಪರ್ಯಾಯ ಮಾದರಿಗಳ ಚರ್ಚೆಯಲ್ಲಿ ಸುಧಾರಣವಾದಿ, ತೀವ್ರವಾದಿ ನೆಲೆಗಳ ಭಾಷಾ ಸ್ವರೂಪದ ರೂಪುರೇಷೆ ಗುರುತಿಸಿರುವ ಶ್ರೀಮತಿಯವರು ಅವುಗಳಿಗೆ ಬಂದಿರುವ ಆಕ್ಷೇಪಗಳನ್ನು ಕುರಿತೂ ಚರ್ಚಿಸುತ್ತಾರೆ. ಸಾಂಸ್ಕೃತಿಯ ವಿಶಿಷ್ಟತೆ ಆಧರಿಸಿ ಹೆಣ್ಣು ಮತ್ತು ಭಾಷೆಯ ಸಂಬಂಧವನ್ನು ಸ್ತ್ರೀವಾದಿಗಳು ಚಿಂತಿಸುತ್ತಾರೆ ಎನ್ನುವ ಲೇಖಕಿ ಸಂಸ್ಕೃತಿಯ ಕುರಿತಾದ ವಾಗ್ವಾದಗಳನ್ನು, ಮಾರ್ಕ್ಸ್‌ವಾದಿ ಚಿಂತನೆಯ ಹರವುಗಳ ಬಗ್ಗೆಯೂ ಬೆಳಕು ಚಲ್ಲುತ್ತಾರೆ. ಮಹಿಳಾ ಭಾಷೆಯ ಮಾದರಿ ಬೆಳೆಯತೊಡಗಿದಾಗ ಅದು ಪುರುಷ ಪ್ರಧಾನ ಅಧಿಕಾರಕ್ಕೆ ಸವಾಲು ಹಾಕುವುದರಿಂದ ವೈರುಧ್ಯಗಳ ತಿಕ್ಕಾಟದಲ್ಲಿ ಹೊಸದೊಂದು ಸಮಾಜ, ಭಾಷೆ ಸೃಷ್ಟಿಯಾಗುತ್ತದೆ ಎಂದು ಲೇಖಕಿ ಆಶಿಸುತ್ತಾರೆ. ಸ್ತ್ರೀವಾದಿ ಭಾಷೆಯ ಕುರಿತಾದ ಈ ಪ್ರಸ್ತಾವನೆ ಕನ್ನಡದಲ್ಲಿ ಈಗ ನಡೆಯುತ್ತಿರುವ ಎಲ್ಲಾ ರೀತಿಯ ವಾಗ್ವಾದಗಳನ್ನು ಚರ್ಚಿಸುತ್ತಲೇ ಜಾಗತಿಕ ನೆಲೆಯ ಒಂದು ಸ್ತ್ರೀವಾದಿ ತಾತ್ತ್ವಿಕತೆ ಕಟ್ಟಿಕೊಡುವುದರಿಂದ ಪ್ರಮುಖ ಹಾಗೂ ಮಹತ್ವವಾದ ಲೇಖನವೆನಿಸುತ್ತದೆ.

ಎರಡನೆಯ ಪ್ರಸ್ತಾವನೆ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಗೆ ಬರೆದಂತಹದು. 'ಹೆಣ್ಣು ; ಕನ್ನಡ ಸಾಹಿತ್ಯದ ಗ್ರಹಿಕೆ'ಯಲ್ಲಿ ಸಾಹಿತ್ಯ ಕೃತಿಗಳು ನಮ್ಮ ಮುಂದೆ ಇಟ್ಟಿರುವ ಭಾಷಿಕ ಜಗತ್ತನ್ನು ಇಂದಿನ ಗ್ರಹಿಕೆಯ ಜೊತೆ ಮುಖಾಮುಖಿಯಾಗಿಸಿಕೊಳ್ಳುವ ಮಾದರಿಯನ್ನು ಅನುಸರಿಸಿದ್ದೇನೆ ಎನ್ನುವ ಲೇಖಕಿ ಇಲ್ಲಿ ಹಲವಾರು ಲೇಖಕರ ಜಗತ್ತಿನ ಮಹಿಳೆಯರ ಲೋಕವನ್ನು ವಿಶ್ಲೇಷಿಸಿದ್ದಾರೆ. ಅಕ್ಕಮಹಾದೇವಿ ಹಾಗೂ ತ್ರಿವೇಣಿ ಇಲ್ಲಿ ಚರ್ಚಿತರಾದ ಲೇಖಕಿಯರು. ಪಂಪ, ಕಾರಂತ ಹಾಗೂ ವ್ಯಾಸರಾಯಬಲ್ಲಾಳರ ಕೃತಿಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಭಕ್ತ ಕವಿಗಳಲ್ಲಿ ಮಹಿಳೆಯರು ಹಾಗೂ ಪುರುಷರಲ್ಲಿ ಇರುವ ಭಿನ್ನತೆಗಳನ್ನು ಗುರುತಿಸಿದ್ದಾರೆ. ವಚನಸಾಹಿತ್ಯ, ಆಧುನಿಕ ಪೂರ್ವ ಕಾಲ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ಇಪ್ಪತ್ತನೆಯ ಶತಮಾನ, ಆಧುನಿಕ ಕನ್ನಡ ಸಾಹಿತ್ಯದ ಚಿಂತನೆಗಳು ಮಹಿಳೆಯರ ಪಾತ್ರಗಳನ್ನು ನಿರ್ವಹಿಸಿರುವ ರೀತಿಯನ್ನೂ ಲೇಖಕಿ ವಿವರಿಸುತ್ತಾರೆ. ವಿವಾಹ, ಕುಟುಂಬ, ಲೈಂಗಿಕ ಪ್ರಶ್ನೆಗಳು ಸಾಹಿತ್ಯದಲ್ಲಿ ಸಾಮಾಜಿಕ ಚೌಕಟ್ಟಿನ ನೆಲೆಯಲ್ಲಿ ರೂಪಿತಗೊಂಡಿರುವುದನ್ನು ಪ್ರಶ್ನಿಸುತ್ತಲೇ ವಿಮರ್ಶಿಸಿರುವುದನ್ನು ಕಾಣಬಹುದಾಗಿದೆ.


ಈ ಸಂಕಲನದಲ್ಲಿರುವ ಮೂರನೆಯ ಲೇಖನ 'ದ ಸೆಕೆಂಡ್ ಸೆಕ್ಸ್ : ಕನ್ನಡ ಓದು' ಇದಕ್ಕಾಗಿ ಬರೆದ ಪ್ರಸ್ತಾವನೆ 'ಕಲ್ಪಿತ ಚರಿತ್ರೆಗಳಲ್ಲಿ ಕಾಣೆಯಾಗುವ ಮಹಿಳೆಯರು'. ಈ ಲೇಖನದಲ್ಲಿ ಮಹಿಳಾ ಸಾಹಿತ್ಯ ಪರಂಪರೆ ಎನ್ನುವುದು ಚಾರಿತ್ರಿಕವಾಗಿ ಕಾಣೆಯಾದುದರ ಬಗ್ಗೆ, ಅಲ್ಲಿರುವ ಹುನ್ನಾರಗಳ ಬಗ್ಗೆ, ಇತ್ತೀಚೆಗೆ ನಡೆದ ಹಾಗೂ ನಡೆಯುತ್ತಿರುವ ಮಹಿಳಾ ಸಾಹಿತ್ಯ ಪರಂಪರೆಯ ಸಂಶೋಧನೆಯ ಬಗ್ಗೆ ಲೇಖಕಿ ಚರ್ಚಿಸುತ್ತಾರೆ. ಪ್ರಸಿದ್ಧ ಸ್ತ್ರೀವಾದಿಗಳಾದ ಸೂಸಿ ತಾರು ಹಾಗೂ ಕೆ. ಲಲಿತ 1993ರಲ್ಲಿ ಸಂಪಾದಿಸಿದ 'ವಿಮೆನ್ ರೈಟಿಂಗ್ ಇನ್ ಇಂಡಿಯ' ಮಹಿಳಾ ಸಾಹಿತ್ಯ ಚರಿತ್ರೆ ಕಟ್ಟುವಲ್ಲಿ ಮುಖ್ಯವಾದ ಕೃತಿ ಎಂದು ಹೆಸರಿಸುತ್ತಾರೆ. ಚರಿತ್ರೆಯಲ್ಲಿ ಮಹಿಳಾ ಬದುಕಿಗೆ ಸಂಬಂಧಿಸಿದ ದಾಖಲೆಗಳು ಮರೆಯಾಗಿರುವ ರಾಜಕಾರಣದ ಹುನ್ನಾರಗಳನ್ನು ಅರ್ಥಮಾಡಿಕೊಳ್ಳುವ ಮೂಲಕವೇ ನಮ್ಮ ಚರಿತ್ರೆಯನ್ನು ನಾವೇ ಕಟ್ಟಬೇಕಾದ ಅನಿವಾರ್ಯತೆಯಲ್ಲಿ ಅನೇಕ ಮಹಿಳಾ ಅಧ್ಯಯನಕಾರರು ಕನ್ನಡ ಆಧುನಿಕ ಸಾಹಿತ್ಯದ ಆದಿ

ಲೇಖಕಿಯರ ಬದುಕು, ಬರಹ ಶೋಧಿಸಿ, ಪ್ರಕಟಿಸಿ ಒಂದು ಸಾಹಿತ್ಯ ಪರಂಪರೆಯನ್ನು ಕಟ್ಟಿದುದನ್ನು ಸ್ಮರಿಸುತ್ತಾರೆ. ಸಾಹಿತ್ಯ ಚರಿತ್ರೆಯ ಪುಟಗಳಿಂದಲೇ ಕಣ್ಮರೆಯಾಗಿ ಹೋಗಬಹುದಾಗಿದ್ದ ಹದಿನೆಂಟನೇ ಶತಮಾನದ ಮುದ್ದುಪಳನಿ ಹಾಗೂ ಆಕೆಯ ಕೃತಿ 'ರಾಧಿಕಾ ಸಾಂತ್ವನಂ' ಕುರಿತು ಲೇಖಕಿ ಚರ್ಚಿಸುತ್ತಾರೆ. ವೃತ್ತಿಯಲ್ಲಿ ವೇಶ್ಯೆಯಾಗಿದ್ದ ಮುದ್ದುಪಳನಿಯ ಪ್ರೀತಿ, ಪ್ರೇಮ, ಕಾಮದ ಅಭಿವ್ಯಕ್ತಿಗಳು 1887ರಲ್ಲಿ ವೆಂಕಟನರಸು ಎಂಬಾತ 'ರಾಧಿಕಾ ಸಾಂತ್ವನಂ' ಕೃತಿಯನ್ನು ಗ್ರಂಥಸಂಪಾದನೆ ಮಾಡಿದ ಮೇಲೆ ತೀವ್ರ ಟೀಕೆಗೆ ಒಳಗಾಗಿ ಬಹಿಷ್ಕಾರಕ್ಕೆ ಒಳಗಾಯಿತು. ವೆಂಕಟನರಸು ಕೃತಿಗೆ ಮಾಡಿದ ದ್ರೋಹಕ್ಕೆ ಧ್ವನಿ ಎತ್ತದ ವಿದ್ವಾಂಸರು ಮುದ್ದುಪಳನಿಯ ಅಭಿವ್ಯಕ್ತಿಯನ್ನು ಲೈಂಗಿಕ ಸ್ವೇಚ್ಛಾಚಾರ ಎಂಬಂತೆ ಆಕ್ಷೇಪಿಸಿದ್ದನ್ನು ಲೇಖಕಿ ಕಟುವಾಗಿ ಟೀಕಿಸುತ್ತಾರೆ. ಮುದ್ದುಪಳನಿಯ ಕುಲದವಳೇ ಆದ ಸಂಗೀತ ವಿದ್ವಾಂಸೆ ಬೆಂಗಳೂರು ನಾಗರತ್ನಮ್ಮ ಎಂಬಾಕೆ ಸರ್ವಸಾಹಸ ಮಾಡಿ ಮೂಲ ರೂಪಕ್ಕೆ ಊನ ಬರದಂತೆ ಮತ್ತೆ 'ರಾಧಿಕಾ ಸಾಂತ್ವನಂ' ಕೃತಿಯನ್ನು ಸಂಪಾದಿಸದಿದ್ದಲ್ಲಿ ಮುದ್ದುಪಳನಿ ಹಾಗೂ ಆಕೆಯ ಕೃತಿ ಸಾಹಿತ್ಯಚರಿತ್ರೆಯಲ್ಲಿ ಕಳೆದೇ ಹೋಗಿಬಿಡುತ್ತಿದ್ದವೆಂದು ಶ್ರೀಮತಿಯವರು ದಾಖಲಿಸುತ್ತಾರೆ. ಪ್ರಸ್ತುತ ಸಮಾಜದಲ್ಲಿ ಮಹಿಳಾ ಸೃಜನಶೀಲತೆಗೆ ಇರುವ ಬಿಕ್ಕಟ್ಟುಗಳನ್ನು ಕೂಡಾ ಸುಧೀರ್ಘವಾಗಿ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಕೊನೆಯದಾಗಿ ಈ ಸಂಕಲನದಲ್ಲಿ ಸೇರಿರುವ ಪ್ರಸ್ತಾವನೆ 'ಹೆಣ್ಣುತನ ಎಂಬ ಕಣ್ಕಟ್ಟು' ಪುಸ್ತಕಕ್ಕೆ ಬರೆದುದು. ಈ ಪುಸ್ತಕ ಬೆಟ್ಟಿ ಫ್ರೀಡನ್ 1963ರಲ್ಲಿ ಬರೆದದ್ದು. 1981ರಲ್ಲಿ ಈಕೆ 'ಸೆಕೆಂಡ್ ಸ್ಟೇಜ್' ಎನ್ನುವ ಪುಸ್ತಕ ಬರೆಯುವ ವೇಳೆಗಾಗಲೇ ಈಕೆಯ ದೃಷ್ಟಿಕೋನದಲ್ಲಿ ಹಲವಾರು ಬದಲಾವಣೆಗಳು ಕಂಡುಬಂದಿದ್ದವು. ಅಧಿಕಾರದ ಬಗೆಗಿನ ಪುನರ್ ನಿರ್ವಚನೆ, ಹೊಸ ಸಮಾಜದ ಕಲ್ಪನೆಯ ತಾತ್ವಿಕ ಹರವುಗಳಲ್ಲಿ ಸಮುದಾಯದ ಕಲ್ಪನೆ ಬೆಸೆದುಕೊಂಡಿತ್ತು. ಇತ್ತೀಚೆಗೆ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ಸಂದರ್ಶನದಲ್ಲಿ ಕೂಡಾ ಈಕೆ ಸರಕೀಕರಣ, ವ್ಯಕ್ತಿಗತ ನೆಲೆಯ ಬಗ್ಗೆ ವಿರೋಧ ವ್ಯಕ್ತಪಡಿಸಿ ಅಧಿಕಾರದ ಕಲ್ಪನೆಯ ನಿರ್ವಚನೆ ಕುರಿತು ಮಾತನಾಡಿದ್ದರು. ದ ಫೆಮಿನೈನ್ ಮಿಸ್ಟಿಕ್ ಮುಖ್ಯವಾಗಿ ಗೃಹಿಣಿಯರ ಖಾಲಿತನದ ಬದುಕಿನ ಕಣ್ಕಟ್ಟು ಬಗ್ಗೆ ಮಾತನಾಡಿದುದೇ ಹೆಚ್ಚು. 'ಹೆಣ್ಣುತನ ಎಂಬ ಕಣ್ಕಟ್ಟು' ತಾತ್ತ್ವಿಕ ಕಲ್ಪನೆ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಭಾರತೀಯ ಮಹಿಳೆಯರ ಬದುಕಿನ ಹರವುಗಳನ್ನು ಇಡಿಯಾಗಿ ಹಿಡಿದಿಡಬಲ್ಲದೇ ಎಂಬುದನ್ನು ಮತ್ತೊಮ್ಮೆ ಯೋಚಿಸಬೇಕಾಗುತ್ತದೆ.

ಒಟ್ಟಾಗಿ 'ಹೆಣ್ಣು ಬರೆಹದ ಒಳಬಂಡಾಯ'ದ ಮೊದಲ ಮೂರು ಲೇಖನಗಳು ಪ್ರಸ್ತುತದಲ್ಲಿ ನಡೆಯುತ್ತಿರುವ ಸ್ತ್ರೀವಾದಿ ಹಾಗೂ ಅದರ ಸಂಬಂಧಿತ ಚರ್ಚೆಗಳನ್ನು, ಸವಾಲುಗಳನ್ನು ವಿಶ್ಲೇಷಿಸುವುದರಿಂದ ಗಮನ ಸೆಳೆಯುತ್ತವೆ ಹಾಗೂ ಮೂಲ ಕೃತಿಗಳ ಬಗ್ಗೆ ಕುತೂಹಲ ಹುಟ್ಟಿಸುವಲ್ಲಿಯೂ ಸಫಲವಾಗುತ್ತವೆ.

ಹೆಣ್ಣು ಬರೆಹದ ಒಳಬಂಡಾಯ
ಲೇ : ಎಚ್.ಎಸ್. ಶ್ರೀಮತಿ
ಪ್ರ : ಪ್ರಗತಿ ಗ್ರಾಫಿಕ್ಸ್
ಪುಟ : 182
ಬೆಲೆ : ರೂ. 125/–



ಇದಲ್ಲದೆ, ವಾಕ್ಯರಚನೆ, ಧ್ವನಿರಚನೆ ಮುಂತಾದ ನೆಲೆಗಳ ನಿಯಮಗಳೂ ಒಂದಿಲ್ಲೊಂದು ಬಗೆಯಲ್ಲಿ ಗಂಡಸರನ್ನು ಕೇಂದ್ರದಲ್ಲಿರಿಸಿಕೊಳ್ಳುವ ಲಕ್ಷಣಗಳನ್ನೇ ಹೊಂದಿರಬಹುದೆಂದು ಸ್ತ್ರೀವಾದಿ ಭಾಷಾಚಿಂತಕರು ವಾದಿಸುತ್ತಾರೆ. ಆಡುಮಾತಿಗಿಂತ ಹೆಚ್ಚಾಗಿ ಬರಹದ ರೂಪಗಳಲ್ಲಿ ಹೀಗೆ ತಾರತಮ್ಯಗಳು ಪ್ರಕಟವಾಗುತ್ತಿರುವ ಸಾಧ್ಯತೆಗಳನ್ನು ಶೋಧಿಸಲಾಗಿದೆ. ವ್ಯಾಕರಣಗಳು ಒಪ್ಪಿ ವಿವರಿಸುವ ವಾಕ್ಯಗಳು ಗಂಡುವಾಕ್ಯಗಳಾಗಿರುತ್ತವೆ; ಅಂಥ ಕಟ್ಟುಗಳಿಂದ ವಾಕ್ಯಗಳಲ್ಲಿ ಹೆಂಗಸು ತನ್ನನ್ನು ತೊಡಗಿಸಿಕೊಳ್ಳಲಾರಳು. ಒಂದೋ, ಅಂಥ ಕಟ್ಟುಗಳನ್ನು ಯಥಾವತ್ತಾಗಿ ಪಾಲಿಸಿ ತನ್ನ ಹೆಣ್ಣುತನವನ್ನು ಬಿಟ್ಟುಕೊಟ್ಟು ಗಂಡಸಿನಂತೆ ಬರೆಯಬೇಕು. ಇಲ್ಲವೇ, ತಾನು ಹೊಂದಿಸಿಕೊಳ್ಳಲಾಗದ ವಾಕ್ಯರಚನೆಯ ಕಟ್ಟುಗಳಲ್ಲಿ ಸಿಲುಕಿ ಇಕ್ಕಟ್ಟು ಅನುಭವಿಸಬೇಕು. ಇವೆರಡೇ ಸದ್ಯ ಹೆಂಗಸಿಗಿರುವ ಆಯ್ಕೆಗಳೆಂದು ಸ್ತ್ರೀವಾದಿಗಳು ಹೇಳುತ್ತಾರೆ.

* * *

ಕನ್ನಡ ವಿಮರ್ಶೆಯು ಈ ದಿಟ್ಟ ಹೆಂಗಸನ್ನು (ಅಕ್ಕಮಹಾದೇವಿ) ಸಮರ್ಥಿಸಿದೆ. ಆದರ್ಶ ಪುರುಷನಿಗಾಗಿ ಗಂಡನನ್ನು ನಿರಾಕರಿಸುವ ಹೆಂಗಸನ್ನು ಆದರ್ಶವನ್ನಾಗಿ ಮಂಡಿಸಿದೆ. ಈ ವ್ಯಾಖ್ಯೆಯನ್ನು ಬಲು ಎಚ್ಚರಿಕೆಯಿಂದ ನೋಡಬೇಕು. ಕನ್ನಡದ ಆಧುನಿಕ ಕವಯಿತ್ರಿಯರು ಒಂದಿಲ್ಲೊಂದು ರೀತಿಯಲ್ಲಿ ಅಕ್ಕನೊಡನೆ ಸಂವಾದಕ್ಕಿಳಿದಿದ್ದಾರೆ. ಆದರೆ ಪುರುಷ ನೆಲೆಯಿಂದ ಪಕ್ಕದ ಗಂಡನನ್ನು ತೊರೆಯುವ ಹೆಂಗಸು ಬೇಟೆಯ ಮಿಕವಾಗುತ್ತಾಳೆ. ಚೆನ್ನಮಲ್ಲಿಕಾರ್ಜುನನ ವೇಷಭೂಷಣಗಳನ್ನು ಧರಿಸಲು ಪುರುಷರು ಮುಂದಾಗುತ್ತಾರೆ. ಸ್ತ್ರೀ ಸ್ವಾತಂತ್ರ್ಯದ ವ್ಯಾಖ್ಯೆ ಇಬ್ಬಾಯಿ ಖಡ್ಗ. ಯಾರು ಅದನ್ನು ಕುರಿತು ಮಾತಾಡುತ್ತಿದ್ದಾರೆ ಎಂಬುದನ್ನು ಅವಲಂಬಿಸಿ ನಂಬಿಕೆಗೆ ಅದೆಷ್ಟು ಅರ್ಹವೆಂಬುದನ್ನು ನಿರ್ಧರಿಸಬೇಕಾಗುತ್ತದೆ.

* * *

ಅಕ್ಕ ಉಟ್ಟ ಸೀರೆಯನ್ನು ಕಿತ್ತೊಗೆದು ಬೆತ್ತಲೆ ಹೊರಟುಬಿಟ್ಟಳೆಂಬ ಕಲ್ಪನೆ ತೀರಾ ಪ್ರಚಲಿತವಾದದ್ದು. ಒಬ್ಬ ಹೆಣ್ಣಾಗಿ ನಾನಂತೂ ಒಂದು ಸಾಮಾಜಿಕ ವಾಸ್ತವವಾಗಿ ಇದನ್ನು ಅಕ್ಷರಶಃ ಸತ್ಯ ಎಂದು ಒಪ್ಪಲು ಸಾಧ್ಯವೇ ಇಲ್ಲ. ಈ ಕುರಿತು ಬಂದ ಸಾಹಿತ್ಯದಲ್ಲಿ ಮಾತ್ರ ಇದೊಂದು ಅಧಿಕೃತ ಮಾಹಿತಿಯೇ ಎಂಬಂತೆ ದಾಖಲಾಗಿದೆ. ನಮ್ಮ ಸಮಕಾಲೀನ ಸಾಹಿತ್ಯ, ಸಿನಿಮಾಗಳಲ್ಲೂ ಇದು ಕಣ್ಣಿಗೆ ಕಟ್ಟುವ ಚಿತ್ರವಾಗಿ, ಅಕ್ಕ ಹಾಗೆ ಬೆತ್ತಲಾಗಿ ಬೀದಿಯಲ್ಲಿ ನಡೆದು ಹೋದದ್ದೇ ನಿಜ ಎನಿಸುವಂತೆ ಮಾಡುತ್ತದೆ. ಒಂದು ವೇಳೆ ಒಂದು ಹೆಣ್ಣು ಹೀಗೆ ವರ್ತಿಸಿದವಳೆಂದೇ ಭಾವಿಸೋಣ. ಇಂಥ ಅವಳ ವರ್ತನೆಗೆ ಸಮಾಜದ ಪ್ರತಿಕ್ರಿಯೆ ಏನು ಎಂಬುದಂತೂ ಇನ್ನಷ್ಟು ವಿಚಿತ್ರವಾಗಿ ನಮ್ಮ ಸಾಹಿತ್ಯದಲ್ಲಿ ದಾಖಲಾಗಿದೆ. ಬತ್ತಲಾದ ಅಕ್ಕ ತನ್ನ ಸಮೃದ್ಧ ಕೂದಲಿನಿಂದ ತನ್ನ ಶೀಲವನ್ನು ಮುಚ್ಚಿಕೊಂಡು ನಡೆದಳಂತೆ. ಆಕೆಗೆ ಹಾಗೆ ಸಮೃದ್ಧ ಕೂದಲು ಇದ್ದಿರಲಿಲ್ಲವೆಂದರೆ ಇನ್ನೇನು ಕಲ್ಪನೆಯಲ್ಲಿ ಆಕೆಯ 'ಶೀಲ'ವನ್ನು ಕಾಯಲಾಗುತ್ತಿತ್ತೋ ಎಂಬ ಕುಚೇಷ್ಟೆಯ ತರ್ಕ ತೋರುತ್ತದೆ. ಅಕ್ಕ ಬೆತ್ತಲಾಗಿ ನಡೆದ ಪ್ರಕರಣ, ಸಂವೇದನಾಶೀಲ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಆಕೆಯ ವ್ಯಕ್ತಿತ್ವವನ್ನು 'ಧ್ವನಿಸುವ' ಕೆಲಸ ಮಾಡಬೇಕಾಗಿತ್ತು. ಅದು ಹಾಗೆ ಆಗಲಿಲ್ಲ, ಬದಲಿಗೆ, ಆಕೆ ಬೆತ್ತಲಾಗಿ ನಡೆದದ್ದೇ ವಾಸ್ತವ ಸಂಗತಿ ಎನಿಸಿಬಿಟ್ಟಿತು. ಆದರೆ, ಒಬ್ಬ ಮಹಿಳೆಯು ಇಷ್ಟೊಂದು ತೀವ್ರವಾಗಿ ಸಮಾಜಕ್ಕೆ ತನ್ನ ಪ್ರತಿರೋಧವನ್ನು ಸಲ್ಲಿಸಿರಬಹುದು ಎಂಬ ಆಘಾತವನ್ನು ತಡೆದುಕೊಳ್ಳುವುದು ಕೂಡ ಆ ಸಮಾಜಕ್ಕೆ ಕಷ್ಟವಾಯಿತು. ಆಕೆಯ ಮಾನಸಂರಕ್ಷಣೆಗಾಗಿ ಸಮೃದ್ಧ ಕೂದಲನ್ನು ಕಲ್ಪಿಸಲಾಯಿತು.

* * *

ಒಂದು ಕಾಲಕ್ಕೆ 'ನಾನು ಸ್ತ್ರೀವಾದಿ' ಎಂದು ಹೇಳಿಕೊಳ್ಳುವುದು ಛಲದ, ಹೆಮ್ಮೆಯ, ಸ್ವಂತಿಕೆಯ ಚಹರೆ ಎನ್ನಿಸಿದ್ದು, ಇಂದಿನ ಬುದ್ಧಿಜೀವಿಗಳ ಪಾಲಿಗೆ ಅದೊಂದು ಸಂಕುಚಿತ ಭಾವದ ಚಿಂತನೆ ಎನ್ನಿಸಿಬಿಟ್ಟಿದೆ. 'ಮಾನವತಾವಾದ' ಎಂಬುದು ಆದರ್ಶದ ಒಂದು ದೊಡ್ಡ ಗುರಿ ಹೌದು. ಆದರೆ ಸಮಸ್ಯೆಯ ಮೂಲವನ್ನೇ ಮರೆತು ಈ ಮಾನವತಾವಾದವನ್ನು ಹೇಗೆ ಸಾಧಿಸುವುದೋ ತಿಳಿಯದು. ಮಹಿಳೆಯರಿಗೆ ಒಂದಿಷ್ಟು ಭದ್ರತೆ, ರಕ್ಷಣೆ, ಹಕ್ಕುಗಳನ್ನು ನೀಡಲೆಂದು ರೂಪಿಸಲಾದ ಕಾಯಿದೆ ಕಾನೂನುಗಳು ವಿಪರೀತದ ಪ್ರತಿರೋಧಗಳನ್ನು ಎದುರಿಸುತ್ತಿವೆ. ಈ ಕಾಯಿದೆ ಕಾನೂನುಗಳು ಅಪವಾದಗಳೆಂಬಷ್ಟು ಕಡಿಮೆ ಪ್ರಮಾಣದ ಕೆಲವು ಸಂದರ್ಭಗಳಲ್ಲಿ ಅಪಬಳಕೆಗೊಂಡಿರಬಹುದು. ಆದರೆ ಅದನ್ನೇ ದೊಡ್ಡದು ಮಾಡಿ ಮೂಲ ಉದ್ದೇಶವನ್ನೇ ನಿರಾಕರಿಸುವ ಬಗೆಯ ಅಪವಿಶ್ಲೇಷಣೆಗಳಲ್ಲಿ ತೊಡಗಿರುವ ಬುದ್ಧಿಜೀವಿಗಳ ನಿಜವಾದ ಆಸಕ್ತಿಗಳೇನು ಎಂಬ ಸಂದೇಹ ಹುಟ್ಟುತ್ತದೆ. ಮಹಿಳೆಯರಿಗೆ ಕಲ್ಪಿಸಿದ ಅವಕಾಶಗಳನ್ನು ಒಂದು ಕೈಲಿ ಕೊಟ್ಟು ಇನ್ನೊಂದು ಕೈಲಿ ಕಿತ್ತುಕೊಳ್ಳುವ ಪ್ರಸಂಗಗಳಿಗೆ ಈ ಅತಿ ಬುದ್ಧಿಜೀವಿಗಳು ಕಾರಣರಾಗುತ್ತಿರುವುದು ವಿಷಾದನೀಯ. ❑



ಕಾಯಕ ಕೈಲಾಸ : ಎಂಬ ಜೀವನ ನದಿಯ ಗಾಥೆ

■ ಡಾ. ಬಿ.ಎಸ್. ಸುಮಿತ್ರಾಬಾಯಿ

ಸುಮಾರು ನಾಲ್ಕು ದಶಕಗಳಿಂದ ಕನ್ನಡಿಗರಿಗೆ 'ಶುಚಿ-ರುಚಿ'ಯುಳ್ಳ ಸಾಹಿತ್ಯವನ್ನು ಉಣಬಡಿಸಿ, ಮನ ತಣಿಸುತ್ತಾ ಬಂದಿರುವ ಪ್ರತಿಭೆ-ಹೃದಯವಂತಿಕೆ ಎರಡೂ ಬೆರೆತಿರುವ ಲೇಖಕಿ ಸುನಂದಾ ಬೆಳಗಾಂವಕರ್. 'ಕಜ್ಜಾಯ'ವೆಂಬ ಪ್ರಬಂಧದ ಮೂಲಕ ಅವರು ಬೃಹತ್ ಅಭಿಮಾನಿ ಓದುಗ ವರ್ಗವನ್ನು ದಿಢೀರನೆ ಪಡೆದವರು. ಅಲ್ಲಿಂದ ಮುಂದೆ ಹಲವು ಪ್ರಕಾರಗಳಲ್ಲಿ ಅವರ ಸೃಷ್ಟಿಶೀಲತೆಯನ್ನು ಪ್ರಯೋಗಕ್ಕೆ ತೊಡಗಿಸುತ್ತ ಬಂದಿದ್ದಾರೆ.

'ಮೃದ್ಗಂಧದ ಕಥೆಗಳು' 'ನಾಸು, 'ಝುವಾದಿ' (ಕಾದಂಬರಿಗಳು) ಕೈತುತ್ತು (ಪ್ರಬಂಧ) 'ಕೊಡುವುದೇನು? ಕೊಂಬುದೇನು?' (ವ್ಯಕ್ತಿಚಿತ್ರ) 'ಶಾಲ್ಮಲಿ' (ಕವಿತೆ) ಮತ್ತು ಇದೀಗ ಬೆಳಕು ಕಂಡಿರುವ 'ಕಾಯಕ ಕೈಲಾಸ'.

'ಕಜ್ಜಾಯ'ವೇನು ಬರಿಯ ಪ್ರಬಂಧವೆ? 'ನಾಸು', 'ಝುವಾದಿಗಳು' ಕಾದಂಬರಿಗಳು ಮಾತ್ರವೆ? 'ಕೊಡುವುದೇನು? ಕೊಂಬುದೇನು?' ಎಂಬುದನ್ನು ಬರೀ ವ್ಯಕ್ತಿಚಿತ್ರ ಸ್ಮೃತಿಮಾಲಿಕೆ ಎಂದು ಮಾತ್ರ ನೋಡಬಹುದೆ? ಮುಂತಾದ ಪ್ರಶ್ನೆಗಳನ್ನು ಸುನಂದಾ ಅವರ ಬರಹಗಳ ಸಂದರ್ಭದಲ್ಲಿ ಕೇಳಲು ಸಾಧ್ಯ. ಏಕೆಂದರೆ ಹೊರಗಿನ ಚೌಕಟ್ಟು ಅಥವಾ ಬಂಧಕ್ಕೆ ಅವರೆಂದೂ ಕಟ್ಟುಬಿದ್ದಂತಿಲ್ಲ. ಅವು ಕೇವಲ ದೇಗುಲದ ಪ್ರಾಕಾರವಿದ್ದಹಾಗೆ. ಆದರೆ ಗರ್ಭಗುಡಿಯಲ್ಲಿ ಪ್ರಾಣಪ್ರತಿಷ್ಠಿತವಾದಂತೆ ಒಂದೇ ವಸ್ತು ಬೇರೆ ಬೇರೆ ಸ್ತರ, ಸತ್ತ್ವ, ವಿನ್ಯಾಸಗಳಲ್ಲಿ ಎಲ್ಲಾ ಕೃತಿಗಳಲ್ಲೂ ಮತ್ತೆ ಮತ್ತೆ ಶೋಧನೆಗೆ ಒಳಪಡುತ್ತಾ ಬಂದಂತೆ ನನಗೆ ತೋರುತ್ತದೆ.

ಧಾರವಾಡ ಮತ್ತು ಅದರ ಆಸುಪಾಸಿನ ಪ್ರದೇಶದಲ್ಲಿ ಸುನಂದಾ ಸಾಹಿತ್ಯದ ಬೇರು, ಕಾಂಡ, ಚಿಗುರುಗಳೂ ಹೊಮ್ಮಿರುತ್ತವೆ. ಒಮ್ಮೊಮ್ಮೆ ಯಾರೋ ಒಂದು ಪಾತ್ರ, ಯಾವುದೋ ಒಂದು ದೃಶ್ಯಾವಳಿ ಅಷ್ಟಿಷ್ಟು ಆಚೀಚೆ ಸರಿದರೂ, ವಿಶ್ವ ಸುತ್ತಲು ಹೋದ ಹಾಗೆ ಕಂಡರೂ ಅವರ ಮೂಲಕಥೆ ಕೊನೆಗೆ ಧಾರವಾಡಕ್ಕೆ ವಾಪಸ್ಸು ಬರಲೇಬೇಕು. ಅಂತಹ ಗಾಢವಾದ ಹುಟ್ಟುನೆಲದ ಸೆಳೆತ, ಅಗಾಧವಾದ ಅಲ್ಲಿನ ನಿಸರ್ಗದ ಪ್ರೀತಿ, ಅಲ್ಲಿಯದೇ ಜನಜೀವನದ ಸೂಕ್ಷ್ಮ ವಿವರಗಳು, ಅನುಭವಗಳಾಗಿ ಸುನಂದಾ ಕೃತಿಗಳಲ್ಲಿ ಅಚ್ಚಳಿಯದೆ ನೆನಪಿನ ರೀತಿ ಮೈದಾಳುತ್ತವೆ. ಸಾಂಪ್ರದಾಯಿಕ ಜೀವನಕ್ರಮದ ಒಳಗೆ ತುಂಬಿ ಹರಿಯುವ ಮಾನವಾಂತಃಕರಣದ ಸೆಲೆ, ಅದಕ್ಕೆ ಇದ್ದ ಘನತೆ, ಬೆಲೆಗಳು ಆಧುನಿಕ ಶಿಕ್ಷಣ, ನಾಗರಿಕತೆಗಳು ಹುಟ್ಟಿಸಿ ಬೆಳೆಸುವ ಅಧಿಕಾರದಾಹ, ಧನದಾಹ, ಅಹಂಕಾರಗಳ ಸ್ವಾರ್ಥ, ಸಂಚುಗಳ ಕ್ರೂರ ಶಕ್ತಿಗಳೆದುರು ಹೇಗೆ ಶಿಥಿಲವಾಗಿ ಇಲ್ಲವಾಗಿಬಿಡುತ್ತವೆ-ಎಂಬ ಅಂತಃಕರಣದ ಶೋಧನೆಯೇ ಸುನಂದಾ ಅವರ ಎಲ್ಲಾ ಕೃತಿಗಳ ಕೇಂದ್ರ ಹುಡುಕಾಟ. ಬೇರೆ ಬೇರೆ ಎಂಬಂತೆ ಕಂಡರೂ ಅವರು ತಮ್ಮ ಬರಹಗಳಲ್ಲಿ ಶೋಧಿಸುತ್ತಾ ಬಂದಿರುವುದು ಈ ಮಾನವೀಯ ಜಾಗಗಳನ್ನೇ ಎಂದು ನನಗೆ ಕಾಣಿಸುತ್ತದೆ.

ತುಂಬ ಪ್ರತಿಭಾವಂತ ಬರಹಗಾರರು ಎಷ್ಟೊಂದು ಬಗೆಯ ಕೃತಿಗಳನ್ನು ಬರೆದರೂ ಆ ಎಲ್ಲದರಲ್ಲೂ ತಮ್ಮ ಸೃಜನಶೀಲತೆಗೆ ತುಂಬ ತೃಪ್ತಿ ತರಬಲ್ಲ ಒಂದನ್ನೇ ಆಯ್ದುಕೊಂಡಿರುತ್ತಾರೆ, ಅದನ್ನೇ ಮತ್ತೆ ಮತ್ತೆ ಶೋಧಿಸುತ್ತಾ ವಿಸ್ತರಿಸುತ್ತಾ ಆಳವಾಗಿಸುತ್ತಿರುತ್ತಾರೆಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ. ಆ ಕ್ರಮದಲ್ಲಿ ಮಹಾನ್ ಸಾಹಿತಿಗಳು ಜೀವನದುದ್ದಕ್ಕೂ ಬರೆಯುವುದು ಒಂದೇ ಕೃತಿಯನ್ನು! ಸುನಂದಾ ಬರಹಗಳೂ ಈ ಮಾತಿಗೇ ನಿದರ್ಶನದಂತೆ ಇವೆ.

ಪ್ರಸ್ತುತ 'ಕಾಯಕ ಕೈಲಾಸ' ಕಾದಂಬರಿ 520 ಪುಟಗಳ ವಿಸ್ತಾರವಾದ ಕೃತಿ. ಮೂರು ಪೀಳಿಗೆಗಳಲ್ಲಿ ಹರಿಯುವ ಜೀವನ ಕ್ರಮದ ಸ್ಥಿತ್ಯಂತರಗಳನ್ನು ಸಾವಧಾನವಾಗಿ ದಾಖಲಿಸುವ ಯತ್ನ ಇಲ್ಲಿದೆ. ಹೊಟ್ಟೆಪಾಡಿಗಾಗಿ ಕೈಗೊಂಡ ವೃತ್ತಿ ಯಾವುದೇ ಆಗಿರಲಿ, ಆ ದುಡಿಮೆಯನ್ನೇ ದೇವರ ಬಳಿ ಸಾಗುವ ಭಕ್ತಿಯ ದಾರಿ ಎಂಬಂಥ ಅಚಲವಾದ ನಿಷ್ಠೆಯಿಂದ ಕೈಗೊಳ್ಳುವ ಕ್ರಮವೊಂದನ್ನು ಬಸವಯುಗದ ಶಿವಶರಣರು ಸಾರಿ ಹೇಳಿದ್ದರು. ಆದರೆ ಆ ತತ್ತ್ವ ಎಂದೋ ಗತಿಸಿದ ಕಾಲದ್ದಲ್ಲ. ವರ್ತಮಾನಕ್ಕೂ ಅನ್ವಯವಾಗಬೇಕಾದ ಉದಾತ್ತ ಮೌಲ್ಯವದು ಎಂಬುದನ್ನು ಸೂಚಿಸುವ 'ಕಾಯಕ ಕೈಲಾಸ' ಎಂಬ ಶೀರ್ಷಿಕೆಯನ್ನು ಈ ಕಾದಂಬರಿಗೆ ನೀಡಿರುವ ಲೇಖಕಿ ಇಡೀ ಕಾದಂಬರಿಯಲ್ಲಿ ಧಾರವಾಡ ಭೂಭಾಗದ ವೀರಶೈವ ಸಮುದಾಯದ ದೈನಂದಿನ ಜೀವನವನ್ನು ತುಂಬ ಆಪ್ತವಾಗಿ, ಹೃದಯಕ್ಕೆ ನಿಕಟವಾಗುವ ಶೈಲಿಯಲ್ಲಿ, ಅಲ್ಲಿಯದೇ ಭಾಷೆಯಲ್ಲಿ ಚಿತ್ರಿಸಿದ್ದಾರೆ.

ಕಾದಂಬರಿಯ ಕೇಂದ್ರವ್ಯಕ್ತಿಯಾದ ಗಂಗವ್ವ, ಆಧುನಿಕ ಜಗತ್ತಿನಲ್ಲಿ ಅಸಂಭಾವ್ಯವೇ ಎನ್ನಿಸಬಹುದಾದಷ್ಟು ಮುಗ್ಧ ಭಕ್ತಿಯುಳ್ಳ ಸಾಮಾನ್ಯ ಹೆಣ್ಣುಮಗಳು. ತೀವ್ರವಾದ ಬಡತನ, ಹರೆಯದಲ್ಲೇ ಗರ್ಭಿಣಿ ಹೆಂಡತಿಯನ್ನು ಬಿಟ್ಟು ದೇಶಾಂತರ ಹೋದ ಬೇಜವಾಬ್ದಾರಿಯ ಗಂಡ,

ಪುಂಡ ಪೋಕರಿಗಳ ಕಾಟ. ನೀನೇ ಎನ್ನಲು ಯಾರೂ ದಿಕ್ಕಿರದಂಥ ಅಸಹಾಯಕತೆ, ಏಕಾಕಿತನಗಳಲ್ಲಿ ಸಂಕಟಪಡುವ ಅನಕ್ಷರಸ್ಥ ಹಳ್ಳಿಯ ಹೆಣ್ಣು ಈಕೆ. ಆದರೆ ಈ ಎಲ್ಲ ಸಂಕಟಗಳಿಂದ ದೂರವಾಗಲು ಅವಳ ಮನಸ್ಸು ಅಪ್ಪಿಕೊಳ್ಳುವ ಆಧಾರವೇ ಶಿವಭಕ್ತಿ. ಆ ಭಕ್ತಿಯ ತೀವ್ರತೆ, ಉತ್ಕಟತೆಗಳಲ್ಲಿ ಅವಳು ಎಂಥ ಅನುಭಾವಕ್ಕೆ ಏರುತ್ತಾಳೆಂದರೆ ಶಿವ, ಪಾರ್ವತಿಯರು, ಶಿವನ ಒಡವೆಯಾದ ಸರ್ಪ, ಅವನ ವಾಹನವಾದ ಬಸವ – ಎಲ್ಲರೂ ಅವಳ ಸಹಾಯಕ್ಕೆ ಸಿದ್ಧವಿರುವ ದೈವಾನುಗ್ರಹದ ನೆಂಟರಂತೆ ಅವಳ ಭಾವವಿದೆ. ಈ ಆಂತರಿಕ ನಂಬಿಕೆಯಿಂದಲೇ ಅವಳು ಕರಿದ ಕಡಲೆಬೇಳೆಯ ವ್ಯಂಜನವೊಂದನ್ನು ತಯಾರಿಸಿ ಸೋಮೇಶ್ವರನ ಗುಡಿಯುಬಳಿ ಅದನ್ನು ಮಾರುವ ವೃತ್ತಿ ನಡೆಸತೊಡಗುತ್ತಾಳೆ. ಇದು ಶಿವ-ಪಾರ್ವತಿಯರೇ ತನಗೆ ಬದುಕಲು ತೋರಿದ ಕಾಯಕವೆಂದು ಗಾಢಶ್ರದ್ಧೆಯಿಂದ ನಡೆಸುತ್ತಾಳೆ. ಬಂದ ಕಷ್ಟಗಳನ್ನೆಲ್ಲ ಎದುರಿಸುತ್ತ, ಹೆತ್ತ ಕೂಸಿಗೆ ಸೋಮೇಶ್ವರನೆಂದೇ ಹೆಸರಿಟ್ಟು, ಬೆಳೆಸಿ, ಶಿಕ್ಷಣ ಕೊಡಿಸಲು ಈ ಕಾಯಕವೇ ಅವಳಿಗೆ ಆಧಾರ. ಯಾವ ಬಾಂಧವ್ಯವಿಲ್ಲದಿದ್ದರೂ 'ಚಿಗವ್ವ' ಎನ್ನಿಸಿಕೊಂಡ ವೃದ್ಧಸ್ತ್ರೀಯು ಇವಳ ಏಕೈಕ ಬಂಧುವಾಗಿ ಒದಗುತ್ತಾಳೆ. ತನ್ನ ಕಾಯಕ ಹೇಗೋ ಈ ಚಿಗವ್ವನ ಪ್ರೇಮ ಸಿಕ್ಕಿರುವುದೂ ಶಿವಾನುಗ್ರಹವೆಂದೇ ಗಂಗವ್ವನ ಬಲವಾದ ನಂಬಿಕೆ.

ಸೋಮೇಶ್ವರ ದೇವಾಲಯದ ಉತ್ಸವ, ವ್ರತ, ಹಬ್ಬದ ಸಂದರ್ಭಗಳಲ್ಲಿ ಶಿವಭಕ್ತರಿಗೆ ಈ ಎಡೆಯನ್ನು ಹಂಚುವ, ಅವರು ಕೊಡುವ ಹಣದಲ್ಲಿ ಬದುಕು ಸಾಗಿಸುವ ಗಂಗವ್ವ ಕಂಡುಕೊಂಡ ವೃತ್ತಿ ಸ್ವತಂತ್ರವೂ, ಸ್ವಾಯತ್ತವೂ ಯಾರ ಹಂಗಿಲ್ಲದ್ದೂ ಆದ ಸ್ವಾಭಿಮಾನದ ಬದುಕಿನ ಹಾದಿಯೂ ಆಗಿರುವುದು ಎಂಬುದು ಬಹುಮುಖ್ಯ. ಅದು ಗಂಗವ್ವನ ತನ್ನತನದ ಲಕ್ಷಣವೂ ಹೌದು. ಇದರಿಂದಾಗಿಯೇ ಅವಳ ಮಗ ಓದಿ, ದೊಡ್ಡವನಾಗಿ ತಾನೂ ದುಡಿಯಲಾರಂಭಿಸಿ, ಜೀವನದ ಸ್ಥಿತಿಗತಿ ಸುಧಾರಿಸಿದನಂತರವೂ ಗಂಗವ್ವ ಮಾತ್ರ ತನ್ನ ಕಾಯಕವನ್ನು ಬದುಕಿರುವವರೆಗೂ ಬಿಡದೆ ಪಾಲಿಸುತ್ತಾಳೆ.

ಶಿವನ ಅನುಗ್ರಹವೆಂಬಂತೆ ಇನ್ನೊಂದು ವಿಶಿಷ್ಟಶಕ್ತಿಯೂ ಆಕೆಗಿರುತ್ತದೆ. ಪ್ರಜನನ ಶಕ್ತಿ-ಫಲವಂತಿಕೆ-ಪುತ್ರಕಾಮೇಷ್ಟಿಗಳ ಸಾಂಕೇತಿಕ ರೂಪದ ಹಾಗೆ ಅದು ಇದೆ. ಮಕ್ಕಳಾಗಲಿಲ್ಲವೆಂದು ಪರಿತಪಿಸುವ ಹೆಣ್ಣುಮಕ್ಕಳಿಗೆ ಈಕೆ ಕೈಯಾರೆ ಎಡೆಯನ್ನು ನೀಡಿ ಹರಸಿದರೆ ಅವರು ಪುತ್ರವತಿಯರಾಗುತ್ತಾರೆ ಎನ್ನುವ ಹೆಗ್ಗಳಿಕೆ ಅದು. ಇವಳಿಂದ ಹೀಗೆ ಆಶೀರ್ವಾದ ಪಡೆದು ಮಕ್ಕಳನ್ನು ಪಡೆದ ಅನೇಕ ಸ್ತ್ರೀಯರ ಪ್ರಸಂಗಗಳನ್ನು ಕಾದಂಬರಿ ಚಿತ್ರಿಸುತ್ತದೆ. ಬಂಜೆತನದ ನಿವಾರಣೆಯ ಏನೋ ಒಂದು ಕೈಗುಣ ಇಲ್ಲಿದೆ, ಅದು ಸಫಲವೂ ಆಗಬಹುದು, ಆದ್ದರಿಂದ ಪವಾಡವೆಂಬಂತೆ ಅದನ್ನು ಲೇಖಕಿ ವೈಭವಿಸಿ ಚಿತ್ರಿಸುವುದಿಲ್ಲ ಎಂಬುದನ್ನು ಗಮನಿಸಬೇಕು. ಈ ಫಲವಂತಿಕೆ ಫಲಿಸುವುದು ಜನರ ಶ್ರದ್ಧೆಯಲ್ಲೇ. ಶ್ರದ್ಧೆ ಇಲ್ಲದಲ್ಲಿ ಫಲವೂ ಇಲ್ಲ ಈ ಕಾದಂಬರಿಯಲ್ಲಿ.

ಗಂಗವ್ವ ಅನಕ್ಷರಸ್ತರಾದ ನಮ್ಮ ಪೂರ್ವಕಾಲದ ಸಾಮಾನ್ಯಾತಿಸಾಮಾನ್ಯ ಜನರು ಬದುಕಿನಲ್ಲಿ ಕಂಡುಕೊಂಡಿದ್ದ ಧಾರ್ಮಿಕ ಅರ್ಥವಂತಿಕೆ, ಸಜ್ಜನಿಕೆ, ಅಂತಃಕರಣ ಹಾಗೂ ಗಾಢವಾದ ಜೀವನ ಶ್ರದ್ಧೆಯ ಪ್ರತಿನಿಧಿ.

ಇವಳ ಮಗ ಸೋಮೇಶ್ವರ ಈಕೆಯ ಮುಂದಿನ ಪೀಳಿಗೆಯ ಪ್ರತಿನಿಧಿಯೆನ್ನಬಹುದು. ತಾಯಿಯ ಕಾಯಕ ತತ್ತ್ವದಲ್ಲಿ ಇವನಿಗೆ ಹೆಮ್ಮೆ, ಗೌರವ ಆದರಗಳಿವೆ. ಆ ಕಾಯಕದಿಂದಾಗಿಯೇ ಪಡೆದ 'ಬ್ಯಾಳಿಮಠ' ಎಂಬ ಅಡ್ಡ ಹೆಸರೂ ಇವನಿಗಿದೆ. ಅಮ್ಮನಿಂದ ದೊರೆತ ದೈವಶ್ರದ್ಧೆ, ಸಜ್ಜನಿಕೆ, ಸ್ವಾಭಿಮಾನಗಳು ವಿದ್ಯೆ, ಕಲಾಪ್ರತಿಭೆ, ವಿವೇಕಗಳಿಂದ ಇವನಲ್ಲಿ ಇನ್ನೂ ವಿಸ್ತರಿಸಿರುತ್ತವೆ.

ಆದರೆ ಕಾಲದೊಂದಿಗೆ ಜೀವನ ಮೌಲ್ಯಗಳೂ ಬದಲಾಗಬೇಕು. ಸೋಮೇಶ್ವರನ ಮಗ ಸಿದ್ಧೇಶ, ಈ ಬದಲಾದ ತಲೆಮಾರಿನ ಪ್ರತಿನಿಧಿಯಾಗಿ ನಮ್ಮ ಕಾಲಕ್ಕೆ ಹತ್ತಿರವೂ ಆಗಿದ್ದಾನೆ. ಗಂಗವ್ವನ ಈ ಮೊಮ್ಮಗ ಅತ್ಯಾಧುನಿಕ ನಾಗರಿಕ ಬದುಕಿಗಾಗಿ, ಶ್ರೀಮಂತಿಕೆಗಾಗಿ ಹಪಹಪಿಸುವಾತ. ಉನ್ನತ ಪದವಿ ಗಳಿಸಲು ಇವನು ತೋರುವ ಆಸಕ್ತಿ ಜ್ಞಾನಾರ್ಜನೆಗಾಗಿ ಇರದೆ ಜೊತೆಯವರೊಂದಿಗೆ ಪೈಪೋಟಿ ನಡೆಸಿ ತಾನು ಮೊದಲಿಗನಾಗುವ ರ್‍ಯಾಂಕ್ ಗಳಿಕೆಯ ಹಂಬಲವಾಗಿದೆ. ಸಿರಿವಂತಿಕೆಯ ಏಣಿ ಏರಲಿಕ್ಕಾಗಿ ನಗರದ ಸಿರಿವಂತ ಅಧಿಕಾರಿ ಲಿಂಗಕ್ಕಿಮಠರಿಗೆ ಮನೆ ಅಳಿಯನಾದವನು. ವಿದೇಶೀಯ ಉನ್ನತ ಶಿಕ್ಷಣದ ಮಹತ್ವಾಕಾಂಕ್ಷೆಗಾಗಿ ತನ್ನ ಹೆತ್ತವರನ್ನೂ ಅಜ್ಜಿ-ತಂದೆಗಳ ಕಾಯಕ ಭಕ್ತಿಯನ್ನು, ಮನೆತನದ ಸ್ವಾಭಿಮಾನದ ಪ್ರತಿಷ್ಠೆಗಳನ್ನು ಬಲಿಯಾಗಿಸಲು ಸ್ವಲ್ಪವೂ ಅಳುಕದಂಥ ಉದ್ಧಟತನ, ಸ್ವಾರ್ಥಗಳೇ ಇವನ ಶಕ್ತಿಗಳು.

ಈ ಕಾದಂಬರಿಯ ಆರಂಭದ ಘಟ್ಟದಲ್ಲಿ ಗರ್ಭಸ್ಥ ಸ್ಥಿತಿಯಿಂದಲೂ ತನ್ನ ಕೂಸನ್ನು ಕಾಯುತ್ತ ಅದರ ಉಳಿವಿಗಾಗಿ ತಾನೂ ಸಾಯದೆ ಬದುಕಿ ಉಳಿದು ಹಡೆದ ಮಗನನ್ನು ಒಬ್ಬ ಮನುಷ್ಯನನ್ನಾಗಿಸಲು ಅಂತಃಕರಣವನ್ನು ಹರಿಸುವ ತಾಯ್ತನದ ಚಿತ್ರಣವಿದ್ದರೆ ಅದೇ ಮೂರನೆಯ ಪೀಳಿಗೆಯಲ್ಲಿ ಪೂರ್ವಸಂಸ್ಕಾರಗಳೆಲ್ಲವನ್ನೂ ಧಿಕ್ಕರಿಸಿ ಅಜ್ಜಿ, ಅಪ್ಪಂದಿರ ಮೌಲ್ಯಗಳನ್ನು ಅವಹೇಳನ ಮಾಡಿ ತನ್ನ ಸ್ವಾರ್ಥಸಾಧನೆಯಲ್ಲಿ ಮುಳುಗುವ ಮಗ ಸಿದ್ಧೇಶನಲ್ಲಿ ಪುತ್ರವ್ಯಾಮೋಹದಿಂದಾಗಿ ಯಾವ ತಪ್ಪನ್ನೂ ಕಾಣಬಯಸದ ಅವನ ತಾಯಿ ಕೆಂಪವ್ವ, ಅವನಿಂದಾಗಿಯೇ ಸಾಯುವಂಥ ತಾಯಿ ಮಗನ ಸಂಬಂಧದ ವಿಪರ್ಯಾಸದ ಚಿತ್ರ ಎದುರಾಗುತ್ತದೆ. ಸಹಜವೆಂಬಂತೆ ಈ ಕೆಂಪವ್ವ 'ಭವ್ಯ' ವ್ಯಕ್ತಿತ್ವದ ಅತ್ತೆ-ಗಂಡನ ನೆರಳಿನಲ್ಲಿ ಬಾಳುವ ತನ್ನ ತನವಿಲ್ಲದ ದುರ್ಬಲ ವ್ಯಕ್ತಿಯೂ ಆಗಿರುವುದನ್ನು ಗಮನಿಸಬೇಕು. ಈ ಬಗೆಯ ಇಮ್ಮುಖ ಮಾದರಿಗಳೇ ಈ ಕಾದಂಬರಿಯ ಕಥೆಯ ಮುನ್ನಡೆಗೆ ಸಾಧನಗಳೂ ಹೌದು.





ಕಾಯಕ ಕೈಲಾಸ
ಲೇ : ಸುನಂದಾ ಬೆಳಗಾಂವಕರ
ಪ್ರ : ಅಂಕಿತ ಪುಸ್ತಕ ಪ್ರಕಾಶನ
ಪುಟ : 520
ಬೆಲೆ : ರೂ. 295/-

ಸಾಂಪ್ರದಾಯಿಕ ಜೀವನಶ್ರದ್ಧೆ x ಆಧುನಿಕ, ಕೃತಕ, ಆಡಂಬರಪರತೆ; ದಾರ್ಶನಿಕ ಎಂಬಷ್ಟು ಉನ್ನತ ನೆಲೆಯ ಅಂತಃಕರಣ ಜೀವನಾದರ್ಶ, ಸಂಯಮ x ಎದೆಯ ದ್ರವವೇ ಬತ್ತಿ ಹೋದ ಕ್ರೂರತೆ, ವಂಚಕತನ ದುರಾಚಾರದ ವ್ಯಾವಹಾರಿಕತೆ. ಹೀಗೆ ಸಾತ್ವಿಕ-ರಾಜಸ-ತಾಮಸ ಗುಣ, ಲಕ್ಷಣ, ಮೌಲ್ಯಗಳ ತಾಕಲಾಟವನ್ನು ಕಾದಂಬರಿಯುದ್ದಕ್ಕೂ ವಿಶೇಷವಾಗಿ ನಡು ಮತ್ತು ಅಂತಿಮ ಭಾಗಗಳಲ್ಲಿ ಕಾಣಬಹುದು. ಇವು ವಿರುದ್ಧ-ದ್ವಂದ್ವಗಳೆಂಬಂತೆ ತೀಕ್ಷ್ಣವಾಗಿ ಮುಖಾಮುಖಿ ಆಗದ ಹಾಗೆ ಕಥೆಯ ಸಂಯೋಜನೆ ಇರುವುದು ಗಮನಿಸಬೇಕಾದ ಸಂಗತಿ.

ಬೇಜವಾಬ್ದಾರಿತನದಿಂದ ಗರ್ಭಿಣಿ ಹೆಂಡತಿಯನ್ನು ಬಿಟ್ಟು ಹೋಗಿದ್ದ ಗಂಡ ಶಿವಲಿಂಗಪ್ಪನ ಬರವಿಗಾಗಿಯೇ ಹಾತೊರೆಯುತ್ತಾ ಪಾತಿವ್ರತ್ಯ ಕಾಯ್ದುಕೊಳ್ಳುವ ಗಂಗವ್ವ ಅವನು ಹಿಂದಿರುಗಿದಾಗ ಎಳ್ಳಷ್ಟು ಕಹಿಯಿಲ್ಲದೆ ಮತ್ತೆ ಸ್ವೀಕರಿಸಿ, ಅವನೊಂದಿಗೆ ಕೈಲಾಸಯಾತ್ರೆ ಕೈಗೊಳ್ಳುವ ಧನ್ಯತೆಗೆ ಸಲ್ಲುವ ಸಾಧ್ವಿ ಶಿವಶರಣೆಯಾಗುತ್ತಾಳೆ. ಈಕೆಯ ಇಂಥ ಆದರ್ಶೀಕೃತ ನೆಲೆಯನ್ನು ಜನಕ್ಕೆ ಮಾನ್ಯವಾಗಿಸುವ ಕೆಲಸವನ್ನು ಸಿದ್ಧಾರೂಢ ಮಠಾಧೀಶರು ನೀಡುವ ಉಪದೇಶದ ಮೂಲಕ ಸಾಧಿಸಲು ಯತ್ನಿಸಲಾಗಿದೆ.

ಗಂಗವ್ವನ ನಿರ್ಗಮನದೊಂದಿಗೆ ಕಥೆಯಲ್ಲಿ ಪ್ರವಹಿಸುತ್ತಿದ್ದ ಧಾರ್ಮಿಕ ಶ್ರದ್ಧೆಯ ಅಂತಃಸತ್ವವು ಕರಗುವಂತಾಗುತ್ತದೆ. ಈ ಕೊರತೆಯನ್ನು ಸರಿದೂಗಿಸುವ ಹಾಗೆ ಸಿದ್ಧಾರೂಢ ಮಠ, ಮಠದ ಅನುಯಾಯಿಗಳು ಅದಕ್ಕಿಂತ ಮುಖ್ಯವಾಗಿ ಮಠಾಧೀಶರೇ ಈ ಕಾದಂಬರಿ ಪಾತ್ರಗಳ ಬದುಕಿನ ನಡುವೆ ಪ್ರವೇಶಿಸುತ್ತಾರೆ. ಕಾದಂಬರಿಯ ಉತ್ತರಾರ್ಧದಲ್ಲಿ ಸೋಮೇಶ್ವರ-ಸಿದ್ಧೇಶರ ಬಾಳಿನಲ್ಲಿ ಈ ಮಠಾಧೀಶರ ನಡುವೆ ಪ್ರವೇಶಿಸುವಿಕೆಗೆ ತುಂಬ ಮುಖ್ಯ ಪಾತ್ರವಿದೆ. ಸೋಮೇಶ್ವರ ತಾಯಿಯ ಹಾದಿಯಲ್ಲೇ ಸಾಗಿ ಶಿವಸಾನ್ನಿಧ್ಯದ ಅನುಭಾವವನ್ನೂ ಹೊಂದಿ, ತಾಯಿಯಂತೆಯೇ ಕೈಲಾಸವಾಸಿಯಾದರೆ, ಅಜ್ಜಿ ಮತ್ತು ತಂದೆಯ ಕಾಯಕ-ಶರಣತ್ವದ ಮಾದರಿಯನ್ನು ತಿರಸ್ಕರಿಸಿ ಹೋಗಿದ್ದ ಸಿದ್ಧೇಶ ಕೊನೆಗೆ ಅವರ ಬದುಕಿನ ಹಿರಿಮೆಯನ್ನು ಕಂಡುಕೊಳ್ಳುವ ನೆಂಬಲ್ಲಿಗೆ ಕಾದಂಬರಿಯ ಕಥೆ ಸಮಾರೋಪಗೊಳ್ಳುತ್ತದೆ. ಧಾರವಾಡದ ಸೀಮೆಯ ಲಿಂಗಾಯತ ಸಮುದಾಯದ ಬಹುಸ್ತರೀಯ ಜನಜೀವನ ಅನುಭವಗಳ, ಊಟೋಪಚಾರಗಳ ಸಂಕೀರ್ಣ ನೇಯ್ಗೆ ಈ ಕಾದಂಬರಿಯಲ್ಲಿದೆ.

ಜೀವನವನ್ನು ಉತ್ತಮ x ಅಧಮ, ಸರಿ x ತಪ್ಪು ಎಂಬ ವಿರುದ್ಧ ದ್ವಂದ್ವಗಳಲ್ಲಿ ಸರಳೀಕರಿಸುವುದು ಸುನಂದಾ ಅವರ ದೃಷ್ಟಿಕೋನವಲ್ಲ. ಭಾವತೀವ್ರತೆಯಿಂದ ಬರೆಯುವ ಶೈಲಿಯಲ್ಲಿ ಹೀಗೆ ಅವರ ಒಲವು, ಪಕ್ಷಪಾತಗಳು ಸ್ಪಷ್ಟವೇ ಆಗಿದ್ದರೂ ಈ ಧ್ರುವಗಳ ನಡುವಿನ ಇತರ ಮಾದರಿಗಳನ್ನೂ ಅವರ ಕೃತಿ ತೋರಿಸಲೆತ್ನಿಸುತ್ತದೆ. ರುದ್ರಣ್ಣ ಮಾಮಜ್ಜ, ವೃಷಭೇಂದ್ರ ಮತ್ತು ಅವನ ಕೈಹಿಡಿದ ಶಾಂಭವಿ (ಸಿದ್ಧೇಶನ ತಂಗಿ) ಮೊದಲಾದವರು ಈ ಅಂತರ್ ಮಾದರಿಗಳಾಗಿ ಎರಡು ಭಿನ್ನ ಜೀವನದ ಸ್ತರಗಳನ್ನು ಬೆಸೆಯುವ ಕೊಂಡಿಗಳಾಗಿ ಕಾಣಿಸಿಕೊಳ್ಳುವುದರಿಂದ ಶಿಕ್ಷಣ, ಆಧುನಿಕ ನಾಗರಿಕತೆಯ ಉಪಯುಕ್ತ ಮೌಲ್ಯಗಳನ್ನೂ ಕಾದಂಬರಿ ಕೈಬಿಟ್ಟಿಲ್ಲ-ಇದೇ ಸಮಾಧಾನದ ಸಂಗತಿ.

'ಕಾಯಕ-ಕೈಲಾಸ' ಒಟ್ಟು ರೂಪದಲ್ಲಿ ಅಲ್ಲಲ್ಲಿ ಶಿಥಿಲವಾಗಿ ಕೆಲವೆಡೆ ಜಾಳಾಗಿ, ವಾಚ್ಯವೂ ಆಗುವುದರಿಂದ ಏಕೀಕೃತ ಶೈಲಿಯ ಬಂಧವೊಂದನ್ನು ಅದರಲ್ಲಿ ಕಾಣಲು ಕಷ್ಟವಾಗುತ್ತದೆ. ಆದರೆ ಕಥನದ ನಡುವೆ ಜೋಡಿಸಿಕೊಂಡು ಬರುವ ವಚನಗಾಯನ, ಒಡಪುಗಳು ಜನಪದ ಗೀತೆಗಳು, ಭಜನೆ, ಗುರುಗಳ ಶರಣತತ್ತ್ವೋಪದೇಶಗಳು ಮುಂತಾದ ಸಾಂಸ್ಕೃತಿಕ ಅಂಶಗಳ ಮೂಲಕ ಉದ್ದೇಶಪೂರ್ವಕ ವಾಗಿಯೇ ಕಾದಂಬರಿಯ ಬಂಧವನ್ನು ಸಡಿಲವಾಗಿ ಹರಿಸಲು ನೆರವಿಗೆ ಬರುವಂತಹ ತಂತ್ರವನ್ನು ಲೇಖಕಿ ಬಳಸುವುದರಿಂದ ಈ ದೀರ್ಘ ಕೃತಿಯ ಶೈಥಿಲ್ಯ ಎನ್ನುವುದು ಜಿಜ್ಞಾಸೆಗೆ ಅರ್ಹವಾಗಿದೆ. ಒಟ್ಟಾರೆ ಹೇಳುವುದಾದರೆ ಇದರಲ್ಲಿ ವರ್ಣಿತವಾಗಿರುವ ಶಾಲ್ಮಲಾ ನದಿಯ ಹಾಗೆಯೇ ನಿಧಾನವಾಗಿ, ತಿಳಿಯಾಗಿ, ಬಗ್ಗಡವನ್ನು ದಡಕ್ಕೆ ತಳ್ಳುತ್ತಾ ಜುಳು ಜುಳು ಹರಿವ ಸಂಪನ್ನ ಬದುಕಿನ ನದಿಯಾಗಿದೆ 'ಕಾಯಕ ಕೈಲಾಸ' ಕಾದಂಬರಿ ಎನ್ನಬಹುದು.

(13-11-2011ರಂದು ಈ ಕೃತಿಯ ಬಿಡುಗಡೆ ಸಂದರ್ಭದಲ್ಲಿ ನೀಡಲಾದ ಉಪನ್ಯಾಸ)

❑

▮ ಮಾನಸ ವೇದಿಕೆಯ ಆಹ್ವಾನ ▮

ಚರ್ಚೆ, ವಿಚಾರ ವಿನಿಮಯ, ಆತ್ಮೀಯರ ಭೇಟಿ 'ಮಾನಸ ಪತ್ರಿಕೆ'ಯ ಬಗ್ಗೆ ಸಲಹೆ ಸೂಚನೆ, ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆ, ಕೊಂಚ ಹರಟೆ, ಕೊಂಚ ಕ್ಯಾಂಟೀನ್ ಕಾಫಿಗಾಗಿ ಪ್ರತಿ ತಿಂಗಳೂ ಎರಡನೇ ಶುಕ್ರವಾರ (ನಿಮ್ಮ ಕೋರಿಕೆಯಂತೆ ವಾರ ಬದಲಾಗಿದೆ) ಸಂಜೆ 5.30 ಗಂಟೆಗೆ ಆಸಕ್ತರೆಲ್ಲರೂ ಸೇರೋಣ. ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದ ಮೆಟ್ಟಿಲುಗಳಿಗೂ 'ಮಾನಸ ವೇದಿಕೆ'ಗೂ ಒಂದು ಅವಿನಾಭಾವ ಸಂಬಂಧವಿದೆ. ಮಹಿಳಾ ಧ್ವನಿಗಾಗಿ ಸಾರ್ವಜನಿಕ ಸ್ಥಳವನ್ನು ಉಪಯೋಗಿಸುವುದರ ಹಿಂದೆ ಸ್ತ್ರೀವಾದದ ಪರಿಕಲ್ಪನೆಯೂ ಇದೆ. ಈ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು **ಡಿಸೆಂಬರ್ 9 ಶುಕ್ರವಾರ ಸಂಜೆ** ನೀವು ಬನ್ನಿ. ನಿಮ್ಮ ಗೆಳತಿಯರನ್ನೂ ಕರೆತನ್ನಿ.

-ಮಾನಸ ವೇದಿಕೆ

ಗೋರಿಯೊಳಗಿಂದ

05-02-1967 ಜನನ
15-04-2010 ಮರಣ
ಸಂಗಮರವರಿಕಲ್ಲ ಗುಡಿಸುತ್ತ
ವೀರಣ್ಣ ಕಣ್ಣಾಡಿಸುತ್ತಾನೆ
ಈ ಗೋರಿಗೆ ನಾಳೆ ಮನೆಯವರು
ಬರುತ್ತಾರೆ ಹೂಗುಚ್ಛ ಇಡುತ್ತಾರೆ
ತನ್ನ ಜೇಬೂ ಭಾರವಾಗುತ್ತದೆಂದು

ಬಿಕ್ಕುತ್ತಾಳೆ ಒಳಗಿರುವ ಮೇರಿ
ತಾನು ಗೋರಿ ಸೇರಿ ವರ್ಷವಾಯಿತೆಂದು
ತಾನಿಲ್ಲದೆ ಜಾನಿ ಹೇಗಿರಬಹುದು
ಮಕ್ಕಳು ತನ್ನ ಮರೆತಿರುವರೆ
ಕೆನ್ನೆಗೆ ಕೊನೆಯ ಮುತ್ತಿಟ್ಟು ಹೋದ
ಜಾನಿ ಮತ್ತೆ ಬಂದಿಲ್ಲ ಇಲ್ಲಿಗೆ
ನಾಳೆ ಬರುತ್ತಾನೆ ಎಂಬ ಆಸೆಗೆ
ಗುಳಿ ಕಣ್ಣಲ್ಲೆ ತಣ್ಣಗೆ ಕಾಯುತ್ತಲಿದ್ದಾಳೆ

ಪಕ್ಕದ ಗೋರಿಯ ರೂಪ ಇಂದೇಕೋ ನರಳುತ್ತಿದ್ದಾಳೆ
ನರಳಾಟ ಹೊಸತಲ್ಲ ಇಂದು ಅತಿ ಏಕೋ
ರೂಪ... ರೂಪ... ಎಂಬ ಕೂಗಿಗೆ
ವಿರೂಪಗೊಂಡು ಕುರೂಪಳಾದ ರೂಪ
ಬಿಕ್ಕುತ್ತಾಳೆ ಕೇಳಿಯೂ ಕೇಳಿಸದಂತೆ

ರೂಪ ಇಲ್ಲಿಗೆ ಬಂದ ದಿನ ನನಗಿನ್ನು ನೆನಪಿದೆ
ಬಿಳಿಬಟ್ಟೆಯಲ್ಲಿ ಮುದ್ದೆಯಂತೆ ಸುತ್ತಿ
ಬಸುರಿಹೆಂಗಸು ಸಾಯಬಾರದ ವಯಸ್ಸು
ಅದ್ಯಾಕೋ ಅವರಮನೆ ಒಲೆ ಕಿಚ್ಚು ಹಚ್ಚಿಸಿತ್ತು
ಕ್ಷಣ ಮಾತ್ರದಲ್ಲಿ ರೂಪ ಬೆಂಕಿ ಮುದ್ದೆಯಾಗಿದ್ದಳಂತೆ

ತನ್ನ ಕಂದನ ಮಿಸುಕಾಟದಿಂದ ನರಳುವಾಗಲೂ
ತನ್ನತ್ತೆ ತನ್ನ ಗಂಡ ಯಾರೂ ತನ್ನನ್ನು ಸುಡಲಿಲ್ಲ
ತನ್ನದೇ ತಪ್ಪೆಂದು ಒಪ್ಪಿ ಅವರೆಲ್ಲ ನಿಟ್ಟುಸಿರು
ಬಿಡುವಂತೆ ಮಾಡಿ ತಾನು ಈಗ ನರಳುತ್ತಾಳೆ
ಚಿರಶಾಂತಿಗೆ ಭಂಗ ತರುತ್ತಿದೆ ಕಂದ
ಹೊರಳಾಡಿ ನರಳಾಡಿ ಹೊರಬಾರದೆ ಮಿಡುಕುತ್ತಿದೆ

ರೂಪ... ರೂಪ... ಆಳ ಗರ್ಭದಿಂದ
ಮತ್ತೆ ಮತ್ತೆ ಕೂಗಿದೆ
ಮೇರಿಯ ಜೊತೆ ಇಂದೇಕೋ
ಮಾತು ಬೇಡವಾಗಿ ರೂಪ ಮೌನವಹಿಸಿದ್ದಾಳೆ
ನಡುಮಧ್ಯೆ ಬದುಕ ನಿಲ್ಲಿಸಿ ಬಂದು
ಇಲ್ಲಿ ಗೋರಿಯಾಗಿರುವ ಮೇರಿ
ನಾಳೆಗಾಗಿ ಕಾಯುತ್ತಲಿದ್ದಾಳೆ

ನೆಲದಾಳದ ವ್ಯವಹಾರವೊಂದೂ
ಅರಿಯದ ವೀರಣ್ಣ ಮೇರಿಯ
ಗೋರಿಯ ಮೇಲೆ ಕುಂತು
ಬೀಡಿ ಹಚ್ಚುತ್ತಾನೆ
ಗೋರಿಯ ಮೇಲೆ ಮಲಗಿ
ಗರಿನೋಟುಗಳ ಕನಸು ಕಾಣುತ್ತಾನೆ.

■ ಡಾ. ಎಸ್.ಪಿ. ಪದ್ಮಿನಿ ನಾಗರಾಜ



ಮತಾಂಧ ಶಕ್ತಿಗಳನ್ನು ವಿರೋಧಿಸಿ

ಇತ್ತೀಚಿನ ದಿನಗಳಲ್ಲಿ ಹುಡುಕಿ ತಂದಾದರೂ ವಿವಾದ ಎಬ್ಬಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಎಲ್ಲವನ್ನೂ ಗುಮಾನಿಯಿಂದ ನೋಡುವ ಅಥವಾ ಯಾರದೋ ಹಿತಾಸಕ್ತಿಗಾಗಿ ಮತ್ತಾರನ್ನೋ ಎತ್ತಿಕಟ್ಟಿ ಛೂಬಿಡುವ ಪ್ರವೃತ್ತಿಯೂ ಕಾಣುತ್ತಿದೆ. ಸಂಘರ್ಷವೇ ಗುಣವಾದ ಇಂಥ ಕೆಲವು 'ಶಕ್ತಿ'ಗಳಿಗೆ ಮೊಸರಿನಲ್ಲಿ ಕಲ್ಲು ಸಿಗುವುದು ಸಹಜ. ಈಗ ಅಂಥವರ ಕೆಂಗಣ್ಣು ನಮ್ಮ ನಡುವಿನ ಗಂಭೀರವಾದ ಲೇಖಕಿ ನಾಗವೇಣಿಯವರತ್ತ ಸರಿದಿದೆ. ಅವರ 'ಗಾಂಧಿ ಬಂದ' ಕೃತಿಗೆ ದಕ್ಕಿದ ಜನಮನ್ನಣೆ, ಗೌರವ ಸಹಿಸದೆ ಲೋಪವೊಂದನ್ನು ಅಗೆದು ತೆಗೆದು, ಕೃತಿಯನ್ನು ಆ ಮೂಲಕ ಲೇಖಕಿಯ ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆದಿದೆ. ಮಡೆಸ್ನಾನದಂಥ ಅಪಮಾನಕರ ಕಂದಾಚಾರವನ್ನು ಅಪ್ಪಿಕೊಳ್ಳುವ ಮನಸ್ಸುಗಳಿಗೆ ಉತ್ತಮ ಸಾಹಿತ್ಯ ಕೃತಿಯೊಂದರಲ್ಲಿ ಲೋಪ ಕಂಡಿದೆ!

ಇನ್ನೂ ದಿ. ಎ.ಕೆ. ರಾಮಾನುಜನ್ ಅವರ ರಾಮಾಯಣ ಕುರಿತ ಲೇಖನದ ವಿವಾದವೇ ಬಗೆಹರಿದಿಲ್ಲ. ಈಗ ಇನ್ನೊಂದು ಪಠ್ಯದ ಬಗ್ಗೆ ಕೂಗೆದ್ದಿದೆ. ಈ ಸಂಗತಿಯನ್ನು ಖಂಡಿಸಿ ತಜ್ಞರು ವಿಶ್ವವಿದ್ಯಾಲಯಕ್ಕೆ ಕಳಿಸಿರುವ ಪತ್ರವನ್ನು ಇಲ್ಲಿ ಪ್ರಕಟಿಸಲಾಗಿದೆ. ಇದರ ಜೊತೆಗೇ ಲೇಖಕಿ ನಾಗವೇಣಿಯವರ ಪತ್ರವನ್ನೂ ಪ್ರಕಟಿಸಿದೆ, ಗಮನಿಸಿ. ಆರೋಗ್ಯವಂತ ಸಮಾಜವನ್ನು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರೀತಿಸುವ ಎಲ್ಲ ಶುದ್ಧ ಮನಸ್ಸುಗಳೂ ನಾಗವೇಣಿಯವರನ್ನು, ಆ ಮೂಲಕ ಮತಾಂಧ ಶಕ್ತಿಗಳನ್ನು ಬೆಂಬಲಿಸುವ ದುಷ್ಟವ್ಯವಸ್ಥೆ ಮತ್ತು ಅದರ ಹಿಂಬಾಲಕರನ್ನು ಪ್ರತಿಭಟಿಸಲಿ.

ಮಾನಸ ಬಳಗ ನಾಗವೇಣಿಯವರನ್ನು ಬೆಂಬಲಿಸುತ್ತದೆ ಮತ್ತು ಇಂಥ ಕ್ರೌರ್ಯವನ್ನು ಎದುರಿಸುವ ಶಕ್ತಿಯನ್ನು ಆಕೆಗೆ ತುಂಬಿಕೊಡಲು ಬಯಸುತ್ತದೆ.

ಸಂಪಾದಕ ಬಳಗ
ನಮ್ಮ ಮಾನಸ

ಇವರಿಗೆ,
ಮಾನ್ಯ ಕುಲಪತಿಗಳು
ಮಂಗಳೂರು ವಿಶ್ವವಿದ್ಯಾಲಯ
ಮಂಗಳೂರು

ಮಾನ್ಯರೇ

ಸುಮಾರು ಹನ್ನೆರಡು ವರ್ಷಗಳ ಹಿಂದೆ ಪ್ರಕಟಗೊಂಡ ಶ್ರೀಮತಿ ಎಚ್. ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿ ಕನ್ನಡಿಗರಿಗೆ ತಲುಪಿದೆ ಎನ್ನುವುದಕ್ಕೆ ಅದು ನಾಲ್ಕು ಮುದ್ರಣಗಳನ್ನು ಕಂಡದ್ದೇ ಸಾಕ್ಷಿ. ಕರಾವಳಿ ಭಾಗದ ಸಂಸ್ಕೃತಿಯನ್ನು ತುಂಬ ಸೂಕ್ಷ್ಮವಾಗಿ ಅವಲೋಕಿಸಿರುವ ಒಂದು ಶ್ರೇಷ್ಠ ಕಾದಂಬರಿಯಿದು. ಗಾಂಧಿ ಮತ್ತು ಸ್ವಾತಂತ್ರ್ಯ ಹೋರಾಟದಂತಹ ರಾಷ್ಟ್ರೀಯ ವಸ್ತುವೊಂದನ್ನು ಪ್ರಾದೇಶಿಕ ಚೌಕಟ್ಟಿನಲ್ಲಿರಿಸಿ ಕೋಮು ಜ್ವಾಲೆಯಿಂದ ತಲ್ಲಣಿಸಿರುವ ದಕ್ಷಿಣ ಕನ್ನಡದ ಮಣ್ಣಿಗೆ ವೈಚಾರಿಕ ತಂಪನ್ನೆರೆದ ಈ ಕೃತಿ ಪ್ರತಿಷ್ಠಿತ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಚದುರಂಗ ಪ್ರಶಸ್ತಿ, ಎಸ್.ಎಸ್.ಭೂಸನೂರಮಠ ಪ್ರಶಸ್ತಿ ಹಾಗೂ ಕರ್ನಾಟಕ ಲೇಖಕಿಯರ ಸಂಘದ ಪ್ರಶಸ್ತಿಯನ್ನು ಪಡೆದಿದ್ದು, ನಾಟಕ ರೂಪದಲ್ಲೂ ಇದು ಕನ್ನಡಿಗರ ಮನಗೆದ್ದಿದೆ.

ಇಂತಹ ಶ್ರೇಷ್ಠ ಕೃತಿಯನ್ನು ಮಂಗಳೂರು ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಡಿ ಬರುವ ಎಲ್ಲ ಕಾಲೇಜುಗಳಲ್ಲಿ ಪ್ರಥಮ ಬಿ.ಎ. ಪದವಿ ಕನ್ನಡ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವನ್ನಾಗಿ ತನ್ನ ಕನ್ನಡ ಅಧ್ಯಯನ ಮಂಡಳಿಯ ಶಿಫಾರಸ್ಸಿನ ಮೇಲೆ ಆಯ್ಕೆ ಮಾಡಿತ್ತು. ಅಂತೆಯೇ ಈಗ ಇದರ ಒಂದು ಸೆಮಿಸ್ಟರ್ ಓದುವಿಕೆಯೂ ಮುಗಿದಿದೆ. ಆದರೆ ಕಳೆದ ಹನ್ನೆರಡು ವರ್ಷಗಳಲ್ಲಿ ಕನ್ನಡದ ಓದುಗರಿಗೆ ಕಂಡು ಬಾರದ ಲೋಪಗಳು ಈ ಕರಾವಳಿಯ ಕೆಲವು ಸಮುದಾಯಗಳಿಗೆ ಈಗ ತಟ್ಟನೆ ಕಾಣಿಸಿದ್ದು, ಆ 'ಶಕ್ತಿ'ಗಳೆಲ್ಲ ಈಗ ಒಟ್ಟಾಗಿ ಈ ಪುಸ್ತಕವನ್ನು ತಕ್ಷಣವೇ ರದ್ದು ಮಾಡುವಂತೆ ವಿಶ್ವವಿದ್ಯಾಲಯಕ್ಕೆ ಒತ್ತಡವನ್ನು ಹೇರುತ್ತಿವೆ.

ವಿಶ್ವಕರ್ಮ ಜನಾಂಗದವರನ್ನು ಅವಮಾನಿಸುವ ಮಾತುಗಳು ಈ ಕೃತಿಯಲ್ಲಿ ಇವೆಯೆಂಬ ಆರೋಪವಿದ್ದು, ವಾಸ್ತವದಲ್ಲಿ ಅದು ಸತ್ಯವಲ್ಲ . ಈ ಕಾದಂಬರಿಯಲ್ಲಿ ಬರುವ ಅಂತರ್‌ಧರ್ಮೀಯ ವಿವಾಹದಿಂದ ಬಹುಶಃ ರೊಚ್ಚಿಗೆದ್ದಿರಬಹುದಾದ ಮತಾಂಧಶಕ್ತಿಗಳು ವಿಶ್ವಕರ್ಮ ಜನಾಂಗದವರನ್ನು ಇಲ್ಲಿ ಎತ್ತಿ ಕಟ್ಟಿರುವ ಸಾಧ್ಯತೆಯಿದೆ. ಸುಮಾರು ಒಂದು ಶತಮಾನದ ಹಿಂದೆ ನಡೆದಿರಬಹುದಾದ ಕಲ್ಪಿತ ಘಟನೆಗಳನ್ನಾಧರಿಸಿ ರಚಿಸಿರುವ ಈ ಕೃತಿಯಲ್ಲಿ ಪ್ರಯೋಗಿಸಿರಬಹುದಾದ ಕೆಲವು ಶಬ್ದಗಳ ಪ್ರಸ್ತುತತೆಯನ್ನು 'ಇಂದು' ಉದ್ದೇಶಪೂರ್ವಕವಾಗಿ ಅಪಾರ್ಥಮಾಡಿಕೊಂಡು ಇಲ್ಲಿ ವಿವಾದವನ್ನು ಸೃಷ್ಟಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯವು ಯಾವುದೇ ಅಸಾಂಸ್ಕೃತಿಕ ಒತ್ತಡಕ್ಕೆ ಮಣಿಯಬಾರದೆಂದು ನಾವೆಲ್ಲ ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ಪಠ್ಯಪುಸ್ತಕ ಮಂಡಳಿಯಲ್ಲಿರುವ ವಿದ್ವಾಂಸರು ಆಯ್ಕೆ ಮಾಡಿರುವ ಈ ಕೃತಿಯನ್ನು ರಾಜಕೀಯ ಕಾರಣಕ್ಕೆ ಹಿಂತೆಗೆದುಕೊಳ್ಳುವುದು ಕೆಟ್ಟ ಸಂಪ್ರದಾಯಕ್ಕೆ ಕಾರಣವಾಗಬಹುದಾದ್ದರಿಂದ ಈ ಬಗೆಗೆ ಬಹು ಎಚ್ಚರಿಕೆಯಿಂದ ತೀರ್ಮಾನ ತೆಗೆದುಕೊಳ್ಳಲು ವಿಶ್ವವಿದ್ಯಾಲಯದ ಕುಲಪತಿಗಳನ್ನು ನಾವು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇವೆ.

ಗೌರವಪೂರ್ವಕ ವಂದನೆಗಳೊಡನೆ,

ಡಾ. ಬರಗೂರು ರಾಮಚಂದ್ರಪ್ಪ, ಡಾ. ಜಿ.ಎಸ್.ಎಸ್, ಡಾ. ಕಂಬಾರ,
ಜಿ.ಕೆ.ಗೋವಿಂದರಾವ್, ಕೆ.ಮರುಳಸಿದ್ದಪ್ಪ, ಡಾ.ಜಿ.ರಾಮಕೃಷ್ಣ, ಡಾ. ಎನ್. ಗಾಯತ್ರಿ
ಡಾ. ವಸುಂಧರಾ ಭೂಪತಿ, ಡಾ. ಆರ್. ಪೂರ್ಣಿಮಾ,
ಡಾ. ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಎಸ್.ಜಿ.ಸಿದ್ಧರಾಮಯ್ಯ

'Low Standard, Low Status' !

■ ಎಚ್. ನಾಗವೇಣಿ

ತಾನು ಹೆರಲಿರುವ ಮಗು, ಮುಂದೊಂದು ದಿನ ಸಮಾಜದಲ್ಲಿ ವಿನಾ ಕಾರಣ ವಿವಾದಕ್ಕೆ ಒಳಗಾಗಬಹುದು ಎಂಬುದು ತಾಯಿಗೆ ಮೊದಲೇ ತಿಳಿದರೆ, ಆಕೆ ಆ ಮಗು ಈ ಜಗದೊಡಲಿಗೆ ಬರುವುದೇ ಬೇಡವೆಂದು ಬಯಸುತ್ತಾಳೋ ಏನೋ! ಇದೀಗ ನಾನಂತೂ ಆ ಸ್ಥಿತಿಯಲ್ಲಿರುವ 'ತಾಯಿ'.

ಇಂದಿಗೆ ಹನ್ನೆರಡು ವರ್ಷಗಳ ಹಿಂದೆ 'ಗಾಂಧಿ ಬಂದ' ಎಂಬ ಸೃಜನಶೀಲ ಕೃತಿಯನ್ನು ಬರೆಯುವಾಗ ನನ್ನೆದುರು ಇದ್ದಿದ್ದು ರಾಷ್ಟ್ರೀಯ ವಸ್ತುವೊಂದನ್ನು ತಂದು ತುಳುನಾಡಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಚೌಕಟ್ಟಿನಲ್ಲಿಟ್ಟು, ಕೋಮು ಜ್ವಾಲೆಯಿಂದ ತಲ್ಲಣಿಸುತ್ತಿದ್ದ ತುಳುವ ಮಣ್ಣಿಗೆ ವೈಚಾರಿಕ ತಂಪನ್ನೆರೆಯಬೇಕು ಎಂಬುದು ಮಾತ್ರ. ಹಾಗೆ ಬರೆದ ಆ ಕೃತಿ ಪ್ರಕಟವಾದ ವರ್ಷವೇ ಮರುಮುದ್ರಣಗೊಂಡು ನಾಡಿನ ಕೆಲವು ಪ್ರತಿಷ್ಠಿತ ಪ್ರಶಸ್ತಿಗಳಾದ 'ಚದುರಂಗ ಪ್ರಶಸ್ತಿ', ಎಸ್.ಎಸ್.ಭೂಸನೂರಮಠ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ಕರ್ನಾಟಕ ಲೇಖಕಿಯರ ಸಂಘದ ಪ್ರಶಸ್ತಿಯನ್ನು ಬಾಚಿಕೊಂಡು ನನ್ನನ್ನೂ ಈ ನಾಡು ಬರಹಗಾರ್ತಿಯನ್ನಾಗಿ ಗುರುತಿಸುವಂತೆ ಮಾಡಿತು.

ನಾಟಕರೂಪದಲ್ಲೂ ಅಲೆದ ಈ 'ಗಾಂಧಿ ಬಂದ' ಕೃತಿ, ಇಂದಿನವರೆಗೆ ನಾಲ್ಕು ಮುದ್ರಣಗಳನ್ನು ಕಂಡಿದ್ದು, ಸದ್ಯ ಇದು ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಮಂಡಳಿಯಿಂದ ಆಯ್ಕೆಗೊಂಡು, ಅದರ ವ್ಯಾಪ್ತಿಯಡಿ ಬರುವ ಪದವಿ ಕಾಲೇಜುಗಳಿಗೆ ಪಠ್ಯಪುಸ್ತಕವಾಗಿದೆ. ಅಂತೆಯೇ ಈಗ ವಿದ್ಯಾರ್ಥಿಗಳ ಒಂದು ಸೆಮಿಸ್ಟರ್ ಪರೀಕ್ಷೆಯೂ ಮುಗಿದಿದೆ. ಮಕ್ಕಳ ಈ ಪರೀಕ್ಷೆ ಮುಗಿಯುತ್ತಲೇ ಈ ನನ್ನ ಕೃತಿಯ ಮೇಲೆ ಹಲವು ಅಸಮಾಧಾನಿತ ಮನಸ್ಸುಗಳು ಇದ್ದಕ್ಕಿದ್ದಂತೆ ಜಾತಿವಾರು ಗುಂಪುಗಳಾಗಿ ರೂಪುಗೊಂಡು 'ಲಾಠಿ ಬೀಸುವಿಕೆ'ಯನ್ನು ಆರಂಭಿಸಿರುವುದು ನನ್ನನ್ನು ನೋವಿನ ಅಂಚಿಗೆ ದೂಡಿದೆ.

೧೯೨೦-೧೯೨೭ರ ಕಾಲಘಟ್ಟದ ಕಥಾವಿನ್ಯಾಸವಿರುವ ಈ ಕೃತಿಯಲ್ಲಿ ಅವಿದ್ಯಾವಂತ ಹಾಗೂ ಕೆಳವರ್ಗದ ಪಾತ್ರಗಳು ಆಡುವ ಮಾತುಗಳ ಬಗ್ಗೆ, ನಾನು ಕನಸಿನಲ್ಲೂ ಊಹಿಸಲಾಗದ ಆರೋಪವೊಂದು ವಿಶ್ವಕರ್ಮ ಸಮಾಜದಿಂದ ನನ್ನ ಮೇಲೆ ಬಂದಿರುವುದು ನನ್ನನ್ನು ವಿಷಾದದ ಮಡುವಿನಲ್ಲಿರಿಸಿದೆ. "ಈ ಕೃತಿಯಲ್ಲಿ 'ಆಚಾರಿ' ಎಂಬ ಪದಪ್ರಯೋಗವನ್ನು ಮಾಡಿದ್ದಲ್ಲದೆ, ವಿಶ್ವಕರ್ಮ ಬ್ರಾಹ್ಮಣರನ್ನು ಬ್ರಾಹ್ಮಣರಿಗಿಂತಲೂ ಕೀಳು ಎಂಬಂತೆ ಕಂಡಿದ್ದು, ಅದು ನಮ್ಮ ಮಕ್ಕಳ ತಲೆಯಲ್ಲಿ ಉಳಿಯಲೋಸುಗ ಈಗ ಅದನ್ನು ಪಠ್ಯಪುಸ್ತಕವನ್ನಾಗಿಯೂ ಮಾಡಲಾಗಿದೆ" ಎಂಬುದು ಅವರ ಆರೋಪ.

ಆದರೆ ವಸ್ತುಸ್ಥಿತಿಯನ್ನು ತಿಳಿಯಲು ಅವರು ಸಿದ್ಧರಿಲ್ಲ. ೧೯೨೦-೧೯೨೭ರ ಕಾಲಘಟ್ಟದ ಕಥಾವಿನ್ಯಾಸವಿರುವ ನನ್ನ ಕೃತಿಯಲ್ಲಿ ಅವಿದ್ಯಾವಂತ, ಶ್ರಮಿಕವರ್ಗ, ಕೆಳಸಮುದಾಯದ ಪಾತ್ರಗಳು ಆಡುವ ಮಾತು ಮತ್ತು ಪದಪ್ರಯೋಗಗಳನ್ನು 'ಜಾತಿ ನಿಂದನೆ' ಎಂಬ ತಕ್ಕಡಿಯಲ್ಲಿಟ್ಟು ತೂಗುವುದು ಎಷ್ಟು ಸಮಂಜಸ ಎನ್ನುವುದನ್ನು ಕನ್ನಡದ ಓದುಗರೇ ತೀರ್ಮಾನಿಸಬೇಕಾಗಿದೆ.


ಹಾಗೆ ನೋಡಿದರೆ ನಾನು ಬೆಳೆದದ್ದೇ ಕಮ್ಮಾರ, ಬಡಗಿಗಳ ಕುಟುಂಬಗಳ ಮಧ್ಯೆ. ಅವರ ಆಚಾರ, ವಿಚಾರ ನಡವಳಿಕೆಗಳನ್ನು ನಾನು ಕಣ್ಣಾರೆ ಕಂಡವಳು. ನನ್ನನ್ನು ಹೆತ್ತ ತಾಯಿ, ಹೆತ್ತ ಆರು ತಿಂಗಳಲ್ಲೇ ಪೇಟೆಯಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿ ಹನ್ನೊಂದು ತಿಂಗಳು ನನ್ನಿಂದ ದೂರ ಇರಬೇಕಾದಾಗ ನನ್ನನ್ನು ಎದೆಹಾಲು ನೀಡಿ ಮಮತೆಯಿಂದ ಪೋಷಿಸಿದ ಸಾಕುತಾಯಿ - ನನ್ನ ಅಮ್ಮನ ನಿಕಟವರ್ತಿ - ಲಚುಮಾಚಾರ್ತಿ. ಈ ವಿವರಗಳೆಲ್ಲ ೨೦೦೮ರ ಆಗಸ್ಟ್, 'ವಿಕ್ರಾಂತ ಕರ್ನಾಟಕ'ದ 'ಹೆಣ್ಣು ಮಾಯೆಯಲ್ಲ' ಎಂಬ ಲೇಖನದಲ್ಲಿದೆ.

ಇಂತಹ ಸಾಮರಸ್ಯವುಳ್ಳ ಜಾತಿ ವಾತಾವರಣದಲ್ಲಿ ಬೆಳೆದ ನನ್ನ ಮೇಲೆ ಈ ವಿಶ್ವಕರ್ಮರ ಅಸಹನೆ ಒಂದು ಹಂತದಲ್ಲಿ ನಿಂತಿದ್ದರೆ ಪರವಾಗಿರಲಿಲ್ಲ. ಆದರೆ ಆ ಸಮುದಾಯ ಇನ್ನೂ ಸ್ವಲ್ಪ ಮುಂದುವರಿದು ಲಾಯರ್ ನೋಟೀಸನ್ನೂ ನನಗೆ ತಲುಪಿಸಿದೆ. "ಋಗ್ವೇದ ಮತ್ತು ಕೋರ್ಟ್ ಆರ್ಡರ್‌ಗಳಲ್ಲಿ ನಮ್ಮ ವಿಶ್ವಕರ್ಮ ಸಮುದಾಯವು ಸಮಾಜದ ಇತರ ಎಲ್ಲ ಸಮುದಾಯಗಳಿಗಿಂತ ಉತ್ಕೃಷ್ಟ ಮತ್ತು ಮೇಲು ಎಂದು ಹೇಳಿದ್ದರೂ, ಈ 'ಗಾಂಧಿ ಬಂದ' ಕಾದಂಬರಿಯಲ್ಲಿ ನಾವು ಕೆಳಗೇ ತಳ್ಳಲ್ಪಟ್ಟಿದ್ದೇವೆ" ಎಂಬ ವಿಶ್ವಕರ್ಮರ ಆರೋಪ ಆ ನೋಟೀಸಿನಲ್ಲಿದೆ. ಮಾತ್ರವಲ್ಲ, ಆ ಕೃತಿಯಲ್ಲಿ ಬಳಸಿರುವ ಪದಗಳು ಹಾಗೂ ಭಾಷೆ ಆ ಮಹಿಳೆಯು (ಲೇಖಕಿ) ಮರ್ಯಾದಸ್ಥ ಕುಟುಂಬದಿಂದ ಬಂದಿಲ್ಲ ಮತ್ತು ಆಕೆ ತುಂಬಾ Low standard, Low status ಉಳ್ಳ ಹೆಣ್ಣು ಎಂಬುದನ್ನು ಸಾಬೀತುಪಡಿಸುತ್ತದೆ – ಎಂಬ ಗಂಭೀರ ವಿಚಾರವೂ ಅದರಲ್ಲಿದೆ.

ಬ್ರಹ್ಮದೇವರ ಮುಖದಿಂದ ನೇರವಾಗಿ ಬಂದಿರುವ ಪಾಂಚಾಳ ಅಥವಾ ವಿಶ್ವಕರ್ಮ ಸಮುದಾಯದ ಶ್ರೇಷ್ಠರಿಗೆ, ಮಹಿಳೆಗೂ ತನಗಾದ ಮಾನನಷ್ಟ ಮತ್ತು ಅವಮಾನವನ್ನು ಭಾರತದ ಸಂವಿಧಾನದಡಿ ಪ್ರಶ್ನಿಸುವ ಹಕ್ಕಿದೆ ಎಂಬ ಜ್ಞಾನ ಇಲ್ಲವೇ ಎಂಬುದು ನನಗೆ ನಿಜಕ್ಕೂ ಆಶ್ಚರ್ಯ, ಇರಲಿ. ವಿಶ್ವಕರ್ಮ ಸಮುದಾಯವು 'ಗಾಂಧಿ ಬಂದ' ಪಠ್ಯಪುಸ್ತಕವನ್ನು ಹಿಂತೆಗೆದುಕೊಳ್ಳುವಂತೆ ಮಂಗಳೂರು ವಿಶ್ವವಿದ್ಯಾಲಯಕ್ಕೆ ಎಲ್ಲ ಒತ್ತಡ ತರುತ್ತಿದ್ದಂತೆ, ಕಾರ್ಕಳದ 'ಶಿವಳ್ಳಿ ಬ್ರಾಹ್ಮಣ ಪರಿಷತ್' ಕೂಡಾ ತನ್ನ ಒಂದು ತಕರಾರನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ಬ್ರಾಹ್ಮಣರ ವಿರೋಧವನ್ನು ಸದಾ ಮರೆಯಲ್ಲಿ ಎದುರಿಸಿ ಅಭ್ಯಾಸವಿರುವ ನನಗೆ ಇದೊಂದು ಗಂಭೀರ ಸಂಗತಿಯಲ್ಲ.

ಯಾವುದೇ ಮೇಲ್ವರ್ಗಕ್ಕೆ ಅಹಂಕಾರವಿರುತ್ತದೆ. ಆದರೆ ಅದಕ್ಕೆ ತಕ್ಕಂತೆ ಆತ್ಮಸನ್ಮಾನದ ಅರಿವೂ ಸ್ವಲ್ಪ ಇರಬೇಕು. ಪುಸ್ತಕ ಹಿಂತೆಗೆದುಕೊಳ್ಳುವಂತೆ ಕುಲಪತಿಗೆ ಪತ್ರ ಬರೆದಿರುವ ಬ್ರಾಹ್ಮಣ ಪರಿಷತ್ ಅಧ್ಯಕ್ಷರ ಮೂರ್ಖತನವು ಪತ್ರದಲ್ಲಿ ಸಂಪೂರ್ಣ ಅನಾವರಣಗೊಂಡಿದೆ. 'ದಕ್ಷಿಣ ಕನ್ನಡದಲ್ಲಿ ಜಮೀನ್ದಾರಿ ಬ್ರಾಹ್ಮಣರೇ ಇಲ್ಲ; ಬ್ರಾಹ್ಮಣ ಸಮಾಜದ ಗಂಡಸರು ಮತ್ತು ಹೆಂಗಸರಿಗೆ ಅನೈತಿಕ ಸಂಬಂಧಗಳ ಕಲ್ಪನೆಯೇ ಇಲ್ಲ' (ಈ ವಿಚಾರಕ್ಕಾಗಿ, ಶಿವರಾಮ ಕಾರಂತರ 'ಸ್ಮೃತಿಪಟಲ' ಭಾಗ-೩ ಪುಟ ೨-೨೨ ಮತ್ತು ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ'ವನ್ನು ನೋಡಬಹುದು) ಎಂಬ ಬಾಲಿಶ ಮಾತುಗಳು ಆ ಪತ್ರದಲ್ಲಿವೆ. ಬ್ರಾಹ್ಮಣ ಪರಿಷತ್ ಇಷ್ಟಕ್ಕೇ ತನ್ನ ವರಾತವನ್ನು ನಿಲ್ಲಿಸದೆ, 'ನಮ್ಮಂತಹ ಪ್ರಾಜ್ಞ ಬ್ರಾಹ್ಮಣರು ಮುನಿದರೆ ಅದರಿಂದಾಗುವ ದುಷ್ಪರಿಣಾಮ ಏನೆಂದು ತಮ್ಮೆಲ್ಲರ ಅನುಭವಕ್ಕೆ ಬಂದಿರಬಹುದು' ಎಂದು ಕುಲಪತಿಗಳ ಕೊರಳಿಗೊಂದು 'ಶಾಪದ ಉರುಳ'ನ್ನೂ ಎಸೆದುಬಿಟ್ಟಿದೆ!

ಇರಲಿ, ಅದು ನನ್ನ ವ್ಯಥೆಯಲ್ಲ. ನನ್ನ ವ್ಯಥೆ – ಜಾತಿವ್ಯವಸ್ಥೆಯನ್ನೇ ಮುರಿದು ಹೊರ ನಡೆದಿರುವ ನನ್ನನ್ನು ವಿಶ್ವಕರ್ಮ ಸಮುದಾಯವು ಇದೀಗ 'ನನ್ನದೇ' ಸೃಜನಶೀಲ ಕೃತಿಯ ಮೂಲಕ 'ಸೆರೆ ಹಿಡಿದು' ಜಾತಿನಿಂದನೆಯ ಆಕ್ರಮಣ ನಡೆಸುವುದು ಎಷ್ಟು ಸರಿ? ಎಂಬುದು. ಮೇಲ್ವರ್ಗದ ಸಮುದಾಯಗಳು ನನ್ನ ಆಕ್ರಮಣಕ್ಕೆ ಬಳಸಿರುವ 'ದಂಡ'ವನ್ನು ಮರಳಿ ಪ್ರಯೋಗಿಸಿರುವ ಶಕ್ತಿ ಸಂವಿಧಾನದತ್ತವಾಗಿ ನನಗೂ ಇದೆಯಲ್ಲವೆ?



ಸಂಗೀತ ಕ್ಷೇತ್ರದಲ್ಲಿ ಮಹಿಳೆ ನಡೆದು ಬಂದ ದಾರಿ

■ಡಾ. ಮೀರಾ ಆರ್. ಪ್ರಾಣೇಶ್

ಕಲೆಗೆ ಆರಾಧ್ಯ ದೇವತೆ ಸರಸ್ವತಿ. ತಮ್ಮ ಕಲೆಯ ಅಭಿವೃದ್ಧಿಗಾಗಿ ಸರಸ್ವತಿ ಒಬ್ಬ ಮಹಿಳೆಯಾದರೂ, ಅವಳನ್ನು ಪೂಜಿಸುತ್ತಾರೆ. ಸ್ತ್ರೀ ಶಕ್ತಿಯೆಂದೂ, ಸ್ಫೂರ್ತಿ ನೀಡುವ ದೇವತೆಯೆಂದೂ, ಅವಳನ್ನು ಒಲಿಸಿಕೊಳ್ಳಲು ಅನೇಕ ಹಾಡುಗಳನ್ನು ಅವಳ ಮೇಲೆ ರಚಿಸಿ ಹಾಡುತ್ತಾರೆ. ಸ್ತ್ರೀಯಿಂದ ಪ್ರೇರಿತವಾಗಿ, ಅನೇಕ ವಾಗ್ಗೇಯಕಾರರು ಸಾವಿರಾರು ಹಾಡುಗಳನ್ನು ರಚಿಸಿದ್ದಾರೆ. ಕೆಲವರು ತಮ್ಮ ಹಾಡುಗಳನ್ನು ಸ್ತ್ರೀಯರ ಮೂಲಕ ಸಮಾಜಕ್ಕೆ ಮುಟ್ಟಿಸಿದ್ದಾರೆ. ಹೆಣ್ಣಿಗೆ ಇಷ್ಟೆಲ್ಲಾ ಗುಣಗಳಿದ್ದರೂ ಅವಳು ಒಬ್ಬ ಯಶಸ್ವಿ ಸಂಗೀತಗಾರಳಾಗಿ ಬೆಳೆಯುವುದಕ್ಕೆ ನಮ್ಮ ಸಮಾಜ ಅಷ್ಟು ಪ್ರೋತ್ಸಾಹಿಸಲಿಲ್ಲ. ಅವಳು ನಡೆದು ಬಂದ ದಾರಿ ಹೂವಿನ ಹಾದಿಯಾಗಿರಲಿಲ್ಲ.

ಚರಿತ್ರೆಯನ್ನು ಅವಲೋಕಿಸಿದಾಗ, ಸಂಗೀತದ ಉಗಮವಾದ ವೇದಯುಗದಲ್ಲಿ ಒಬ್ಬ ಮಹಿಳೆ ಹಾಡಲು ಅಥವಾ ಯಾವುದಾದರೂ ವಾದ್ಯ ನುಡಿಸಲು ಅವಕಾಶವಿದ್ದಿತು. ಹೆಂಗಸರಿಗೆ ಹಾಡುಗಾರಿಕೆ ಮತ್ತು ನೃತ್ಯವನ್ನು ಕಲಿಸಲಾಗುತ್ತಿತ್ತೆಂದು ಮೈತ್ರಾಯಿಣಿ ಸಂಹಿತೆ ಮತ್ತು ಶತಪಥ ಬ್ರಾಹ್ಮಣಗಳಿಂದ ತಿಳಿದುಬರುತ್ತದೆ. ಉಪನಿಷತ್ ಮತ್ತು ಸೂತ್ರಗಳ ಕಾಲದಲ್ಲಿ ಅಧ್ಯಯನದ ವಿಷಯವಾಗಿ ದೇವಜನ ವಿದ್ಯಾ ಅಂದರೆ ನೃತ್ಯ, ಸಂಗೀತ, ಪುರಾಣ ಶಾಸ್ತ್ರಗಳನ್ನು ಹೇಳಿಕೊಡಲಾಗುತ್ತಿತ್ತು. ಗರ್ಭಿಣಿ ಸ್ತ್ರೀಯರಿಗೆ 4 ಅಥವಾ 7ನೇ ತಿಂಗಳಲ್ಲಿ ನಡೆಸುವ ಸೀಮಂತ ಅಥವಾ ಬೈತಲೆ ತೆಗೆಯುವ ಕ್ರಿಯಾಚರಣೆಗಳಲ್ಲಿ ಆ ಹೆಣ್ಣು ಉಲ್ಲಾಸದಿಂದ ಹಾಡೊಂದನ್ನು ಹೇಳಬೇಕೆಂದು ಕೇಳಲಾಗುತ್ತಿತ್ತು. ವೈಣಿಕರು ವೀಣೆಯನ್ನು ನುಡಿಸಿದರೆ, ನಾಲ್ಕಾರು ಸುಹಾಸಿನಿಯರು ನೃತ್ಯ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಸಂಪ್ರದಾಯಗಳು ಇತರ ವಿಷಯಗಳಲ್ಲಿ ಹೇಗೆ ಮಹಿಳೆಗೆ ಕಟ್ಟಳೆಗಳನ್ನು ಹಾಕಿತೋ ಅದೇ ರೀತಿ ಸಂಗೀತ ಕ್ಷೇತ್ರದಲ್ಲೂ ನಿಯಮಗಳನ್ನು ಹಾಕಿತು. ಹೆಣ್ಣು ಸಂಗೀತ ಕಲಿಯಬೇಕಿತ್ತು ನಿಜ ಅಥವಾ ಅದು ಕಡ್ಡಾಯವಾಗಿತ್ತೆನ್ನಬಹುದು, ಆದರೆ ಅದು ಬರೇ ನಾಲ್ಕು ಗೋಡೆಗಳ ಮಧ್ಯೆ ಸುಪ್ರಭಾತ, ದೇವರ ಪೂಜೆ, ಹೆಣ್ಣಿಗೆ ಗಂಡು ನೋಡಲು ಬಂದಾಗ, ಜೋಗುಳ ಅಥವಾ ಇತರೇ ಹೆಂಗಸರ ಸಮಾರಂಭಗಳಲ್ಲಿ ಮಾತ್ರ ಪ್ರಕಟವಾಗಬಹುದಿತ್ತು.

ಆದರೂ ಅಲ್ಲೊಬ್ಬ ಇಲ್ಲೊಬ್ಬ ಮಹಿಳೆ ಈ ಕಟ್ಟಳೆಗಳನ್ನು ಬಿಡಿಸಿಕೊಂಡು ಹೊರಬರುತ್ತಿದ್ದಳು. ಶರಣರ ಕಾಲದಲ್ಲಿ ಸತಿಪತಿಯರಿಬ್ಬರೂ ಜೊತೆಯಾಗಿ ಹೊರಬಂದು ಭಕ್ತಿ ಮತ್ತು ಸಮಾಜ ಸುಧಾರಣೆಗಾಗಿ ಅನೇಕ ಹಾಡುಗಳನ್ನು ರಚಿಸಿ ಹಾಡಿದರು. ಅಕ್ಕಮಹಾದೇವಿ ಮಟ್ಟಿಗೆ ಇದು ಸ್ವಲ್ಪ ಬೇರೆಯಾಯಿತೆನ್ನಬಹುದು. ಅವಳು ರಚಿಸಿ ಹಾಡಿಕೊಂಡು ಹೋದ ಮಾರ್ಗ ಪ್ರಾಯಶಃ ಎಲ್ಲರೂ ಆಯ್ದುಕೊಳ್ಳಲು ಆಗುವಂಥದ್ದಲ್ಲ. ಎಲ್ಲದರಲ್ಲೂ ವಿರಕ್ತಿ ಹೊಂದಿ, ಚೆನ್ನಮಲ್ಲಿಕಾರ್ಜುನನೊಬ್ಬನೆ ತನ್ನ ಪತಿಯೆಂದು, ಅವನೊಬ್ಬನೆ ಪುರುಷನೆಂದು ಅಕ್ಕ ನಂಬಿದ್ದಳು. ಅವಳ ಮಟ್ಟಿಗೆ ಇದು ಸರಿಯಿದ್ದಿರಬಹುದು. ಆದರೆ ಶರಣರ ಸಂಪ್ರದಾಯದ ಪ್ರಕಾರ ಸತಿಪತಿಯರಿಬ್ಬರೂ ಸೇರಿ ಶರಣರ ತತ್ವಗಳನ್ನು ಪ್ರಚಾರ ಮಾಡಬೇಕಿತ್ತು.

ಮೀರಾಬಾಯಿ ಕೃಷ್ಣನ ಮೇಲೆ ಭಕ್ತಿಯಿಂದ ಹಾಡಿಕೊಂಡು ಹೊರಬಂದಾಗ ಅವಳ ಮನೆಯವರೆಲ್ಲಾ ಅವಳನ್ನು ವಿರೋಧಿಸಿದರು. ಅವಳ ಮೈದುನ ಮೀರಾಳ ಪ್ರಾಣವನ್ನು ತೆಗೆಯಲು ವಿಫಲ ಪ್ರಯತ್ನ ಪಟ್ಟನು. ಆದರೆ ಜಯದೇವನು ತನ್ನ ಅತ್ಯುತ್ತಮ ರಚನೆ 'ಗೀತ ಗೋವಿಂದ'ವನ್ನು ರಚಿಸಲು ಅವನ ಪತ್ನಿಯೇ ಸ್ಫೂರ್ತಿಯಾದಳು. ಅಷ್ಟೇಕೆ, ಹರಿದಾಸರು ಸಮಾಜ ಕಲ್ಯಾಣಕ್ಕಾಗಿ ರಚಿಸಿದ ಪದಗಳನ್ನು ಪ್ರಚಾರ ಮಾಡುವಲ್ಲಿ ಗೃಹಿಣಿಯನ್ನು ಬಳಸಿಕೊಂಡರು. ಯಾಕೆಂದರೆ ಒಬ್ಬ ಗೃಹಿಣಿಯಲ್ಲಿರುವ ಶಕ್ತಿಯನ್ನು ಅವರು ಅರಿತಿದ್ದರು. ಹರಿದಾಸರು ಕಾಲಿಗೆ ಗೆಜ್ಜೆ ಕಟ್ಟಿ, ಕಂಕುಳಲ್ಲಿ ಜೋಳಿಗೆ ಸೇರಿಸಿಕೊಂಡು, ಕೈಯಲ್ಲಿ ಚಿಟಿಕಿ ಹಿಡಿದು, ಮನೆ ಮನೆಗೂ ಹೋಗಿ ತತ್ವಪದಗಳನ್ನು ಹಾಡುತ್ತಾ ನಡೆದರು. ಮನೆಯ ಗೃಹಿಣಿಗೆ ಈ ಪದಗಳನ್ನು ಹೇಳಿಕೊಟ್ಟು, ಅವಳು ಸದಾ ಕಾಲ ಮನೆಯಲ್ಲಿ ಹಾಡುತ್ತಿದ್ದರೆ, ಹರಿನಾಮ ಸ್ಮರಣೆಯೊಂದಿಗೆ ಮನೆಯವರಿಗೆಲ್ಲಾ ತತ್ವಪದಗಳು ಕಿವಿಗೆ ಬೀಳುತ್ತಿದ್ದವು. ಆ ಪದಗಳು ಜನರ ವ್ಯಕ್ತಿತ್ವ ವಿಕಾಸಗೊಳ್ಳಲು ದಾರಿಯಾಗಿ ಸಮಾಜದ ಸುಧಾರಣೆಗೆ ಕಾರಣವಾಯಿತು. ಜೊತೆಗೆ ಈ ಹೆಣ್ಣುಮಕ್ಕಳು ಹರಿದಾಸರ ಪದಗಳನ್ನು ಮುಂದಿನ ಪೀಳಿಗೆಗೆ ಹೇಳಿಕೊಟ್ಟದ್ದು, ವಂಶಪರಂಪರೆಯಾಗಿ ಲಕ್ಷಾಂತರ ದೇವರನಾಮಗಳು ನಮಗೆ ಇಂದು ಸಿಗುವಂತಾಯಿತು. ದಾಸ ಸಾಹಿತ್ಯದಿಂದ ಪ್ರೇರಿತರಾಗಿ ಹೆಳವನಕಟ್ಟೆ ಗಿರಿಯಮ್ಮ (ಸುಮಾರು ಕ್ರಿ.ಶ. 1750), ಹರಪನಹಳ್ಳಿ ಭೀಮವ್ವ (ಸುಮಾರು ಕ್ರಿ.ಶ. 1803), ಗಲಿಗಲಿ ಅವ್ವ ಮತ್ತು ಆಕೆಯ ಶಿಷ್ಯೆ ಭಾಗಮ್ಮ, ಚರಾ ಚೆಲ್ಲಮ್ಮ (ಕ್ರಿ.ಶ. 1850), ಗಣಪಕ್ಕ (ಕ್ರಿ.ಶ. 1870), ಸುಂದರಾಬಾಯಿ (ಕ್ರಿ.ಶ. 1875), ಪನ್ನಿ ಲಕ್ಷ್ಮೀಬಾಯಿ (ಕ್ರಿ.ಶ. 1880), ಓರಬಾಯಿ

ಈ ಲೇಖನವನ್ನು ಸಿದ್ಧಪಡಿಸಿರುವ ಮೀರಾ ಅವರು ವನಮಾಲಾ ಆರ್ಟ್ ಫೌಂಡೇಷನ್ನಿನ ಮ್ಯಾನೆಜಿಂಗ್ ಟ್ರಸ್ಟಿಯಾಗಿದ್ದಾರೆ.

ಡಾ. ಮೀರಾ ರಾಜಾರಾಂ ಪ್ರಾಣೇಶ್ ಅವರು 'ಮ್ಯೂಸಿಕಲ್ ಕಂಪೋಸರ್ಸ್ ಡ್ಯೂರಿಂಗ್ ಒಡೆಯರ್ ಡೈನಾಸ್ಟಿ (1639–1947 A.D.)' ಕುರಿತು ಸಂಶೋಧನಾ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದರು. ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಎತ್ತಿ ತೋರಿಸುವ ಆಡಿಯೋ ವಿಷುಯಲ್ ಪ್ರೆಸೆಂಟೇಷನ್ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ತರಗತಿಗಳನ್ನೂ ನಡೆಸಿಕೊಡುತ್ತಾರೆ.

ಲಕ್ಷ್ಮೀದೇವಮ್ಮ (ಕ್ರಿ.ಶ. 1890), ಶ್ರೀವೈಷ್ಣವ ಕೀರ್ತನಗಾತಿ ಯದುಗಿರಿಯಮ್ಮ ಮುಂತಾದ ಅನೇಕ ಮಹಿಳೆಯರು ಉತ್ತಮ ಪದಗಳನ್ನು ರಚಿಸಿದರು.

ಇನ್ನು ಕೆಲವರು ಹರಿದಾಸ ದೀಕ್ಷೆಯನ್ನು ಪಡೆದುಕೊಂಡು ದಾಸ ಪಂಥವನ್ನು ಮುಂದುವರೆಸಿದರು. ಅಂಬಾಬಾಯಿ ಮುಂತಾದವರು ಹರಿದಾಸರಂತೆ ವೇಷಭೂಷಣ ತೊಟ್ಟರು. ಕಾವಿ ವಸ್ತ್ರ, ಕಾಲಿಗೆ ಗೆಜ್ಜೆ, ಕೊರಳಿಗೆ ತುಳಸಿಮಾಲೆ, ಬಗಲಿಗೆ ತಂಬೂರಿ ಜೋಳಿಗೆಗಳನ್ನು ಧರಿಸಿ ಹರಿದಾಸರಾಗಿ ಹಾಡುತ್ತಾ ಸಂಚರಿಸತೊಡಗಿದರು. ಇದನ್ನು ಸಮಾಜ ಸ್ವೀಕರಿಸಿತು. ರಾಜಮನೆತನದ ನಿರ್ಬಂಧಗಳನ್ನು ಮೀರಿ ಕೆಲವು ಮಹಿಳೆಯರು ಸಂಗೀತಗಾರರೂ, ರಚನಾಕಾರರೂ ಆಗಿದ್ದರು. ಅವರಲ್ಲಿ ಮೈಸೂರು ಅರಸರಾಗಿದ್ದ ಒಡೆಯರ್ ವಂಶದ ರಾಣಿ ಚೆಲುವಾಂಬೆಯದು (ಸುಮಾರು ಕ್ರಿ.ಶ. 1700) ಒಂದು ಗಮನಾರ್ಹ ಸಾಧನೆ ಎನ್ನಬಹುದು.

ಸಂಗೀತದ ಉಳಿವು, ಬೆಳವಣಿಗೆ ಮತ್ತು ಪ್ರಚಾರಗಳಲ್ಲಿ ಪ್ರಧಾನ ಕೊಡುಗೆಯನ್ನು ನೀಡಿದ ಮತ್ತೊಂದು ವರ್ಗ ದೇವದಾಸಿಯರು. ಹಿಂದೆ ಅವರಿಗೆ ಸಂಗೀತ, ನೃತ್ಯ, ಸಂಸ್ಕೃತ ಮುಂತಾದ ಭಾಗಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ದೇವಸ್ಥಾನದ ಆಡಳಿತವರ್ಗದವರು ಇಂತಹ ನೂರಾರು ಸ್ತ್ರೀಯರಿಗೆ ದೇವಸ್ಥಾನದ ವತಿಯಿಂದಲೇ ಶಿಕ್ಷಣವನ್ನು ಕೊಡಿಸುತ್ತಿದ್ದರು. ತಂಜಾವೂರಿನ ಬೃಹದೀಶ್ವರ ದೇವಸ್ಥಾನವನ್ನು ಕಟ್ಟಿದ ರಾಜರಾಜ ಚೋಳ (ಕ್ರಿ.ಶ. 985–1016), ಒಂದು ಇಡೀ ಬೀದಿಯನ್ನೆ ನಿರ್ಮಿಸಿ, ಅಲ್ಲಿ ಸುಮಾರು 400 ದೇವದಾಸಿಯರು ವಾಸಿಸುವಂತೆ ಏರ್ಪಾಡು ಮಾಡಿದ್ದನೆಂಬ ಮಾಹಿತಿ ದೊರೆತಿವೆ. ಮುಂದೆ ಇತರ ರಾಜ ಮಹಾರಾಜರುಗಳು ದೇವದಾಸಿ ವಂಶದವರು ಕಲೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟವರೆಂದು ಗೌರವಿಸಿ, ಪ್ರೋತ್ಸಾಹವನ್ನು ನೀಡಿದರು. ಭೋಗ ವಿಲಾಸಗಳಲ್ಲಿ ಕಾಲ ಕಳೆಯುತ್ತಿದ್ದ ಕ್ಷೇತ್ರಜ್ಞನಿಗೆ, ಭಗವಂತನ ಕಡೆ ಮನಸ್ಸು ವಾಲುವಂತೆ ಮಾಡಿ, ಸಾವಿರಾರು ಪದಗಳನ್ನು ರಚಿಸುವಂತೆ ಪ್ರೇರೇಪಿಸಿದ್ದು ಒಬ್ಬ ದೇವದಾಸಿ. ಇಂದು ನಮಗೆ ಅನೇಕ ರಚನೆಗಳು ಅದರಲ್ಲೂ ವರ್ಣ, ಕೃತಿ, ತಿಲ್ಲಾನ, ಜಾವಳಿ, ಪದ ಮುಂತಾದವುಗಳು ಈ ವರ್ಗಕ್ಕೆ ಸೇರಿದ ಕಲಾವಿದರಿಂದ ದೊರೆತಿವೆ ಎಂದರೆ ಅತಿಶಯೋಕ್ತಿಯಲ್ಲ. ಅಂದು ದೇವದಾಸಿಯರು ಕಲಿತು, ಅವುಗಳನ್ನು ಪ್ರಚಾರ ಮಾಡಿದ್ದರಿಂದಲೇ ಇಂದು ನಮಗೆ ಅಷ್ಟೊಂದು ಪ್ರಮಾಣದಲ್ಲಿ ರಚನೆಗಳು ದೊರೆತಿವೆ. ದೇವದಾಸಿಯರನ್ನು ಉತ್ತಮ ಕಲಾವಿದರೆಂದು ಗುರುತಿಸಿದ್ದರೂ ಕೂಡ, ಸಮಾಜ ಅವರನ್ನು ದೂರದಲ್ಲಿಟ್ಟಿತು. ಅನೇಕ ವಾಗ್ಗೇಯಕಾರರು ತಮ್ಮ ರಚನೆಗಳನ್ನು ಅವರಿಗೆ ನೀಡಿ, ಅವರಿಂದ ಹಾಡಿಸಿ ಅದನ್ನು ಆಲಿಸಿ ಸಂತೋಷ ಪಡುತ್ತಿದ್ದರು. ಅಂದಿನ ಕೆಲವರು ದೇವದಾಸಿಯರಿಗೆ ಸಂಗೀತದಲ್ಲಿ ಪಾಂಡಿತ್ಯವೆಷ್ಟಿತ್ತೆಂದರೆ, ಅನೇಕ ಹಿರಿಯ ವಿದ್ವಾಂಸರು ಅವರಲ್ಲಿಗೆ ಹೋಗಿ, ಅವರ ಸಮಕ್ಷಮದಲ್ಲಿ ಹಾಡಿ, ತಮ್ಮ ಜ್ಞಾನದ ಸಂಪತ್ತನ್ನು ಅವರಿಗೆ ಧಾರೆಯೆರೆಯುತ್ತಿದ್ದರು. ಇದಕ್ಕೆ ಉತ್ತಮ ನಿದರ್ಶನ ತಂಜಾವೂರು ಶೈಲಿಯ ಸಂಗೀತ ಮತ್ತು ನೃತ್ಯದ ಮನೆತನಕ್ಕೆ ಸೇರಿದ್ದ ವೀಣೆ ಧನಮ್ಮಾಳ್.

ಅನೇಕ ದಿಗ್ಗಜರುಗಳ ರಚನೆಗಳು ಧನಮ್ಮಾಳ್‌ರವರ ಮನೆತನದ ಸ್ವತ್ತಾಗಿತ್ತು ಎಂದರೆ ತಪ್ಪಲ್ಲ. ಒಮ್ಮೆ ಒಂದು ಸಭೆಯಲ್ಲಿ ಧನಮ್ಮಾಳ್ ಕಚೇರಿ ನೀಡಿದಾಗ, ಇವರೊಬ್ಬ ಮಹಿಳೆ ಎಂಬ ಕಾರಣದಿಂದ ಸಭೆಯ ಸಂಘಟಕರು ಅನಾದರದಿಂದ ಮಾತನಾಡಿದರೆಂದು ನೊಂದು, ಅಂದಿನಿಂದ ಸಾರ್ವಜನಿಕ ಸಭೆಗಳಲ್ಲಿ ಇವರು ಕಚೇರಿ ಮಾಡುವುದನ್ನು ನಿಲ್ಲಿಸಿದ್ದರು. ಯಾರೇ ವಿದ್ವಾಂಸರಾಗಲಿ, ಸಹೃದಯರಾಗಲಿ ಧನಮ್ಮಾಳ್‌ರವರ ಅಮೋಘವಾದ ವೀಣಾ ವಾದನವನ್ನು ಕೇಳಬೇಕೆಂದರೆ, ಅವರ ಮನೆಯಲ್ಲಿ ಪ್ರತಿ ಶುಕ್ರವಾರ ನಡೆಯುತ್ತಿದ್ದ ಸಂಗೀತ ಗೋಷ್ಠಿಗೆ ಹೋಗಿ ಆಲಿಸಬೇಕಿತ್ತು. ಹೆಚ್ಚೆಂದರೆ ತಮಗೆ ಬಹಳ ಆಪ್ತರಾಗಿದ್ದ ಕೆಲವರ ಮನೆಗೆ ಮಾತ್ರ ಹೋಗಿ ನುಡಿಸುತ್ತಿದ್ದರು. ಆದರೆ ಕೊಲಂಬಿಯಾ ಗ್ರಾಮಫೋನ್ ಕಂಪೆನಿಯವರಿಗೆ ಮಾತ್ರ ತಮ್ಮ ವೀಣಾವಾದನದ ಧ್ವನಿ ಮುದ್ರಣಗಳನ್ನು ಮಾಡಿಕೊಳ್ಳಲು ಒಪ್ಪಿದ್ದರು. ಅನೇಕ ಹಿರಿಯ ವಿದ್ವಾಂಸರು ಇವರನ್ನು ಸಾಕ್ಷಾತ್ ಸರಸ್ವತಿಯ ಅವತಾರವೆಂದೇ ತಿಳಿದಿದ್ದರು. ಶೆಮ್ಮಂಗುಡಿ ಶ್ರೀನಿವಾಸ ಐಯ್ಯರ್‌ರವರಿಗೆ ಧನಮ್ಮಾಳರ ಬಗ್ಗೆ ಎಷ್ಟು ಪೂಜ್ಯಭಾವವಿತ್ತೆಂದರೆ 'ನಾನು ಅವರ ಮನೆಗೆ ಹೋಗುವಾಗಲೆಲ್ಲಾ ತೀರ್ಥಯಾತ್ರೆಗೆ ಹೋಗುತ್ತಿದ್ದೇನೆಂದೂ, ಅವರಿರುವ ಸ್ಥಳ ಕಲಾದೇವತೆಯಿರುವ ದೇವಸ್ಥಾನವೆಂದೇ ಭಾವಿಸಿ ಪೂಜಿಸುತ್ತಿದ್ದೆ' ಎಂದಿದ್ದರು.

ಧನಮ್ಮಾಳ್‌ರವರಿಂದ ರಚನೆಗಳನ್ನು ಕಲಿಯಲು ಹಿರಿಯ ವಿದ್ವಾಂಸರು ಕೆಲವರು ಹಂಬಲಿಸುತ್ತಿದ್ದರು. ಮೈಸೂರಿನ ಪ್ರಸಿದ್ಧ ವಿದ್ವಾಂಸರಾಗಿದ್ದ ಬಿಡಾರಂ ಕೃಷ್ಣಪ್ಪನವರು 'ಎಂದುಕು ನಿರ್ದಯ' ರಚನೆಯನ್ನು ಧನಮ್ಮಾಳ್‌ರವರಿಂದ ಕಲಿಯಬೇಕೆಂದು ಆಸೆ ಪಟ್ಟಿದ್ದರು. ಒಮ್ಮೆ ಕೃಷ್ಣಪ್ಪನವರು ಮದರಾಸಿಗೆ ಕಚೇರಿ ಪ್ರಯುಕ್ತ ಭೇಟಿಯಿತ್ತಾಗ, ಸ್ವಲ್ಪವೇ ಬಿಡುವಿನ ಸಮಯವಿತ್ತು. ಆ ಸಮಯದಲ್ಲಿ ಕೃತಿಯನ್ನು ಕಲಿಸಿಕೊಡಬೇಕೆಂದು ಧನಮ್ಮಾಳ್‌ರವರನ್ನು ಕೇಳಿದ್ದರು. ಅದಕ್ಕೆ ಧನಮ್ಮಾಳ್‌ರವರು ಕೃತಿಯನ್ನು ಕಲಿಯಲೇಬೇಕೆಂದಿದ್ದರೆ ಕಚೇರಿಯನ್ನು ಬಿಡಬೇಕೆಂದರು. ಕೃಷ್ಣಪ್ಪನವರಿಗೆ ಆ ರಚನೆಯನ್ನು ಕಲಿಯಬೇಕೆಂಬ ಹಂಬಲ ಎಷ್ಟಿತ್ತೆಂದರೆ, ಕಚೇರಿಯನ್ನು ರದ್ದುಮಾಡಿ ಇವರಿಂದ ಇಡೀ ಕೃತಿಯನ್ನು ಕಲಿತರು. ಧನಮ್ಮಾಳ್‌ರವರ ವಿದ್ವತ್ ಅಷ್ಟು ಹಿರಿದಾಗಿತ್ತು. ಹೆಂಗಸರು ಜೋರಾಗಿ ತೊಡೆ ತಟ್ಟಿಕೊಂಡು ಹಾಡುವುದು ಸ್ತ್ರೀ ಲಕ್ಷಣವಲ್ಲವೆನ್ನುತ್ತಿದ್ದರೂ, ತಾಳ ಹಾಕುವುದರಲ್ಲೂ ಸ್ತ್ರೀಗಿರಬೇಕಾದ ರಮ್ಯತೆ ಇರಬೇಕೆನ್ನುತ್ತಿದ್ದರು, ಧನಮ್ಮಾಳ್. ಹಾಗೆಯೇ ಮಹಿಳಾ ಸಂಗೀತಗಾರರಿಗೆ ಒಂದು ಸ್ಥಾನವನ್ನು ಗಳಿಸಿಕೊಟ್ಟರು. 1938ರಲ್ಲಿ ಇವರು ನಿಧನರಾದಾಗ ಇಡೀ ಸಂಗೀತ ಪ್ರಪಂಚ ಅವರ ಬಗ್ಗೆ ಶೋಕ ವ್ಯಕ್ತಪಡಿಸಿ, ಸಂಗೀತ ರಸಿಕರು ಅವರ ಹೆಸರಿನಲ್ಲಿ ಒಂದು ಸಂಗೀತ ಶಾಲೆಯನ್ನು ಪ್ರಾರಂಭಿಸಿ ತಮ್ಮ ಗೌರವವನ್ನು ಸಲ್ಲಿಸಿದ್ದರು.

ಇದೇ ವರ್ಗದಲ್ಲಿ ಹುಟ್ಟಿದ್ದ ಕೊಯಮತ್ತೂರ್ ತಾಯಿ, ಷಣ್ಮುಗವಡಿವು, ಲಲಿತಾಂಗಿ, ಸೇಲಂ ಗೋದಾವರಿ, ಬೆಂಗಳೂರು ನಾಗರತ್ನಮ್ಮ, ಎಂ.ಎಸ್. ಸುಬ್ಬುಲಕ್ಷ್ಮಿ, ಎಮ್.ಎಲ್. ವಸಂತಕುಮಾರಿ, ಬೃಂದ, ಮುಕ್ತ ಮುಂತಾದವರು ಕರ್ನಾಟಕ ಸಂಗೀತದಲ್ಲೂ, ಹೀರಾಬಾಯಿ ಬರೋಡೆಕರ್, ಕೇಸರಿಬಾಯಿ ಕೇಲ್ಕರ್ ಮುಂತಾದವರು ಹಿಂದುಸ್ತಾನಿ ಸಂಗೀತದ ಪ್ರಚಾರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ನಂಜನಗೂಡಿನಲ್ಲಿ ಹುಟ್ಟಿದ್ದ ಬೆಂಗಳೂರು ನಾಗರತ್ನಮ್ಮನವರಂತೂ ಸಂಗೀತಕ್ಕಾಗಿ ತಮ್ಮ ಜೀವನವನ್ನು ಮುಡುಪಿಟ್ಟರು. ಇವರಿಗೆ ತ್ಯಾಗರಾಜರ ಮೇಲೆ ಎಂಥಾ ಭಕ್ತಿಯಿತ್ತೆಂದರೆ, ತಿರುವಯ್ಯಾರಿನಲ್ಲಿ ಇವರ ಸಮಾಧಿಗೆ ಬೃಂದಾವನ ವನ್ನು ನಿರ್ಮಿಸಿ, ಪ್ರತಿ ವರ್ಷ ಅವರ ಆರಾಧನೆ ನಡೆಯುವುದಕ್ಕೆ ಕಾರಣರಾದರು. ಕಟ್ಟಡ ನಿರ್ಮಾಣಕ್ಕಾಗಿ ತಮ್ಮಲ್ಲಿದ್ದ ಧನ, ಕನಕಗಳನ್ನೆಲ್ಲಾ ಧಾರೆಯೆರೆದರು. ಒಬ್ಬ ಉತ್ತಮ ಸಂಗೀತಗಾರರೆಂದೂ, ತ್ಯಾಗರಾಜರ ಸಮಾಧಿಯನ್ನು ಕಟ್ಟಿದ ಒಬ್ಬ ಶ್ರೇಷ್ಠ ಮಹಿಳೆಯೆಂದೂ ಇಂದಿಗೂ ಎಲ್ಲರೂ ಅವರನ್ನು ಗೌರವಿಸುತ್ತಾರೆ. ಈ ವರ್ಗದಲ್ಲಿ ನಡೆಯುತ್ತಿದ್ದ ಮತ್ತೊಂದು ಶೋಚನೀಯ ಸಂಗತಿಯೆಂದರೆ, ಸಾಧಾರಣವಾಗಿ ಇವರುಗಳು ಕಲಾ ಪ್ರಪಂಚದಲ್ಲಿ



ಬೆಂಗಳೂರು ನಾಗರತ್ನಮ್ಮ

ತುಂಬಾ ಹೆಸರುವಾಸಿಯಾದ ನಂತರವೇ ಅವರ ತಂದೆಯ ಹೆಸರು ಹೊರಬರುತ್ತಿದ್ದಿತು.

1930ರ ದಶಕದಲ್ಲಿ ಎಂ.ಎಸ್. ಸುಬ್ಬುಲಕ್ಷ್ಮಿಯವರು ಸಂಗೀತ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದಾಗ ಸಂಗೀತ ಪ್ರಪಂಚದ ವಾತಾವರಣವೇ ಬದಲಾಯಿತೆನ್ನಬಹುದು. ಮಹಾಮಹಾ ಪುರುಷ ಸಂಗೀತ ದಿಗ್ಗಜರುಗಳು ಇದ್ದ ಕಾಲ. ಇವರುಗಳ ಸರಿಸಮಾನವಾಗಿ ನಿಲ್ಲುವುದಿರಲಿ ಅವರುಗಳು ಕಟ್ಟಿಕೊಂಡಿದ್ದ ಕೋಟೆಯೊಳಗೆ ಒಂದು ಹೆಜ್ಜೆ ಇಡುವುದೂ ಸಾಹಸದ ಕೆಲಸವಾಗಿತ್ತು. ಈ ಕಾಲಕ್ಕಾಗಲೇ ಕೆ.ಬಿ. ಸುಂದರಾಂಬಾಳ್, ಎಸ್.ಡಿ. ಸುಬ್ಬಲಕ್ಷ್ಮಿರವರುಗಳು ಕಚೇರಿ ನೀಡುತ್ತಿದ್ದರೂ, ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಪ್ರವೇಶ ಮತ್ತು ಅವರು ಸಂಗೀತ ಕ್ಷೇತ್ರದಲ್ಲಿ ನೆಲೆಯೂರಿದ್ದು ಅತ್ಯುತ್ತಮ ಸಾಧನೆ. ಈಕೆಯ ತಾಯಿ ಷಣ್ಮುಖವಡಿವು ಕರೂರು ವೆಂಕಟರಮಣ ಭಾಗವತರ ಶಿಷ್ಯೆ. ಶೆಲ್ಲಾಕ್ ಧ್ವನಿ ತಟ್ಟೆಗಳಲ್ಲಿ ಹಾಡಿದ ಮೊಟ್ಟ ಮೊದಲ ಮಹಿಳೆ.

ಅಂದು ನಾಟಕ ಮತ್ತು ಚಲನಚಿತ್ರಗಳಲ್ಲಿ ಹೆಚ್ಚಾಗಿ ಪಾತ್ರ ವಹಿಸುತ್ತಿದ್ದವರು ಸಂಗೀತಗಾರರು. ಅತ್ಯುತ್ತಮ ವೇದಿಕೆ ವಿದ್ವಾಂಸರಾಗಲ್ಲದೆ ನಟನೆಯಲ್ಲೂ ಎಂ.ಎಸ್. ಸುಬ್ಬುಲಕ್ಷ್ಮಿಯವರು ಹೆಸರುವಾಸಿಯಾಗಿದ್ದರು. 1932ರಲ್ಲಿ ಮಹಾಮಹಂ ಚಿತ್ರದಿಂದ ಪ್ರಾರಂಭಿಸಿ ಶಕುಂತಲಾ, ಮೀರಾ ಮುಂತಾದ ಹಲವಾರು ಚಿತ್ರಗಳಲ್ಲಿ ನಾಯಕಿಯ ಪಾತ್ರ ವಹಿಸಿದ್ದರು. ದೇವದಾಸಿಗಳ ಕುಟುಂಬದಲ್ಲಿ ಹುಟ್ಟಿದ್ದ ಎಂ.ಎಸ್. ಸುಬ್ಬುಲಕ್ಷ್ಮಿಯವರನ್ನು ಒಬ್ಬ ಐಯ್ಯರ್ ಕುಟುಂಬಕ್ಕೆ ಸೇರಿದ್ದ ಸದಾಶಿವಂರವರು ವಿವಾಹವಾಗಿದ್ದು, ಎಂ.ಎಸ್.ರವರ ಸಾಮಾಜಿಕ ಸ್ಥಾನವನ್ನು ಏರಿಸಿತು. ಇಷ್ಟೇ ಅಲ್ಲದೆ ಇವರ ಸಂಗೀತವನ್ನು ಮೆಚ್ಚಿ ವಿವಾಹವಾಗಿದ್ದ ಸದಾಶಿವಂ, ಎಂ.ಎಸ್.ರವರನ್ನು ಇಡೀ ಸಂಗೀತ ಕ್ಷೇತ್ರದಲ್ಲೇ ಒಂದು ಮಿನುಗು ತಾರೆಯಂತೆ ಬೆಳಗಿಸಿದರು. ಭಾರತದಲ್ಲಷ್ಟೆ ಅಲ್ಲ ಇಡೀ ವಿಶ್ವದಲ್ಲಿ ಇವರ ಸಂಗೀತ ಪ್ರಚಾರವಾಯಿತು. ಇವರು ಹಾಡಿದ್ದ ನೂರಾರು ಧ್ವನಿ ಸುರುಳಿಗಳು ಹೊರಬಂದವು. ಪಂಡಿತ ಪಾಮರರಾದಿಯಾಗಿ, ಮಹಾತ್ಮಗಾಂಧಿ, ಜವಹರಲಾಲ್ ನೆಹರು ಮುಂತಾದ ರಾಷ್ಟ್ರದ ನಾಯಕರೆಲ್ಲರೂ ಇವರ ಸಂಗೀತವನ್ನು ಮೆಚ್ಚಿ, ಗೌರವದಿಂದ ಕಾಣುತ್ತಿದ್ದರು. ರಾಷ್ಟ್ರದ ಎಲ್ಲಾ ಬಿರುದು ಸನ್ಮಾನಗಳೂ, ಅಂತರರಾಷ್ಟ್ರೀಯ ಮಟ್ಟದ ಅನೇಕ ಸನ್ಮಾನಗಳೂ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟೊರೇಟ್‌ಗಳು, ಭಾರತದ ಪ್ರತಿಷ್ಠಿತ ಪ್ರಶಸ್ತಿ ಭಾರತರತ್ನ ಮುಂತಾದ ನೂರಾರು ಗೌರವಗಳನ್ನು ಪಡೆದ ಏಕೈಕ ಮಹಿಳಾ ಸಂಗೀತಗಾರರು ಡಾ.ಎಂ.ಎಸ್. ಸುಬ್ಬುಲಕ್ಷ್ಮಿ. ಸಂಗೀತ ಕ್ಷೇತ್ರದಲ್ಲಿ ಮಹಿಳೆಯ ಅಸ್ತಿತ್ವವೇ ಇಲ್ಲದಂತಿದ್ದ ಕಾಲದಲ್ಲಿ, ದಕ್ಷಿಣ ಭಾರತದ ಪ್ರತಿ ಯೊಂದು ಮನೆಯಲ್ಲೂ (ಉತ್ತರ ಭಾರತದ ಹಲವೆಡೆಗಳಲ್ಲಿ) ಎಂ.ಎಸ್.ರವರ ಸುಪ್ರಭಾತದ ಹಾಡುವಿಕೆಯೊಂದಿಗೆ ಬೆಳಗು ಹರಿಯುತ್ತಿತ್ತೆಂದರೆ ಇನ್ನೆಂತಹ ಮೋಡಿ ಮಾಡಿರಬಹುದು ಇವರ ಭಕ್ತಿಪೂರ್ವಕ ಕಂಠಸಿರಿ! ಇವರ ಸಂಗೀತದಿಂದ ಪ್ರಭಾವಿತರಾಗಿ ಅನೇಕ ತಂದೆ ತಾಯಿಯರು ತಮ್ಮ ಹೆಣ್ಣುಮಕ್ಕಳಿಗೆ ಸಂಗೀತ ಕಲಿಸಲು ಪ್ರಾರಂಭಿಸಿದರು.




ಮಹಿಳಾ ಸಂಗೀತಗಾರರಿಗೆ ತಾಳ, ಲಯದ ಜ್ಞಾನವೇ ಇರುವುದಿಲ್ಲ, ಗಿಣಿ ಪಾಠದಂತೆ ಬರೇ ರಚನೆಗಳನ್ನು ಹಾಡಲು ಮಾತ್ರ ಬರುತ್ತದೆ, ನೆರವಲ್ ಪಲ್ಲವಿಗಳನ್ನು ಹಾಡುವುದು ಅವರಿಗೆ ಸಾಧ್ಯವಿಲ್ಲ ಎಂಬ ಟೀಕೆಗಳಿದ್ದವು. ಈ ಹೇಳಿಕೆಗಳನ್ನು ಅಳಿಸಿದ್ದು ಲಲಿತಾಂಗಿಯ ಪುತ್ರಿ ಎಂ.ಎಲ್. ವಸಂತಕುಮಾರಿಯವರು. ವಸಂತಕುಮಾರಿ ಮುಡಿಕೊಂಡಾನ್ ವೆಂಕಟರಮಣ ಅಯ್ಯರ್‌ರವರ ಬಳಿ ಪಲ್ಲವಿ ಹಾಡುವಿಕೆಯಲ್ಲಿ ವಿಶೇಷ ತರಬೇತಿ ಪಡೆದು, ಪಲ್ಲವಿ ಹಾಡುವಿಕೆಯಲ್ಲಿ ಎಷ್ಟು ಪರಿಣತರಾದರೆಂದರೆ, ಅನೇಕ ಪ್ರತಿಷ್ಠಿತ ಸಂಗೀತ ಸಭೆಗಳಲ್ಲಿ ಸೋದಾಹರಣ ಕಾರ್ಯಕ್ರಮಗಳನ್ನು ನೀಡಿದರು. ನೆರವಲ್ ಹಾಡುವುದರಲ್ಲೂ ಪರಿಣತಿ ಪಡೆದಿದ್ದರು. ಪುರಂದರದಾಸರ ರಚನೆಗಳ ಬಗ್ಗೆ ವಿಶೇಷ ಗೌರವವಿದ್ದು, ತಮ್ಮ ಕಚೇರಿಗಳಲ್ಲಿ ಅವುಗಳನ್ನು ಹಾಡಿ ಪ್ರಚಾರಕ್ಕೆ ತಂದರು. ಸಂಗೀತ ಪ್ರಪಂಚದ ಸ್ಥಿತಿಗತಿಗಳ ಬಗ್ಗೆ ಮುಕ್ತವಾಗಿ ಚರ್ಚೆ ಮಾಡುತ್ತಿದ್ದ ಏಕೈಕ ಮಹಿಳಾ ಸಂಗೀತ ವಿದುಷಿ ಡಾ. ಎಂ.ಎಲ್. ವಸಂತಕುಮಾರಿ. ಹಲವಾರು ಚಲನಚಿತ್ರಗಳಲ್ಲಿ ಹಿನ್ನೆಲೆ ಗಾಯಕಿಯಾಗಿಯೂ ಯಶಸ್ಸು ಗಳಿಸಿದರು. ಇವರ ಅನೇಕ ಶಿಷ್ಯರು, ಇಂದು ಉತ್ತಮ ಶ್ರೇಣಿಯ ಕಲಾವಿದರೆಂದು ಪ್ರಸಿದ್ಧರಾಗಿದ್ದಾರೆ.



ಎಂ.ಎಲ್. ವಸಂತಕುಮಾರಿ

ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲೂ ಇಂಥದ್ದೇ ಒಂದು ವಾತಾವರಣ ವಿತ್ತೆನ್ನಬಹುದು. ಸಂಗೀತ ಕಲಿಯುವುದಕ್ಕೂ ಅನೇಕ ಕಟ್ಟುಪಾಡುಗಳಿದ್ದವು. ಕೇಸರಿಬಾಯಿ ಕೇಳ್‌ಕರ್‌ರವರು (ಕ್ರಿ.ಶ. 1990–1977) ಬಹಳ ದೊಡ್ಡ ವಿದ್ವಾಂಸರೆನಿಸಿದ್ದ ಉಸ್ತಾದ್ ಅಲ್ಲಾದಿಯಾ ಖಾನ್‌ರವರನ್ನು ಸಂಗೀತ ಕಲಿಸಿಕೊಡಿರೆಂದು ಕೇಳಿದಾಗ, ಮೊದಲು ಅವರು ಒಪ್ಪಿರಲಿಲ್ಲ. ಬಹಳ ಬೇಡಿಕೊಂಡ ನಂತರ, ತಾನು ಬದುಕಿರುವವರೆಗೂ ಕೇಸರಿಬಾಯಿ ಸಾರ್ವಜನಿಕ ಕಚೇರಿಗಳನ್ನು ನೀಡಕೂಡದೆಂಬ ನಿಬಂಧನೆ ಹಾಕಿ, ಬಾಯಿಯವರು ಅದಕ್ಕೆ ಒಪ್ಪಿದ ನಂತರವೇ, ಆಕೆಯನ್ನು ಶಿಷ್ಯೆಯಾಗಿ ಸ್ವೀಕರಿಸಿದ್ದು. ಗುರುಗಳೊಂದಿಗೆ ಕಚೇರಿಗಳಲ್ಲಿ ಹಾಡುತ್ತಿದ್ದರೂ, 1946ರಲ್ಲಿ ಉಸ್ತಾದ್‌ರವರು ನಿಧನರಾಗುವವರೆಗೂ ಅಂದರೆ ಸುಮಾರು 25 ವರ್ಷಗಳು ಈಕೆ ಒಬ್ಬರೇ ಕಚೇರಿ ನೀಡಲಿಲ್ಲ. ಕಚೇರಿ ನೀಡಲು ಪ್ರಾರಂಭ ಮಾಡಿದ ಮೇಲೆ, ಬಹಳಷ್ಟು ಅವಕಾಶಗಳು ಸಿಕ್ಕವು. ಅಂದಿನ ದಿನಗಳಲ್ಲಿ ಕೇಸರಿಬಾಯಿಯವರು ಅತಿ ಹೆಚ್ಚಿನ ಸಂಭಾವನೆಗೆ ಅರ್ಹರಾಗಿದ್ದ ಕಲಾವಿದೆಯೆನಿಸಿಕೊಂಡಿದ್ದರು. ಗುರುಗಳು ಹಾಕಿದ ನಿರ್ಬಂಧ ಹಾಗೂ ಅವರ ಬಳಿ 25 ವರ್ಷಗಳ ಸತತ ಅಭ್ಯಾಸ, ಇದರ ಜೊತೆ ತಾನು ಅಷ್ಟು ಕಷ್ಟಪಟ್ಟ ಮೇಲೆ ಕಚೇರಿ ಮಾಡಲೇಬೇಕೆಂಬ ಛಲ ಕೇಸರಿಬಾಯಿಯವರನ್ನು ಒಬ್ಬ ದೊಡ್ಡ ಸಂಗೀತಗಾರರನ್ನಾಗಿ ಮಾಡಿರಬಹುದು.

(ಮುಂದುವರಿಯುವುದು)



ಬಿದಿರಿನ ಬುಟ್ಟಿ

■ ಊರ್ಮಿಳಾ ಪವಾರ್

ಅನು: ಮಂಗ್ಳೂರ ವಿಜಯ



(ಹಿಂದಿನ ಸಂಚಿಕೆಯಿಂದ)

ಮಿಸ್ಟರ್ ಪವಾರ್‌ರ ಮಾತಿನ ಬಾಣ ನನ್ನತ್ತ ತಿರುಗಿದಾಗ, ಮಗ ಜಾಗ ಖಾಲಿ ಮಾಡಿ ಸ್ನಾನಕ್ಕೆ ಹೋದ. ನಾನೂ ಮಾತು ಬೆಳೆಸಲಿಲ್ಲ. ನಾನು ತಿರುಗಿ ಮಾತಾಡಿದಷ್ಟೂ ಮಿಸ್ಟರ್ ಪವಾರ್ ಕೆರಳ್ತಾರೆ ಎಂಬುದು ನನಗೆ ತಿಳಿದುಬಿಟ್ಟಿತ್ತು.

ಮಗ ಅನಂತರ ಕಾಲೇಜ್-ಹಾಸ್ಟೆಲ್ ಬಗ್ಗೆ ಏನೂ ಹೇಳಲಿಲ್ಲ. ರಜೆ ಬಂದಾಗ ಅಥವಾ ಹೇಳಿ ಕಳಿಸಿದಾಗ ಮನೆಗೆ ಬರ್‍ತಿದ್ದ. ಆಗಲೂ ಕಾಲೇಜ್-ಹಾಸ್ಟೆಲ್ ಬಗ್ಗೆ ಮಾತಾಡ್ತಿರಲಿಲ್ಲ. ಎಲ್ಲವೂ ಸರಿ ಹೋಗಿರಬಹುದೆಂದು ತಿಳಿದು ನಾವೂ ಸುಮ್ಮನಾದೆವು.

ಅವನಿಗೆ ನಿಜಕ್ಕೂ ಏನಾಗಿತ್ತು? ಏನಾಗ್ತಾ ಇತ್ತು? ನಾವೇ ಅರಿತುಕೊಳ್ಳಲಿಲ್ಲವೇ? ಕೆಲವು ತಿಂಗಳ ಹಿಂದೆ ಅವನ ಕಾಲೇಜ್‌ನಲ್ಲಿ ಮೀಸಲಾತಿ ವಿರೋಧಿ ಗಲಾಟೆ ನಡೆದಿತ್ತು; ರ್‍ಯಾಗಿಂಗೂ ನಡೆದಿತ್ತು. ಮಗ ಇದಕ್ಕೇನಾದರೂ ಸಿಕ್ಕು ಘಾಸಿಗೊಂಡನೇ? ಕಠೋರ ವಾಸ್ತವವನ್ನು ಎದುರಿಸುವಷ್ಟು ಅವನ ಹೃದಯ ಇನ್ನೂ ಗಟ್ಟಿಯಾಗಿರಲಿಲ್ಲವೇ?

ಮಗನ ಸಾವಿಗೆ ಕಾರಣ ಕೊನೆಗೂ ತಿಳಿಯಲಿಲ್ಲ. ಪಾರ್ಥಿವ ಶರೀರ ಬಂತು, ಕ್ರಿಯಾಕರ್ಮಾದಿಗಳು ಮುಗಿದವು. ಬಂದ ನೆಂಟರು ಹಿಂತಿರುಗಿದರು. ಮನಸ್ಸಿಗಾದ ಯಾತನೆ ಮಾತ್ರ ಕೊಂಚವೂ ಕಡಿಮೆಯಾಗಲಿಲ್ಲ. ಒಂದೂವರೆ ತಿಂಗಳಾಯಿತು; ಆಫೀಸಿಗಾದರೂ ಹೋದರೆ ದುಃಖ ಕಡಿಮೆಯಾದೀತು ಎಂಬ ಸಲಹೆಯೂ ಬಂತು.

ಬೇರೆ ದಾರಿಯಿರಲಿಲ್ಲ. ಆಫೀಸಿಗೆ ಹೋಗಲಾರಂಭಿಸಿದೆ. ಹಾಳು ಮನಸ್ಸು; ನಿಧಾನವಾಗಿ ಮಗನ ಸಾವನ್ನು ಮರೆಯಲಾರಂಭಿಸಿತು.

* * *

ಹಿಂದೆ ರಾಜ್ಯ ಸಾಹಿತ್ಯ-ಸಂಸ್ಕೃತಿ ಮಂಡಲಿಗೆ ನನ್ನ 'ಆರನೇ ಬೆರಳು' ಕಥಾ ಸಂಕಲನದ ಹಸ್ತ ಪ್ರತಿಯನ್ನು ಪ್ರಕಟಣಾ ಅನುದಾನ ಕೋರಿ ಕಳಿಸಿಕೊಟ್ಟಿದ್ದೆ. ಅದು ಆಯ್ಕೆಯಾಗಿ ಅನುದಾನ ಮಂಜೂರಾದ ವಿಷಯ ತಿಳಿಯಿತು. ಉಳಿದ ಹಣ ಹೊಂದಿಸಿ ಪ್ರಕಟಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ಹಾಗಾಗಿ ಆ ಕಡೆ ಗಮನ ನೀಡಲಿಲ್ಲ.

ಈ ವಿಷಯವನ್ನು ತಿಳಿದ ಮಿತ್ರ ಜಗದೀಶ ಮೋರೆ, ಕಥಾ ಸಂಕಲನವನ್ನು ತಮ್ಮ 'ಸಂಬೋಧಿ' ಪ್ರಕಾಶನದಿಂದ ಹೊರತರುವುದಾಗಿ, ಸದಾನಂದ ಜಾಧವ ಸ್ಮೃತಿ ದಿನದಂದು ಕೃತಿ ಬಿಡುಗಡೆ ಕಾರ್ಯಕ್ರಮ ಏರ್ಪಡಿಸುವುದಾಗಿ, ಸುಶೀಲ ಕುಮಾರ್ ಶಿಂಧೆ, ಅರುಣ ಸಾಧು, ಪ್ರ. ಶ್ರೀ. ನೆರೂರ್‌ಕರ್ ಮತ್ತು ಛಾಯಾ ದಾತಾರ್ ಕೃತಿ ಬಗ್ಗೆ ಮಾತಾಡಲು ಆಹ್ವಾನಿತರಾಗುವುದಾಗಿ ತಿಳಿಸಿದರು.

ಅದು ನನ್ನ ಮೊದಲ ಕೃತಿ. ಆದರೂ ನನ್ನಲ್ಲಿ ಸಂಭ್ರಮ ಮೂಡಲಿಲ್ಲ. ಕಾಲ ತನ್ನ ಕರಾಳ ಹಸ್ತವನ್ನು ನನ್ನ ಮೇಲಿಟ್ಟು ನನ್ನ ಅಂತಃಸತ್ವವನ್ನು ಅದುಮಿಟ್ಟಿತ್ತು. ಕಾಲವು ದುಃಖವನ್ನು ಮರೆಸುತ್ತದಂತೆ; ಆದರೆ ನನ್ನ ಪಾಲಿಗೆ ದುಃಖವು ಕಾಲವನ್ನು ಮರೆಸಿತ್ತು.

ಕಥಾ ಸಂಕಲನ ಬಿಡುಗಡೆಯಾಯಿತು. ಸಾಹಿತ್ಯಶ್ರೇಷ್ಠರು ಕಥೆಗಳಲ್ಲಿನ ಹಲವು ಮಗ್ಗುಲುಗಳನ್ನು ಎತ್ತಿ ಹೇಳಿದರು. ನನ್ನೊಂದಿಗೆ ಕಾರ್ಯಕ್ರಮಕ್ಕೆ ಮಕ್ಕಳಿಬ್ಬರೂ ಬಂದಿದ್ದರು. ಮಿಸ್ಟರ್ ಪವಾರ್ ಬರಲಿಲ್ಲ. ಸುಶೀಲ್ ಕುಮಾರ್ ಶಿಂಧೆ 'ಊರ್ಮಿಳಾ ಪವಾರ್ ಒಬ್ಬ ಮಗನನ್ನು ಕಳೆದುಕೊಂಡಿರುವುದು ಭರಿಸಲಾಗದ ನಷ್ಟ; ಈಗ ಈ ಕೃತಿಗಳು ಅವರಿಗೆ ಮಕ್ಕಳಾಗಬೇಕಿದೆ ... ...' ಎಂದರು. ಆದರೆ ಯಾವುದೂ ನನ್ನ ಹೃದಯಕ್ಕೆ ತಟ್ಟಲಿಲ್ಲ; ಮನಸ್ಸಿಗೆ ಮುಟ್ಟಲಿಲ್ಲ.

ಕೆಲಕಾಲ ನನ್ನ ಸಾಹಿತ್ಯ-ಸಂಘಟನೆಯ ಚಟುವಟಿಕೆಗಳನ್ನು ಕಡಿಮೆ ಮಾಡಿಕೊಂಡೆ. ಆಫೀಸಿನಿಂದ ನೇರವಾಗಿ ಮನೆಗೆ ಬರತೊಡಗಿದೆ. ಆದರೆ ಮಿಸ್ಟರ್ ಪವಾರ್ ದಿನಚರಿಯು ಬದಲಾಗಿತ್ತು. ಮಗನ ಸಾವಿನ ನಂತರ ಅವರು ಆಫೀಸಿನಿಂದ ಬಾರ್‌ಗೆ ಹೋಗಿ ಅರವತ್ತೋ, ತೊಂಬತ್ತೋ ಒಮ್ಮೊಮ್ಮೆ ನೂರಿಪ್ಪತ್ತೋ ಪೆಗ್ ಇಳಿಸಿ, ಮನೆ ದಾರಿ ಹಿಡಿದು 9 ಗಂಟೆ ಹೊತ್ತಿಗೆ ತಲುಪುತ್ತಿದ್ದರು. ಎಷ್ಟೋ ದಿನ ಅವರು ನನ್ನೊಂದಿಗಾಗಲಿ, ಮಕ್ಕಳೊಂದಿಗಾಗಲಿ ಎರಡು ಮಾತೂ ಆಡುತ್ತಿರಲಿಲ್ಲ.

ನಮ್ಮ ಮೇಲೆ ಸಂಕಷ್ಟಗಳ ಸುರಿಮಳೆ ಆಗುತ್ತಿದ್ದಂತಿತ್ತು. ಅದೇ ವರ್ಷ (1988) ಊರಿನಲ್ಲಿ ಅಮ್ಮ ಕಾಲು ಮುರಿದುಕೊಂಡಳು. ವೈದ್ಯರು ಸ್ಟೀಲ್ ರಾಡ್ ಹಾಕಿದ್ದು ಹೊಂದಿಕೆಯಾಗಲಿಲ್ಲ. ಇಡೀ ಆಯುಷ್ಯನ್ನು ಇತರರ ಸೇವೆಯಲ್ಲೇ ಕಳೆದ ಜೀವ ಅದು. ಈ ಘಟ್ಟದಲ್ಲೇ ಆ ಜೀವ ಅಗಲಿ ಹೋಯಿತು.

ಮಗ ಡಾಕ್ಟರ್ ಆಗಬೇಕೆಂಬ ಆಸೆ ಇತ್ತು. ಮಗ ಹೋದ ಮೇಲೆ, ಇಬ್ಬರು ಹೆಣ್ಣುಮಕ್ಕಳಲ್ಲಿ ಒಬ್ಬಳಾದರೂ ಡಾಕ್ಟರ್ ಆಗಲಿ ಎಂದುಕೊಂಡೆ. ಆದರೆ ಮಕ್ಕಳು ಮನಸ್ಸು ಮಾಡಲಿಲ್ಲ. ಹಿರಿ ಮಗಳು ಮಾಳವಿಕಾ ಎಂ.ಎ., ಎಂ.ಎಡ್. ಓದಿದಳು; ಶಾಸ್ತ್ರೀಯ ಸಂಗೀತ ಕಲಿತಳು. ಕಿರಿ ಮಗಳು ಮಾನಿನಿ ಬಿ.ಎಸ್‌ಸಿ. ಓದಿ, ಪೆಥಾಲಜಿ, ಕಂಪ್ಯೂಟರ್ ಡಿಪ್ಲೋಮಾ ಮುಗಿಸಿದಳು. ಉತ್ತಮ ಕಥಕ್ ನೃತ್ಯಗಾತಿ ಎನಿಸಿದಳು. ಈಗ ಇಬ್ಬರೂ ಉದ್ಯೋಗದಲ್ಲಿದ್ದಾರೆ. ಸಂಗೀತ-ನೃತ್ಯ ಹೇಳಿಕೊಡು ತ್ತಿದ್ದಾರೆ.

* * *

ನನ್ನ ಕುಟುಂಬ ಈ ಘಟ್ಟಕ್ಕೆ ಬಂದುದಕ್ಕೂ, ನಾನು ಸಾಹಿತ್ಯ-ಸಂಘಟನೆ ಎಂದು ಓಡಾಡಿದ್ದಕ್ಕೂ ಏನಾದರೂ ಸಂಬಂಧವಿದೆಯೇ? ನಾನು ಆಫೀಸ್ ಕೆಲಸದ ಜೊತೆಗೆ ಶುದ್ಧ ಗೃಹಿಣಿಯಾಗಿದ್ದರೆ ಮನೆಯ ಸ್ಥಿತಿ ಬದಲಾಗುತ್ತಿತ್ತೇ? 1991ರ 'ಸ್ತ್ರೀ ಉವಾಚ' ಪತ್ರಿಕೆಗಾಗಿ ನನ್ನ ಹಿರಿ ಮಗಳು ಮಾಳವಿಕಾ ನೀಡಿದ ಸಂದರ್ಶನದಲ್ಲಿ ಈ ಬಗ್ಗೆ ಉತ್ತರವಿದೆ. ಲೇಖಕಿ ವಿನಯಾ ಖಡಪೇಕರ್ ಆಯ್ದ ಸ್ತ್ರೀವಾದಿ/ಸಂಘಟಕರ ಮಕ್ಕಳನ್ನು ಸಂದರ್ಶನ ಮಾಡಿ ತಂದೆ-ತಾಯಿ ಬಗ್ಗೆ, ಮನೆಯ ವಾತಾವರಣದ ಬಗ್ಗೆ ಮಾಹಿತಿ ಕೆದಕಿ ಲೇಖನ ಪ್ರಕಟಿಸಿದಳು. ಮಾಳವಿಕಾಗೆ ಆಗ 21 ವರ್ಷ. ಅವಳ ದೃಷ್ಟಿಕೋನ ಅತ್ಯಂತ ಪ್ರಬುದ್ಧವಾಗಿತ್ತು. ಸಂದರ್ಶನದಲ್ಲಿ ಅವಳು ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿತ್ತು:

"...... ಬಿ.ಎ.ಗೆ ಸೇರಿ, ಶಿಕ್ಷಣ ಮುಂದುವರೆಸಿದಂತೆ ಅಮ್ಮ ಬದಲಾದಳು. ನೌಕರಿ, ಮನೆಗೆಲಸ, ಮತ್ತು ಅಭ್ಯಾಸಗಳ ಒತ್ತಡ ಹೆಚ್ಚಾದಾಗ, ಸಹಕರಿಸಲು ಅಪ್ಪನನ್ನು ಕೇಳತೊಡಗಿದಳು. ಎಂ.ಎ. ಮುಗಿಸುವ ಹೊತ್ತಿಗೆ ಅಮ್ಮ ಪೂರ್ಣವಾಗಿ ಬದಲಾಗಿದ್ದಳು. ಆ ಹೊತ್ತಿಗೆ ಮಹಿಳಾ ವಿಮೋಚನಾವಾದಿಯಾಗಿ ಅಮ್ಮ ಪರಿವರ್ತನೆಗೊಂಡಿದ್ದಳು. ನಮ್ಮ ಜೊತೆ ಪೋಷಕಿ ಥರ ಮಾತಾಡುವುದನ್ನು ನಿಲ್ಲಿಸಿ ಸ್ನೇಹಿತೆಯಂತೆ ಮಾತನಾಡಲಾರಂಭಿಸಿದ್ದಳು. ನಾವು ಶಾಲೆಯಿಂದ ಬರುವುದು

ತಡವಾದಾಗ ಜೋರು ಮಾಡುತ್ತಿದ್ದಳು, ಕೂಗಾಡುತ್ತಿದ್ದಳು, ಆಗಾಗ ಏಟನ್ನೂ ಕೊಡುತ್ತಿದ್ದಳು. ನಂತರ ಎಲ್ಲವನ್ನೂ ಅರ್ಥ ಮಾಡಿಕೊಳ್ಳಲಾರಂಭಿಸಿದಳು; ನಮಗೂ ಅರ್ಥ ಮಾಡಿಸುತ್ತಿದ್ದಳು.

ಅಮ್ಮ ನಮಗೆ ನಿಜವಾದ ಸ್ನೇಹಿತೆಯಾದಳು. ನಾವು ಎಲ್ಲಾ ವಿಚಾರವನ್ನೂ ಹೇಳುವಂತಾದೆವು. ನಾಲ್ಕಾರು ಹುಡುಗರ ಗುಂಪು ನನ್ನನ್ನು ಹಿಂಬಾಲಿಸಿ ಬಂದು, ಚುಡಾಯಿಸಿದ್ದನ್ನೂ ಕೂಡ ನಾನು ನಿರ್ಭಯವಾಗಿ ಹೇಳಿದೆ. ನನ್ನ ಮೇಲೆ ಅಮ್ಮನಿಗೆ ಪೂರ್ಣ ವಿಶ್ವಾಸ ಮೂಡಿತ್ತು.

ಆದರೆ ವಿಷಾದದ ವಿಷಯವೆಂದರೆ, ಅಪ್ಪನ ಬಗ್ಗೆ ಈ ಭಾವನೆ ಮೂಡಲಿಲ್ಲ. ಅವರನ್ನು ಕಂಡರೆ ಒಂದು ರೀತಿಯ ಭಯ; ಎಷ್ಟು ಬೇಕೋ ಅಷ್ಟೇ ಮಾತಾಡಿಬಿಡುತ್ತಿದ್ದೆವು!

ಅಮ್ಮ ಕೆಲಸ ಮಾಡಿ ಸಂಜೆ ಮನೆಗೆ ಹಿಂತಿರುಗಿ ಮನೆಗೆಲಸ ನೋಡಿಕೊಳ್ಳುತ್ತಿದ್ದಾಗ ಮನೆಯಲ್ಲಿ ಜಗಳವಿರಲಿಲ್ಲ. ಆದರೆ ಅಮ್ಮ ಬಿ.ಎ ಸೇರಿದಾಗ ಪ್ರಾರಂಭವಾದ ಕಹಿ ವಾತಾವರಣ ಗಾಢವಾಗುತ್ತಾ ಬಂತು. ಅಮ್ಮನ ಚಟುವಟಿಕೆಗಳು ಹೆಚ್ಚುತ್ತಾ ಹೋದಂತೆಲ್ಲ ಅಪ್ಪನ ಕೋಪ, ಅಸಹನೆಗಳೂ ಹೆಚ್ಚಾದವು. ಆಗ, ಅಪ್ಪನ ಇಷ್ಟಕ್ಕೆ ವಿರುದ್ಧವಾಗಿ ಅಮ್ಮ ಏಕೆ ನಡೆದುಕೊಳ್ಳುತ್ತಿದ್ದಾಳೆ ಎಂದು ಬೇಸರ ಮೂಡುತ್ತಿತ್ತು. ನಮಗೆ ಪರೀಕ್ಷೆ ಇದ್ದಾಗಲೂ ಅಮ್ಮ ನಮ್ಮ ಅಭ್ಯಾಸದ ಬಗ್ಗೆ ವಿಶೇಷವಾಗಿ ವಿಚಾರಿಸದೇ ಹೋದಾಗಲೂ ಬೇಸರವಾಗುತ್ತಿತ್ತು. ಆದರೆ ನಂತರ ಅಮ್ಮ ಬಿಜಿ ಇರುತ್ತಿದ್ದ ವಿಷಯ ಅರ್ಥವಾದಾಗ, ಆಗಿದ್ದ ಬೇಸರ ದೂರವಾಯಿತು. ಅಮ್ಮನ ಈ ರೀತಿಯಿಂದಾಗಿ ನಾವು ಬೇಗನೇ ಸ್ವಾವಲಂಬಿಗಳಾದೆವು. ನಾನಷ್ಟೇ ಅಲ್ಲ, ನನ್ನ ತಂಗಿ ಕೂಡ ಉದಾರ ಗುಣ ಬೆಳೆಸಿಕೊಂಡಳು; ತಾಯಿಯನ್ನು ಸ್ನೇಹಿತೆಯಾಗಿ ಪರಿಗಣಿಸಿದಳು.

ಅಮ್ಮನಿಗೆ ದೊರೆತ ಶಿಕ್ಷಣ ಹಾಗೂ ವಿಚಾರಗಳಿಂದಾಗಿ ಆಕೆ ಬದಲಾದಳು. ಆಕೆ ಕೇವಲ ತಾಯಿಯಾಗಿ ಅಷ್ಟೇ ಅಲ್ಲದೆ ಒಂದು ಜೀವವಾಗಿ, ನಾಗರಿಕಳಾಗಿ, ವಿಚಾರಶಕ್ತಿಯಿರುವ ವ್ಯಕ್ತಿಯಾಗಿ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಮುಂದಾಗಿದ್ದಳು. ಅಪ್ಪನಿಗೆ ಇದೇ ಬೇಡವಾಗಿತ್ತು. ಅಮ್ಮ ಸಂಪ್ರದಾಯಶೀಲ ಪತ್ನಿಯಾಗಿ, ಸಂಸಾರದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು ಅಪ್ಪನಿಗೆ ಇಷ್ಟವಾಗಿತ್ತು. ಗಂಡ–ಮಕ್ಕಳೇ ತನ್ನ ಪ್ರಪಂಚ ಎಂದು ಅಮ್ಮ ತಿಳಿಯಬೇಕೆಂದು ಅಪ್ಪ ಅಪೇಕ್ಷಿಸಿದ್ದ; ಅಮ್ಮ ಪಡೆದ ತಿಳಿವಳಿಕೆ, ಪದವಿಗಳು, ಅಮ್ಮನಿಗೆ ದೊರಕುತ್ತಾ ಬಂದ ಪ್ರಸಿದ್ಧಿ ಎಲ್ಲವುಗಳಿಂದ ಅಪ್ಪನಿಗೆ ಕಿರಿಕಿರಿ ಹೆಚ್ಚಾಗಿರಲೂ ಸಾಕು ; ಕೀಳರಿಮೆ ಬೆಳೆದಿರಲೂಬಹುದು. ಅಮ್ಮನನ್ನು ಅಪ್ಪ ಅರ್ಥ ಮಾಡಿಕೊಳ್ಳಲಿಲ್ಲ ; ತನ್ನ ಪುರುಷ ಮೇಲರಿಮೆಯನ್ನು ಬಿಡಲಿಲ್ಲ.

* * *

ಮಿಸ್ಟರ್ ಪವಾರ್ ಮನಸ್ಸು ಇನ್ನೂ ವಿಕ್ಷಿಪ್ತಗೊಳ್ಳಲು ಕಾರಣವಾದದ್ದು ಹಿರಿಮಗಳ ಮದುವೆ. 'ಯಾರನ್ನಾದರೂ ನೀನು ಪ್ರೀತಿಸಿದ್ದರೆ ಹೇಳು' ಎಂದು ಒಂದು ದಿನ ಏಕಾಂತದಲ್ಲಿ ಕೇಳಿಯೂ ಇದ್ದೆ. ಆದರೂ ಮಗಳು ಏನನ್ನೂ ಹೇಳಲಿಲ್ಲ. ಹಾಗಾಗಿ ನಾವು ಅವಳಿಗಾಗಿ ಹತ್ತಾರು ಕಡೆ ಹುಡುಕಿ, ಕಡೆಗೆ ಉದಯ್ ಎಂಬ ಹುಡುಗನನ್ನು ಗುರುತಿಸಿದೆವು. ಮದುವೆ ಮಾತುಕತೆ ನಡೆದು, ದಿನ ನಿರ್ಧಾರವಾಯಿತು.

ಈ ಘಟ್ಟದಲ್ಲಿ ಮಾಳವಿಕಾ ಒಂದು ದಿನ ರವಿ ಎಂಬ ಹುಡುಗನ ಬಗ್ಗೆ ಹೇಳಿ, ಅವನನ್ನೇ ಮದುವೆಯಾಗುವುದಾಗಿಯೂ, ಈಗ ನಿರ್ಧಾರವಾಗಿರುವ ಹುಡುಗ ಬೇಡ ಎಂದೂ ಹೇಳಿಬಿಟ್ಟಳು. ನನಗೆ ದಿಗ್ಭ್ರಮೆಯಾಯಿತು. ಮದುವೆ ದಿನ ಕೂಡ ನಿರ್ಧಾರವಾಗಿತ್ತು. ಈಗ ಸಂಬಂಧವನ್ನು ಮುರಿಯುವುದು ಹೇಗೆ? ಮಿಸ್ಟರ್ ಪವಾರ್ ವಿಪರೀತವಾಗಿ ನೊಂದುಕೊಳ್ಳುತ್ತಾರೆ; ಕೋಪ ಮಾಡುತ್ತಾರೆ ಎಂದು ನನಗೆ ಗಾಬರಿಯಾಯಿತು. ಮನಸ್ಸನ್ನು ಹತೋಟಿಗೆ ತಂದುಕೊಂಡು, 'ಮಗಳೇ ಈ ವಿಷಯವನ್ನು ಇಷ್ಟು ತಡವಾಗಿ ಏಕೆ ಹೇಳ್ತಾ ಇದ್ದೀಯಾ?' ಎಂದು ಆಪ್ತವಾಗಿ ವಿಚಾರಿಸಿದಾಗ, "ಅವನು ನನ್ನ ಜಾತಿಯನ್ನು ಕೇಳಿಬಿಡಬಹುದು; ಜಾತಿ ತಿಳಿದ ನಂತರ ನಿರಾಕರಿಸಬಹುದು ಎನಿಸಿತು. ಹಾಗಾಗಿ ನಾನು ಅವನಿಗೆ ಕೇಳಲೇ ಇಲ್ಲ. ಈಗ ನನ್ನ ಮದುವೆ ನಿರ್ಧಾರವಾದ ವಿಷಯ ತಿಳಿದಾಗ, ತಾನೇ ಬಂದು ಮದುವೆ ವಿಷಯ ಮಾತಾಡಿದ" ಎಂದಳು. ಮಗಳ ಉತ್ತರ ಕೇಳಿ ನಾನು ಚಿಂತಾಕ್ರಾಂತಳಾದೆ.

ಮಿಸ್ಟರ್ ಪವಾರ್‌ಗೆ ವಿಷಯ ತಿಳಿಸಲೇಬೇಕಿತ್ತು; ತಡ ಮಾಡುವ ಹಾಗೂ ಇರಲಿಲ್ಲ. ಅದೇ ದಿನ ಸಂಜೆ ಟೀ ಕಪ್ ಜೊತೆ ಮಿಸ್ಟರ್ ಪವಾರ್ ಇದ್ದ ರೂಂಗೆ ಹೋಗಿ ಕುಳಿತೆ. ಕಪ್ ಮುಂದೆ ಸರಿಸಿ ಅವರತ್ತ ನೋಡಿದೆ. ಅವರು ಕಪ್ ತೆಗೆದುಕೊಂಡರೇ ಹೊರತು, ನನ್ನ ಕಡೆ ನೋಡಲಿಲ್ಲ. ನಾನೇ ವಿಷಯವನ್ನು ತಣ್ಣನೆಯ ದನಿಯಲ್ಲಿ ಸಂಕ್ಷಿಪ್ತವಾಗಿ ಮುಂದಿಟ್ಟೆ.

ಮಿಸ್ಟರ್ ಪವಾರ್ ಟೀ ಕಪ್ ನೆಲಕ್ಕೆ ಅಪ್ಪಳಿಸಿದರು; ಕೆಂಡಾಮಂಡಲವಾದರು. "ನೀನು ಕೊಟ್ಟಿರೋ ಸಲಿಗೆಯ ಪರಿಣಾಮ ನೋಡಿಕೋ; ಯಾವನಂತೆ ಅವನು? ಇಷ್ಟು ದಿನ ಯಾಕೆ ಬಾಯಿ ಬಿಡಲಿಲ್ಲ?......" ಮಿಸ್ಟರ್ ಪವಾರ್ ಕೋಪೋದ್ರಿಕ್ತರಾಗಿದ್ದರು.

ನಾನು ತುಸು ಹೊತ್ತು ಏನೂ ಮಾತಾಡಲಿಲ್ಲ.. ಅನಂತರ 'ನಾವೀಗ ಸಮಾಧಾನದಿಂದ ತೀರ್ಮಾನಿಸಬೇಕು. ಈಗ ನಿರ್ಧಾರವಾಗಿರುವ ಹುಡುಗ ತನಗಿಷ್ಟವಿಲ್ಲ ಎಂದು ಮಗಳು ಹೇಳಿದ್ದಾಳೆ; ಇಷ್ಟರ ಮೇಲೆ ಅವಳಿಗೆ ಅವನನ್ನೇ ಕಟ್ಟುವುದು, ತಂದೆ–ತಾಯಿ ಆದ ನಮಗೆ ಭೂಷಣವಲ್ಲ; ನಮಗೆ ಏನೇ ತೊಂದರೆಯಾದರೂ, ಅವಮಾನವಾದರೂ ನಾವು ಬೇರೆ ದಾರಿ ಕಂಡುಹಿಡಿಯಲೇಬೇಕು...." ಮಿಸ್ಟರ್ ಪವಾರ್ ನನ್ನ ಮಾತುಗಳನ್ನು ಪೂರ್ತಿ ಕೇಳಲಿಲ್ಲ.

"ನಿನ್ನ ಸಲಿಗೆ ವಿಪರೀತವಾಯ್ತು. ಮಕ್ಕಳನ್ನು ತಲೆ ಮೇಲೆ ಕೂರಿಸಿಕೊಂಡವಳು ನೀನು. ನಿನ್ನ ಮೂರ್ಖತನವನ್ನು ಈಗಲಾದರೂ ನಿಲ್ಲಿಸು. ನಿರ್ಧಾರವಾಗಿರುವ ಹುಡುಗನೊಂದಿಗೆ ಮಗಳ ಮದುವೆ ಯಾಗಲಿ. ಬೇರೆ ಏನಾದ್ರೂ ಯೋಚಿಸಿ, ಸಮಾಜದಲ್ಲಿ ಮಾನ ಹೋಗೋ ಕೆಲ್ಸ ಮಾಡಬೇಡ" ಎಂದವರೇ ಎದ್ದು ಹೋದರು.

ನನ್ನನ್ನು ಇನ್ನೂ ಒಂದು ಆತಂಕ ಭಯಪಡಿಸುತ್ತಿತ್ತು. ಮಾನಸಿಕ ಆಘಾತವಾಗಿ ಮಗ ನಮ್ಮನ್ನಗಲಿದ್ದ. ಈಗ ಮಗಳಿಗೂ ಮಾನಸಿಕ ಆಘಾತವಾದರೆ? ಈ ಯೋಚನೆಯಿಂದ ನನ್ನ ಜಂಘಾಬಲ ಉಡುಗಿ ಹೋಯಿತು.

ಮಿಸ್ಟರ್ ಪವಾರ್‌ಗೆ ಇನ್ನೂ ಒಂದು ಬಾರಿ ವಿಷಯ ಮನದಟ್ಟು ಮಾಡಿಕೊಡುವುದು ; ಆ ಬಳಿಕವೂ ಅವರು ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳದಿದ್ದರೆ, ಮಗಳ ಮದುವೆ ವಿಷಯವನ್ನು ತೀರ್ಮಾನಿಸುವ ಜವಾಬ್ದಾರಿಯನ್ನು ನಾನೊಬ್ಬಳೇ ಹೊತ್ತುಕೊಳ್ಳುವುದು ಎಂದು ನಿರ್ಧರಿಸಿದೆ. ಎರಡು ದಿನ ಬಿಟ್ಟು ಮತ್ತೆ ಮಿಸ್ಟರ್ ಪವಾರ್ ಮುಂದೆ ವಿಷಯ ಪ್ರಸ್ತಾಪಿಸಿದೆ.

ಮಿಸ್ಟರ್ ಪವಾರ್ ಒಪ್ಪಲಿಲ್ಲ. "ನಾಲ್ಕು ಜನ ಏನೆಂದಾರು? ಮದುವೆ ನಿರ್ಧಾರವಾಗಿರುವ ಹುಡುಗನಿಗೆ ಹಾಗೂ ಅವನ ಮನೆಯವರಿಗೆ ಏನೆಂದು ಉತ್ತರ ಹೇಳೋದು? ಮದುವೆ ಎಂದರೇನು ಹುಡುಗಾಟವೇ, ಬೇಕಾದಾಗ ಒಪ್ಪುವುದಕ್ಕೆ, ಬೇಡವಾದಾಗ ಬಿಡುವುದಕ್ಕೆ?.....' ಎಂದೆಲ್ಲಾ ಪ್ರಶ್ನೆಗಳನ್ನು ಎಸೆದರು.

ನಾನು ಮಾತ್ರ ಎಲ್ಲಾ ರೀತಿಯಲ್ಲಿ ಆಲೋಚಿಸಿದ್ದೆ. ಈ ಮದುವೆ ನಿರ್ಧಾರವಾಗಿರುವಂತೆ ನಡೆದರೆ ಮೂವರೂ–ನನ್ನ ಮಗಳು, ಅವಳನ್ನು ಮದುವೆಯಾದವ ಮತ್ತು ಅವಳನ್ನು ಮದುವೆಯಾಗಬೇಕೆಂದುಕೊಂಡವ –ಜೀವನ ಪೂರ್ತಿ ಪಶ್ಚಾತ್ತಾಪ ಪಡಲಿದ್ದರು. ಇವರ ಜೊತೆಗೆ ನಾನು.

ಈ ಮದುವೆ ಬಳಿಕ ಮಗಳ ಸಂಸಾರದಲ್ಲಿ ಯಾವುದೇ ಕಾರಣಕ್ಕೆ ಮನಸ್ತಾಪ ಬಂದರೂ, ಮಿಸ್ಟರ್ ಪವಾರ್ ಕೂಡ ದುಃಖಿಯಾಗುವುದು ನಿಶ್ಚಯವಿತ್ತು.

ಈ ಮದುವೆಯನ್ನು ಮುರಿದುಕೊಂಡರೆ ಏನಾದೀತು ಎಂದು ನಾನು ಯೋಚಿಸಿದೆ. ಹುಡುಗನಿಗೆ ತತ್‌ಕ್ಷಣವೇ ಷಾಕ್ ಆಗುತ್ತದೆ; ಆದರೆ ವಿಷಯ ತಿಳಿದಾಗ ಮನಸ್ಸಿಲ್ಲದಿದ್ದರೂ ಮದುವೆಯಾಗಿ ತನಗೆ ಮೋಸ ಮಾಡಲಿಲ್ಲವಲ್ಲ ಎಂಬ ಕಾರಣಕ್ಕೆ ತುಸು ಸಮಾಧಾನವೇ ಆದೀತೇನೊ. ಮಗಳಂತೂ ಸಂತೋಷದಿಂದ ಇರ್ತಾಳೆ; ಅವಳನ್ನು ಮದುವೆಯಾದ ಹುಡುಗನೂ ತೃಪ್ತಿಯಿಂದ ಇರ್ತಾನೆ. ನನಗೂ ಸಮಾಧಾನವಾಗುತ್ತೆ. ಎಲ್ಲವೂ ಸಂತೋಷದಿಂದ ಆದುದಕ್ಕೆ ಮಿಸ್ಟರ್ ಪವಾರ್ ಕೂಡ ಅನಂತರ ತೃಪ್ತಿ ಪಟ್ಟಾರು.

ಮಗಳನ್ನು ಕೂರಿಸಿಕೊಂಡು ಮತ್ತೆ ವಿಚಾರಿಸಿದೆ. ಅವಳ ಖಚಿತ ಅಭಿಪ್ರಾಯ ತಿಳಿದ ಬಳಿಕ ಅವಳು ಇಷ್ಟಪಟ್ಟ ಹುಡುಗನನ್ನು ಭೇಟಿಯಾದೆ. ಒಮ್ಮೆ ಒಬ್ಬಳೇ, ಇನ್ನೊಮ್ಮೆ ಮಗಳೊಂದಿಗೆ. ಮಹಾರಾಷ್ಟ್ರೀಯ ಅಲ್ಲದಿದ್ದರೂ, ಸ್ವಾವಲಂಬಿ ಹಾಗೂ ಸ್ವಂತ ವಿಚಾರಶಕ್ತಿಯವ ಎಂಬುದು ಗೊತ್ತಾಗಿ ಒಪ್ಪಿಕೊಂಡೆ. ಮಿಸ್ಟರ್ ಪವಾರ್ ಜೊತೆ ಈ ಬಗ್ಗೆ ಮತ್ತೊಂದು ಸಾರಿ ಮಾತಾಡಿದೆ. ನನ್ನ ನಿರ್ಧಾರವನ್ನೂ ತಿಳಿಸಿದೆ. 'ನಿಮ್ಮನ್ನು ಬಿಟ್ಟು ನಾನು ಮಗಳ ಮದುವೆ ವಿಚಾರದಲ್ಲಿ ಸ್ವತಂತ್ರ ನಿರ್ಧಾರ ಕೈಗೊಳ್ಳುತ್ತೇನೆ' ಎಂದಾಗ ಅವರಿಗೆ ಬೆಂಕಿ ತುಳಿದ ಹಾಗಾಗಿರಬಹುದು. ಅನ್ಯಾಯ ದ್ದಾದರೂ ಪುರುಷ ಸಹಜ ವರ್ತನೆಯೇ ಅದಾಗಿತ್ತು ಎಂದೂ ನಾನು ಅರಿತಿದ್ದೆ.

ಮಿಸ್ಟರ್ ಪವಾರ್‌ಗೆ ಕಡೇ ದಿನದವರೆಗೂ ತಿಳಿಸಿ ಹೇಳಿದೆ. 'ಮಗಳ ಭವಿಷ್ಯದ ಮುಂದೆ ಮನೆತನದ ಮರ್ಯಾದೆ, ಬಂಧು-ಮಿತ್ರರಲ್ಲಿ ಆಗುವ ಅವಮಾನ ಇತ್ಯಾದಿ ಎಲ್ಲವೂ ನಗಣ್ಯವಲ್ಲವೇ?' ಎಂದು ನಾನಾ ಪರಿಯಾಗಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದೆ. ಅವರು ಒಪ್ಪಲಿಲ್ಲ. ಅವರ ನಿರ್ಧಾರದ ಬಗ್ಗೆ ನನಗೆ ಆಶ್ಚರ್ಯವೂ ಆಯಿತು; ದುಃಖವೂ ಆಯಿತು.

ನನಗೆ ಯಾವ ಸಂಬಂಧಿಕರಿಂದಲೂ ಬೆಂಬಲ ಸಿಗುವ ಭರವಸೆ ಇರಲಿಲ್ಲ. ಹಾಗಾಗಿ ಏಕಾಂಗಿಯಾಗಿ ನಿರ್ಧಾರ ಕೈಗೊಂಡೆ. ಮದುವೆಗೆ ಬುಕ್ ಮಾಡಿದ್ದ ಹಾಲ್ ಕ್ಯಾನ್ಸಲ್ ಮಾಡಿದೆ. ಹುಡುಗನನ್ನು ಕರೆಯಿಸಿಕೊಂಡೆ. ಅರ್ಧದಿನ ಅವನನ್ನು ನಮ್ಮ ಮನೆಯಲ್ಲೇ ಕೂರಿಸಿಕೊಂಡು ಸಮಾಧಾನದಿಂದ ವಿಷಯ ವಿವರಿಸಿದೆ. ಅವನಿಗೆ ಮನಸ್ಸಿನಾಳದಲ್ಲಿ ಖಂಡಿತವಾಗಿಯೂ ದುಃಖವಾಗಿರಬೇಕು; 'ಇದೆಲ್ಲವೂ ತಾತ್ಕಾಲಿಕ ಎಂದು ನನಗೆ ತಿಳಿದಿತ್ತು. ಕಡೆಗೆ ಅವನು ಭಾರವಾದ ಹೃದಯದಿಂದ ತೆರಳಿದ. ಅವನು ಮನೆಗೆ ಬಂದಾಗ ಮಿಸ್ಟರ್ ಪವಾರ್ ಇರಲಿಲ್ಲ; ಮಗಳು ಮಾತ್ರ ಇದ್ದಳು. ಅವಳೂ ಅವನ ಕ್ಷಮೆ ಯಾಚಿಸಿದಳು.

ಮದುವೆಯನ್ನು ನಾನು ಮುರಿದದ್ದು ಬಯಲಾದಾಗ, ಮಿಸ್ಟರ್ ಪವಾರ್ ಬೆಂಕಿಯಾದರು. ತಮ್ಮ ಕೋಪವನ್ನು ವ್ಯಕ್ತಪಡಿಸಲು ಮಗಳ ಮೇಲೆ ಕೈಮಾಡಲು ಮುಂದಾದಾಗ, ನಾನು ಧಾವಿಸಿ ಹೋದೆ. ನನಗೆ ನಾಲ್ಕೇಟು ಬಿದ್ದರೂ, ಮಗಳ ಮೇಲೆ ಕೈಮಾಡಲು ಅಪ್ಪನಿಗೆ ಅವಕಾಶ ಕೊಡಲಿಲ್ಲ. ಮಿಸ್ಟರ್ ಪವಾರ್‌ರ ಕೋಪ ನನ್ನ ಮೇಲೆ ತಿರುಗಿತು. 'ನಿನ್ನನ್ನು ಬಯಸಿ ಮದುವೆಯಾದೆ; ಡಿಗ್ರಿ, ಮಹಿಳಾ ವಿಮೋಚನೆ, ಹಾಳು-ಮೂಳು ದೆವ್ವ ಹಿಡಿಯುವವರೆಗೆ ನೀನು ಚೆನ್ನಾಗೇ ಇದ್ದಿ. ಅನಂತರ ನಿನಗೇನಾಯಿತು? ನನ್ನ ಸಂಸಾರದಲ್ಲಿ ಮಗ್ಗಲು ಮುಳ್ಳಾದೆ. ಮಕ್ಕಳ ಬಗ್ಗೆ ಕಕ್ಕುಲಾತಿ ತೋರಲಿಲ್ಲ; ಮನೆ ಬಗ್ಗೆ ಕಾಳಜಿ ತೋರಲಿಲ್ಲ......' ಎಂದೆಲ್ಲಾ ನಿಂದಿಸಿದರು.

ನಾನು ಎಲ್ಲವನ್ನೂ ಸಹಿಸಿಕೊಂಡೆ. ಮಿಸ್ಟರ್ ಪವಾರ್ ಮನಸ್ಸಿನಲ್ಲಿ ಇದ್ದುದನ್ನೆಲ್ಲ ಆಡಿರಲಿಲ್ಲ ಎಂಬುದು ನನಗೆ ತಿಳಿದಿತ್ತು. 'ಈ ಹೆಂಗಸು ತನ್ನನ್ನು ಧೈರ್ಯಶಾಲಿ ಎಂದುಕೊಂಡಿದ್ದಾಳೆ; ಆದರೆ ಇದು ಧೈರ್ಯವಲ್ಲ, ಭಂಡತನ. ಇದು ಅವಳಿಗೆ ಗೊತ್ತಿಲ್ಲ. ಮಗಳು ಪ್ರೀತಿ ಮಾಡಿರುವ ವಿಷಯ ತಿಳಿದಾಗ, ನಿಶ್ಚಯವಾಗಿರುವ ಮದುವೆಯನ್ನು ಮುರಿದಿದ್ದಾಳೆ ಈ ಮೂರ್ಖ ಹೆಂಗಸು; ಯಾವುದೋ ಸಿನಿಮಾ, ಕಾದಂಬರಿ, ಕಥೆ ರೀತಿಯಲ್ಲಿ ಮಗಳ ಭವಿಷ್ಯವನ್ನು ರೂಪಿಸಲು ಹೊರಟಿದ್ದಾಳೆ. ಕೊನೇ ಗಳಿಗೆಯಲ್ಲಿ ಮದುವೆಯಾಗುವ ನಿರ್ಧಾರವನ್ನು ಬಾಯಿ ಬಿಟ್ಟಿರುವ ಆ ಹುಡುಗ, ಈ ಮದುವೆ ಮುರಿದ ಮೇಲೆ ಮತ್ತೆ ತನ್ನ ನಿರ್ಧಾರವನ್ನು ಬದಲಿಸುವುದಿಲ್ಲ ಎಂದು ಏನು ಗ್ಯಾರಂಟಿ?... ...' ಎಂಬ ಮಾತುಗಳೆಲ್ಲ ಮಿಸ್ಟರ್ ಪವಾರ್ ಮನದ ಅಂಗಳದಲ್ಲಿ ಥಕಥೈ ನಡೆಸಿದ್ದವೆಂಬುದನ್ನೂ ನಾನು ಅರಿತಿದ್ದೆ.

ಮಿಸ್ಟರ್ ಪವಾರ್‌ಗೆ ಬಂದಿದ್ದ ಕೊನೆಯ ಸಂದೇಹ ನನಗೂ ಬಂದಿತ್ತು. ಆ ಹಿನ್ನೆಲೆಯಲ್ಲೇ ನಾನು ಆ ಹುಡುಗನನ್ನು ಕರೆಯಿಸಿಕೊಂಡು ಮಾತನಾಡಿದ್ದೆ.

ಮದುವೆ ಮುರಿದು ಬಿದ್ದ ಮೇಲೆ, ನನ್ನ ಹಲವಾರು ಬಂಧುಗಳೂ ನನ್ನಿಂದ ದೂರವಾದರು. 'ಮಕ್ಕಳ ಕಡೆಗೆ ಅವಳಿಗೆ ಗಮನವೇ ಇಲ್ಲ. ಹಿರಿಯವಳು ಯಾವನೋ ಯು.ಪಿ. ಹುಡುಗನನ್ನು ಲವ್ ಮಾಡಿದಳಂತೆ; ಅದೂ ಈ ಹೆಂಗಸಿಗೆ ಗೊತ್ತಾಗಲಿಲ್ಲವಂತೆ. ಎಂಥ ತಾಯಿ ಇವಳು? ......' ಎಂದು ಹಿಂದೆ ಆಡಿಕೊಂಡವರೂ ಇದ್ದಾರು.

ನನ್ನ ಹೃದಯ ಗಟ್ಟಿಯಾಗಿತ್ತು. ಯಾರ ಮಾತು ಕಿವಿಗೆ ಬಿದ್ದರೂ ವಿಚಲಿತಳಾಗದಿರಲು ನಿರ್ಧರಿಸಿದ್ದೆ. ಇದೇ ನಿರ್ಧಾರ ಮಾಡಲು ಮಗಳಿಗೂ ತಿಳಿಸಿದ್ದೆ. ನನಗೂ - ಮಿಸ್ಟರ್ ಪವಾರ್‌ಗೂ ಮಾತು ಮುರಿದಿತ್ತು; ಮಕ್ಕಳೊಂದಿಗೂ ಅವರ ಮಾತು ಕಡಿಮೆಯಾಗಿತ್ತು. ಒಂದು ದಿನ ಬೆಳಿಗ್ಗೆ ಚಹಾ ಮುಗಿದ ಮೇಲೆ ಮಿಸ್ಟರ್ ಪವಾರ್ ವಿಪರೀತ ಭಾವುಕರಾಗಿ "ಏಯ್ ಮಾಲೂ, ನೀನು ಈ ಮನೆ ಯಲ್ಲಿರಬೇಡ; ಹೊರಟು ಹೋಗು" ಎಂದು ಕಿರುಚಿದರು. ಮಗಳು ಗಾಬರಿಯಾಗಿ ರೂಂನಲ್ಲಿ ಕುಳಿತಳು. ಮಿಸ್ಟರ್ ಪವಾರ್‌ಗೆ ಅಂದೇನಾಗಿತ್ತೋ ಏನೋ ಒಂದೇ ಸಮನೆ ಒತ್ತಾಯಿಸತೊಡಗಿದರು. ನನಗೂ ರೇಗಿ ಹೋಗಿ "ಅವಳೇಕೆ ಮನೆ ಬಿಟ್ಟು ಹೋಗಬೇಕು? ಎಲ್ಲಿಗೆ ಹೋಗಬೇಕು? ಮಗಳಿಗೆ ಹೀಗೆ ಹೇಳುತ್ತೀರಲ್ಲ, ನಿಮಗೆ ಏನೂ ಅನಿಸೋದಿಲ್ಲವೆ?" ಎಂದು ಗಟ್ಟಿಯಾಗಿ ಹೇಳಿದೆ. ಮಿಸ್ಟರ್ ಪವಾರ್ ಇನ್ನೂ ಗಟ್ಟಿಯಾಗಿ "ಅವಳು ಹೋಗಲೇಬೇಕು; ಮನೆ ಮರ್ಯಾದೆ ಕಳೆದವಳು ಅವಳು" ಎಂದು ಕೂಗಿದರು. ನಾನೂ ತಾಳ್ಮೆಗೆಟ್ಟು "ಅವಳು ಹೋಗೋದಿಲ್ಲ; ಈ ಮನೆ ಬರೀ ನಿಮ್ಮದಲ್ಲ; ಅವಳೂ ಈ ಮನೆಯವಳೇ" ಎಂದುಬಿಟ್ಟೆ. ಮಿಸ್ಟರ್ ಪವಾರ್‌ಗೆ ಈ ಮಾತುಗಳು ತುಸು ಹೆಚ್ಚಿಗೇ ನಾಟಿದವೇನೋ. ಅವರು ಇದ್ದಕ್ಕಿದ್ದ ಹಾಗೆ ಸುಮ್ಮನಾದರು. ಗಂಟೆ ಕಾಲದ ನಂತರ ನಾನು "ಬೇಸರ ಮಾಡಿಕೊಳ್ಳಬೇಡಿರಿ; ಮಕ್ಕಳು ದೊಡ್ಡವರಾಗಿದ್ದಾರೆ. ಅದನ್ನು ಅರಿತು ಮಾತಾಡಿರಿ. ನೀವು ಹೀಗೆ ಮಾತಾಡಿದರೆ ಅವರ ಮನಸ್ಸಿಗೂ ಎಷ್ಟು ನೋವಾಗುತ್ತದೆ ಯೋಚಿಸಿ......" ಎಂದು ಸಮಾಧಾನದಿಂದ ಹೇಳಿದೆ. ಮಿಸ್ಟರ್ ಪವಾರ್ ಕೇಳಲಿಲ್ಲ; ಎದ್ದು ಹೋದರು.

ಐದು ತಿಂಗಳ ಬಳಿಕ ಮಾಳವಿಕಾ-ರವಿ ಮದುವೆ ನಡೆಯಿತು. ಹುಡುಗ ಯು.ಪಿ.ಯವನಾದ್ದರಿಂದ ಅವನ ಕಡೆಯವರು ಹೆಚ್ಚು ಜನ ಬಂದಿರಲಿಲ್ಲ. ಹುಡುಗನಿಗಾಗಲಿ, ಅವನ ಮನೆಯವರಿಗಾಗಲಿ ಬೌದ್ಧ ಧರ್ಮದ ಗಂಧ-ಗಾಳಿ ಇದ್ದಂತಿರಲಿಲ್ಲ. ಹಾಗಾಗಿ ಮದುವೆ ಹಿಂದೂ ಧರ್ಮದ ರೀತಿ-ರಿವಾಜಿನಲ್ಲಿ ನಡೆಯಿತು.

ಮಿಸ್ಟರ್ ಪವಾರ್‌ಗೆ ಮಾತ್ರ ಮನಃಶಾಂತಿ ಇರಲಿಲ್ಲ. ಮದುವೆಯ ಬಳಿಕವೂ ಅವರ ಮನಸ್ಸು ಸ್ಥಿಮಿತಕ್ಕೆ ಬರಲಿಲ್ಲ. "ದಿಕ್ಕು ಗೊತ್ತಿಲ್ಲದವನಿಗೆ

ಮಗಳನ್ನು ಕೊಟ್ಟಿದ್ದೀಯಾ? ಅವನೋ ಫಿಲ್ಮ್ ಫೀಲ್ಡ್‌ನವನು. ಒಂದೊಮ್ಮೆ ಹುಡುಗಿಯನ್ನು ಫರಾಸ್ ರೋಡ್ (ವೇಶ್ಯಾ ವಾಟಿಕೆ)ಗೆ ತಳ್ಳಿ ಹೋದರೂ ಹೋಗಿಯಾನು......" ಎಂದು ಕಹಿ ಕಾರಿದರು. ಒಮ್ಮೊಮ್ಮೆ "ಯಾಕೋ ನಿನ್ನನ್ನು ಕಂಡರೆ ನನ್ನ ಬಿ.ಪಿ ಏರುತ್ತೆ, ನೀನು ಈ ಮನೆಯಲ್ಲಿರಬೇಡ ಹೋಗು" ಎಂದು ಕಿಡಿ ಕಾರುತ್ತಿದ್ದರು. ನನಗೂ ವಿಪರೀತ ದುಃಖ ವಾಗುತ್ತಿತ್ತು. ಮನೆಯವರ ವಿರೋಧ ಎದುರಿಸಿ ಮದುವೆಯಾದ ಗಂಡ, ಮದುವೆಯಾಗಿ ಮೂವತ್ತು ವರ್ಷಗಳಾದ ಬಳಿಕ ಈ ರೀತಿ ಮಾತಾಡುತ್ತಿದ್ದ. ಇದಕ್ಕೆಲ್ಲ 'ನಿನ್ನ ಜ್ಞಾನ, ತಿಳಿವಳಿಕೆ ಕಾರಣವಾಗಿದೆ' ಎನ್ನುತ್ತಿದ್ದ. 'ಬುದ್ಧಿವಂತೆ, ವಿಚಾರವಂತೆ ಹೆಂಡತಿಯಿಂದ ಸಂಸಾರಕ್ಕೆ ಧಕ್ಕೆ' ಎಂದು ಚುಚ್ಚುತ್ತಿದ್ದ. ಹೌದೆ? ಹೌದೆ? ಎಂದು ಮನಸ್ಸು ಕೆದಕಿ ಕೇಳುತ್ತಿತ್ತು; ಮೌನವಾಗಿ ರೋದಿಸುತ್ತಿತ್ತು.

ಕೆಲವೊಮ್ಮೆ ನಮ್ಮದೇನೂ ತಪ್ಪಿಲ್ಲದಿರುವಾಗ ಕೂಡ ನೋವನ್ನು ಅನುಭವಿಸಬೇಕಾಗಿ ಬರುತ್ತದೆ. ನನ್ನ ಸ್ಥಿತಿ ಹಾಗೇ ಆಗಿತ್ತು. ನನ್ನ ಸಂಸಾರ ಹಾಳಾಗಿದ್ದರಲ್ಲಿ ನನ್ನ ಪಾಲೇನಿತ್ತು ಎಂಬುದು ಸ್ಪಷ್ಟವಾಗಿರಲಿಲ್ಲ. 'ಎಲ್ಲಾ ಪಾಲು ನಿನ್ನದೇ' ಎಂದು ಮಿಸ್ಟರ್ ಪವಾರ್ ದೂಷಿಸುತ್ತಿದ್ದುದರಲ್ಲಿ ನ್ಯಾಯವಿತ್ತೆಂದು ನನಗನಿಸುತ್ತಿರಲಿಲ್ಲ. ಆದರೂ ಜೀವನದ ಆ ಘಟ್ಟದಲ್ಲಿ ನನ್ನ ಹೃದಯಕ್ಕೆ ವಾಸಿಯಾಗದ ಗಾಯವಾಗಿತ್ತು. ಮಾನಸಿಕ ಹೊರೆ ಹೆಗಲೇರಿತ್ತು. ಅದನ್ನು ಹೊತ್ತುಕೊಂಡು ನಾನು ಭವಿಷ್ಯದ ದಿನಗಳನ್ನು ಸವೆಸಬೇಕಿತ್ತು.

ಮುಂದೆ ಒಂದೆರಡು ವರ್ಷಗಳಲ್ಲಿ ಉದಯ್-ನನ್ನ ಹಿರಿ ಮಗಳು ಮಾಳವಿಕಾಗೆ ಮೊದಲು ನಿರ್ಧಾರವಾಗಿದ್ದ ಹುಡುಗ-ಮದುವೆ ಯಾಗುತ್ತಿರುವ ವಿಷಯ ತಿಳಿಯಿತು. ಉದಯನೇ ಆಫೀಸಿಗೆ ಬಂದು ಆಹ್ವಾನ ಪತ್ರ ನೀಡಿದ. ನನ್ನ ಹೃದಯ ತುಂಬಿ ಬಂತು. ನನ್ನ ಮಗನನ್ನೇ ಮಾತಾಡಿಸುತ್ತಿದ್ದ ಹಾಗೆ ಭಾವುಕಳಾದೆ. ಮನಸಾರೆ ಹರಸಿದೆ. ಮನಸ್ಸಿನ ಹೊರೆ ತುಸು ಕಡಿಮೆ ಆದಂತೆನಿಸಿತು.

* * *

ಈ ಕಾಲದಲ್ಲೇ ಮರಾಠಿಯ ಪ್ರತಿಭಾವಂತ ಚಿತ್ರ ನಿರ್ದೇಶಕ ಜಬ್ಬಾರ್ ಪಟೇಲ್ 'ಡಾ॥ ಅಂಬೇಡ್ಕರ್' ಚಿತ್ರವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದರು. ಭಾನು ಆಥೈಯ್ಯಾ ಕಲಾನಿರ್ದೇಶಕರಾಗಿ ಜೊತೆ ಗೂಡಿದ್ದರು. ವಸ್ತ್ರ ವಿನ್ಯಾಸಕ್ಕೆ ದಲಿತ ಸಮುದಾಯದ ಚಿರಪರಿಚಯ ಇರುವವರಿಗಾಗಿ ಹುಡುಕಾಟ ನಡೆದಾಗ, ನಾಲ್ಕಾರು ಜನ ಪ್ರಮುಖರ ಸಲಹೆಯಂತೆ ನನಗೆ ಆಹ್ವಾನ ನೀಡಲಾಯಿತು. ಡಾ॥ ಪಟೇಲ್‌ರ ಸಹಾಯಕ ನನ್ನನ್ನು ಸಂಪರ್ಕಿಸಿದ.

ಚಿತ್ರಕ್ಕೆ ಎಷ್ಟು ಸಮಯ ಕೊಡಬೇಕಾಗುತ್ತದೆ ಎಂಬುದನ್ನು ತಿಳಿದುಕೊಂಡು ಒಪ್ಪಿಗೆ ಸೂಚಿಸಿದೆ. ಈ ಕಾರ್ಯದಲ್ಲಿ ತೊಡಗಿದ್ದರಿಂದ ಮನಸ್ಸಿನ ಭಾರ ಇನ್ನೂ ಕೊಂಚ ಇಳಿಯಿತು. ಆ ದಿನಗಳಲ್ಲಿ ಚಿತ್ರೀಕರಣ ನೋಡುತ್ತಿದ್ದ ಹಾಗೆ ವ್ಯವಸ್ಥೆಗೆ ಬಲಿಯಾಗಿ ನೋವು-ಅಪಮಾನ ಅನುಭವಿಸಿದ ಬಾಬಾಸಾಹೇಬರ ಸಂಕಷ್ಟದ ಎದುರು ನನ್ನದು ಯಾವ ಮಹಾ ಸಂಕಷ್ಟವೂ ಅಲ್ಲವೆನಿಸಿತು. ಕೇರಳದ ಶ್ರೇಷ್ಠ ನಟ ಮಮ್ಮೂಟಿ ಡಾ॥ ಅಂಬೇಡ್ಕರ್ ಪಾತ್ರದಲ್ಲಿ ಮೇರು ಅಭಿನಯ ಮಾಡಿದ್ದರು.

* * *

ಮಿಸ್ಟರ್ ಪವಾರ್ ಆ ವರ್ಷ ಪೋಸ್ಟ್ ಮಾಸ್ಟರ್ ಹುದ್ದೆಯಿಂದ ನಿವೃತ್ತರಾದರು. ಅವರು ಹೆಚ್ಚು ಕಾಲ ಮನೆಯಲ್ಲಿರತೊಡಗಿದರು. ನಾಕಾರು ಗೆಳೆಯರು ಆಗಾಗ ಮನೆಗೆ ಬರುವುದನ್ನು ಹೊರತುಪಡಿಸಿದರೆ, ಅವರು ಏಕಾಂಗಿಯಾಗಿಯೇ ಕಾಲ ಕಳೆಯುತ್ತಿದ್ದರು.

ತಂದೆ-ಮಗಳು, ಗಂಡ-ಹೆಂಡತಿ ನಡುವೆ ಮಾತುಕತೆ ಬಹುತೇಕ ವಾಗಿ ನಿಂತು ಹೋಗಿತ್ತು. ದಿನಗಳು ಉರುಳಿ ಹೋಗುತ್ತಿದ್ದವು. ಆಫೀಸು, ಸಾಹಿತ್ಯ-ಸಂಘಟನೆ ಚಟುವಟಿಕೆ ಎಂದು ಹೊರಗಿದ್ದಾಗ ಮನೆಯಲ್ಲಿದ್ದ ಮಿಸ್ಟರ್ ಪವಾರ್ ನೆನಪಾಗುತ್ತಿದ್ದರು. ಹಾಗೆಂದು ರಜೆ ಹಾಕಿ ಮನೆಯಲ್ಲಿದ್ದು ನೋಡಿದೆ. ಮಿಸ್ಟರ್ ಪವಾರ್ ಜೊತೆ ಮಾತಾಡಲು ಸಾಧ್ಯವಾಗಲಿಲ್ಲ. ಗಂಡ ಹರಿಶ್ಚಂದ್ರನನ್ನು ಹುಡುಕಲೂ ಪ್ರಯತ್ನಿಸಿದೆ. ಪ್ರತಿಸ್ಪಂದನ ಸಿಗಲಿಲ್ಲ. ಮನೆಯೇ ನನಗೆ ಪರಕೀಯವೆನಿಸತೊಡಗುತ್ತಿತ್ತು.

ಇಷ್ಟಾದರೂ ಹರಿಶ್ಚಂದ್ರನ ಮನಸ್ಸು ಮತ್ತೆ ನನ್ನತ್ತ ಒಲಿಯಲಿಲ್ಲವಲ್ಲ ಎಂದು ವ್ಯಥೆಯಾಯಿತು. ಆತ ನನ್ನನ್ನು ಅಂಕೆಯಲ್ಲಿಟ್ಟುಕೊಳ್ಳ ಬಯಸಿದ್ದನೆ! ಅಥವಾ ನಾಲ್ಕು ಜನರಿಗೆ ತೋರ್ಪಡಿಸಲು, ತನ್ನ ಪುರುಷ ಸಿದ್ಧವಾದ ಅಹಂ ತೃಪ್ತಿಪಡಿಸಿಕೊಳ್ಳಲು ಪತ್ನಿಯನ್ನು ಅಂಕೆಯಲ್ಲಿಟ್ಟು ಕೊಳ್ಳುವ ಪ್ರಯತ್ನ ನಡೆಸಿದ್ದನೆ? ಯಾವುದೂ ಸ್ಪಷ್ಟವಾಗಲಿಲ್ಲ.

ಭಾವನ (ಹರಿಶ್ಚಂದ್ರನ ಅಣ್ಣ) ಮಗಳು ಸುಗಂಧಾ ಕಿಡ್ನಿ ತೊಂದರೆಯಿಂದಾಗಿ ಮುಂಬೈನ ಸಾಯನ್ ಆಸ್ಪತ್ರೆಗೆ ದಾಖಲಾದಳು. ವಿಷಯ ತಿಳಿದಾಗ ನಾನು ಮತ್ತು ಮಿಸ್ಟರ್ ಪವಾರ್ ಆಸ್ಪತ್ರೆಗೆ ಹೋಗಿ ಅವಳನ್ನು ಮಾತಾಡಿಸಿದೆವು.

ಅಲ್ಲೇ ಮಿಸ್ಟರ್ ಪವಾರ್ 'ನನಗೆ ಸುಸ್ತಾಗಿದೆ' ಎಂದು ಕುಸಿದರು. ಗಾಬರಿಯಾಗಿ ವೈದ್ಯರಿಗೆ ತೋರಿಸಿದೆವು. ಆಗ ಅವರು "ಹಸಿವು ಕಮ್ಮಿ; ಮೂತ್ರದಲ್ಲಿ ರಕ್ತ ಹೋಗುತ್ತಿದೆ,......" ಮುಂತಾಗಿ ವೈದ್ಯರಿಗೆ ತಿಳಿಸಿದರು. ಸೋನೋಗ್ರಫಿ; ಸಿ.ಟಿ. ಸ್ಕ್ಯಾನ್ ಇತರ ಪರೀಕ್ಷೆಗಳನ್ನು ಮಾಡಿ ಮುಗಿಸಿದರು.

ಡಾ॥ ವಿಜಯ್ ಸಾಳ್ವೆ ಮತ್ತು ಡಾ॥ ಹೇಮಲತಾ ಕೇದಾರೆ ಮದುವೆಯಾಗುವಾಗ ಎರಡೂ ಮನೆಗಳಿಂದ ವಿರೋಧ ಬಂದಿದ್ದರಿಂದ ನೆರವು ಕೋರಿ ಡಾ॥ ವಿಜಯ್ ನಮ್ಮ ಬಳಿ ಬಂದಿದ್ದರು. ನಾವು ಇತರ ಮಿತ್ರರ ಸಹಾಯದಿಂದ ಕಾಯ್ದೆ ಪ್ರಕಾರ ಅವರ ಮದುವೆ ಮಾಡಿಸಿದ್ದೆವು.

ಅದೇ ಡಾ॥ ವಿಜಯ್ ಸಾಳ್ವೆ ಇದೇ ಆಸ್ಪತ್ರೆಯಲ್ಲಿದ್ದರು. ನಾನು ಅವರನ್ನು ಹುಡುಕಿ ವಿಷಯ ತಿಳಿಸಿದೆ. ಅವರು ಖುದ್ದಾಗಿ ಬಂದು ನೋಡಿದರು. ಮಿಸ್ಟರ್ ಪವಾರ್‌ಗೆ ಚಿಕಿತ್ಸೆ ನೀಡಿದರು. ಹೆಚ್ಚಿನ ಪರೀಕ್ಷೆ ಮಾಡಲು ಹಿರಿಯ ವೈದ್ಯರನ್ನು ಕರೆತಂದರು.

ಆ ಸಂಜೆ ಡಾ॥ ವಿಜಯ್ "ಅಣ್ಣನಿಗೆ (ಮಿಸ್ಟರ್ ಪವಾರ್) ಲಿವರ್ ಸಿರಾಸಿಸ್ ಆಗಿದೆ" ಎಂದು ಹೇಳಿ ಹಿರಿಯ ವೈದ್ಯರ ಹಿಂದೆ ಹೋದ. ನನಗೆ ಏನೂ ತಿಳಿಯಲಿಲ್ಲ. ಡಾ॥ ವಿಜಯ್‌ಗೆ ಸಹಾಯ ಮಾಡುತ್ತಿದ್ದ ತರುಣ ವೈದ್ಯರನ್ನು ಇನ್ನೊಬ್ಬ ಮೈದುನ ವಾಸುದೇವನೊಂದಿಗೆ ಹೋಗಿ ಕಂಡು, ಕೇಸ್ ಬಗ್ಗೆ ಕೇಳಿದೆವು. ಆತ ಪಕ್ಕದಲ್ಲಿದ್ದ ಕೇಸ್‌ಷೀಟ್ ತೆಗೆದು ನಿರ್ವಿಕಾರದಿಂದ, "ಪೇಷಂಟ್‌ಗೆ ಲಿವರ್ ಕ್ಯಾನ್ಸರ್ ಇದೆ, ಅದು ಉಲ್ಬಣಾವಸ್ಥೆ ತಲುಪಿದೆ. ವಿಶೇಷ ಚಿಕಿತ್ಸೆ ಏನೂ ಇಲ್ಲ. ಹೆಚ್ಚೆಂದರೆ ಆರು ತಿಂಗಳು ಬದುಕಬಹುದು" ಎಂದು ಹೇಳಿ ಕೇಸ್ ಷೀಟ್ ಮುಚ್ಚಿಟ್ಟು ತನ್ನ ಇತರ ಕೆಲಸದಲ್ಲಿ ಮಗ್ನನಾದ.

ಆಕಾಶ ಮಗುಚಿ ಬಿದ್ದ ಹಾಗಾಯಿತು. ಮನಸ್ಸು ಮೌನವಾಗಿ ಚೀತ್ಕರಿಸುತ್ತಿತ್ತು. ಮೂರು ದಶಕಗಳಿಗೂ ಮಿಕ್ಕಿ ಸಂಗಾತಿಯಾಗಿದ್ದ ಹರಿಶ್ಚಂದ್ರ, ಆರುತಿಂಗಳಲ್ಲಿ ಅಗಲಲಿದ್ದ. ಕರುಳು ಕಿತ್ತು ಬಾಯಿಗೆ ಬಂದಂತಾಯಿತು.

ಡಾ॥ ವಿಜಯ್ ಮತ್ತೆ ಬಂದಾಗ "ಕಾಯಿಲೆ ಬಗ್ಗೆ ಅಣ್ಣನಿಗೆ ಹೇಳಿದ್ದೀಯಾ?" ಎಂದು ಕೇಳಿದೆ. ಇಲ್ಲ ಎಂಬ ಉತ್ತರ ಬಂದಾಗ, "ಹೇಳಬೇಡ; ವೃಥಾ ಮಾನಸಿಕ ಚಿಂತೆ ಏಕೆ ಅವರಿಗೆ?" ಎಂದೆ. ಡಾ॥ ವಿಜಯ್ ಮೌನವಾಗಿ ನನ್ನನ್ನು ದಿಟ್ಟಿಸಿದ.

ಚಿಕಿತ್ಸೆ ಇಲ್ಲವೆಂದು ವೈದ್ಯರು ಹೇಳಿದರೂ ಮನಸ್ಸು ಕೇಳಬೇಕಲ್ಲ? ಡಾ॥ ವಿಜಯ್‌ಗೆ "ಅಗತ್ಯ ಚಿಕಿತ್ಸೆಯನ್ನು ಮಾಡು; ಸಾವನ್ನು

ಮುಂದೂಡಲಿಕ್ಕಾದರೂ ಪ್ರಯತ್ನಿಸು" ಎಂದು ಹೇಳಿದೆ. ಬೇರೆ ಕೆಲವರು ವೈದ್ಯರು ಬಂದು ಆಂಬ್ಯುಲೈಸೇಷನ್‌ನಂಥ ಚಿಕಿತ್ಸೆ ನೀಡಿದರು; ಸೂಕ್ಷ್ಮದರ್ಶಕ ಯಂತ್ರದಿಂದ ಆಪರೇಷನ್ ಮಾಡಿದರು. ಆಯುರ್ವೇದ – ಹೋಮಿಯೋಪಥಿ ಔಷಧಗಳನ್ನೂ ನೀಡಿದರು. ವಿಪಃಶನ ಶಿಬಿರದ ಸಹಾಯವನ್ನೂ ಪಡೆದೆವು. ಆದರೂ ಅವರ ಸ್ಥಿತಿ ಸುಧಾರಿಸಲಿಲ್ಲ. ವೈದ್ಯರು ನೀಡಿದ ಗಡುವು ಹತ್ತಿರವಾಗುತ್ತಿತ್ತು.

ಅತ್ತ ಸುಗಂಧಾಳಿಗೆ ಕಿಡ್ನಿ ದೊರಕದೆ ಸಾವು–ಬದುಕಿನ ನಡುವೆ ಅವಳು ತುಯ್ದಾಡುತ್ತಿದ್ದಳು. ಡಾ॥ ವಿಜಯ್ ಮತ್ತು ಇತರ ಹಿರಿಯ ವೈದ್ಯರ ಅಭಿಪ್ರಾಯದಲ್ಲಿ, ಮಿಸ್ಟರ್ ಪವಾರ್ ಬದುಕುಳಿಯುವುದು ಕಷ್ಟ ಎಂಬ ಅಭಿಪ್ರಾಯ ಬಂದರೆ, ಅವರ ಕಿಡ್ನಿ ಸುಗಂಧಾಳಿಗೆ ಹೊಂದಿಕೆಯಾಗುವುದಾದರೆ, ಏಕೆ ಮುಂದುವರೆಯಬಾರದು ಎಂಬ ವಿಚಿತ್ರ ವಿಚಾರ ಥಟ್ಟನೇ ಒಂದು ದಿನ ಹೊಳೆಯಿತು. ಆದರೆ ನನ್ನ ವಿಚಾರವನ್ನು ವೈದ್ಯರು ಪಾಸ್ ಮಾಡಲಿಲ್ಲ. "ಕ್ಯಾನ್ಸರ್ ರೋಗಿಯ ಎಲ್ಲಾ ಅಂಗಗಳಿಗೆ ರೋಗ ಹಬ್ಬಿರುವ ಸಾಧ್ಯತೆ ಹೆಚ್ಚಿರುತ್ತದೆ, ಆದ್ದರಿಂದ ಈ ರಿಸ್ಕ್ ತೆಗೆದುಕೊಳ್ಳುವುದು ಸೂಕ್ತವಲ್ಲ; ಬೇರೆ ಕಿಡ್ನಿ ದಾನಿಗಳನ್ನು ಹುಡುಕಿ" ಎಂದು ಡಾ॥ ವಿಜಯ್ ಸಲಹೆ ನೀಡಿದ್ದರಿಂದ, ನನ್ನ ವಿಚಾರ ಹಾಗೇ ಉಳಿಯಿತು.

ಊರಿನ ಬಂಧುಗಳು ಆಸ್ಪತ್ರೆಗೆ ಬಂದರು. ವಾಸುಕಾಕಾ, ಕೇಶವ್‌ಭಾಯಿ ನಾದಿನಿ ಶಾಲಿನಿ ಎಲ್ಲರೂ ಬಂದರು. ಕೆಲವರು ಕಣ್ಣೀರು ಹಾಕಿದಾಗ, ಮಿಸ್ಟರ್ ಪವಾರ್ "ನನಗೇನಾಗಿದೆ ಅಂತ ಅಳ್ತೀರಿ? ನಾಕಾರು ವಾರಗಳಲ್ಲಿ ಹುಷಾರಾಗಿ ಬಿಡ್ತೀನಿ" ಎಂದು ಹೇಳುತ್ತಿದ್ದರು.

ದಿನ ಕಳೆದಂತೆ ಕಾರ್ಗತ್ತಲು ಹತ್ತಿರವಾಗುತ್ತಾ ಬಂತು. ಆಸ್ಪತ್ರೆಯಲ್ಲಿದ್ದಾಗ, ಮನೆಗೆ ಹೋಗಿ ಬರುವಾಗ ಗತಿಸಿದ ದಿನಗಳು ಕಾಡುತ್ತಿದ್ದವು. ಮನೆಗೆ ನನ್ನಿಂದ ಅನ್ಯಾಯವಾಯಿತೆ? ಎಂದು ಸಾವಿರ ಬಾರಿ ಪ್ರಶ್ನಿಸಿಕೊಂಡಿದ್ದೆ. ಪ್ರಿಯಕರ ಹರಿಶ್ಚಂದ್ರ, ಪ್ರಿಯ ಪತಿ ಹರಿಶ್ಚಂದ್ರ, ಕಡೆಗೆ ನನ್ನ ಮತ್ತು ಮಕ್ಕಳ ಜೊತೆ ಹಟವಾದಿ ಥರ ವರ್ತಿಸುತ್ತಿದ್ದ ಮಿಸ್ಟರ್ ಪವಾರ್...... ಈ ಯಾವ ಘಟ್ಟದಲ್ಲೂ ನನ್ನ ಹೃದಯ–ಮನಸ್ಸುಗಳಲ್ಲಿ ಕಹಿ ಮೂಡಿರಲಿಲ್ಲ. ನಾನು ಪಡೆದ, ನನಗೆ ದಕ್ಕಿದ ಶಿಕ್ಷಣ, ಚಿಂತನೆ ಹಾಗೂ ಮಹಿಳಾವಾದಿ ಧೋರಣೆಗಳಿಗೆ ನಾನು ಸಂಪೂರ್ಣವಾಗಿ ಬದ್ಧಳಾಗಿದ್ದೆ. ಬಾಬಾಸಾಹೇಬರ ನೈಜ ಅನುಯಾಯಿಯಾಗಿದ್ದೆ. ಇದೇ ನನ್ನ ಅಪರಾಧ ಎಂದು ಒಪ್ಪಿಕೊಳ್ಳುವುದು ನನ್ನಿಂದಾಗುತ್ತಿರಲಿಲ್ಲ.

ಈ ಕಾಲದಲ್ಲಿ ನೇಪಾಳದ ಲುಂಬಿನಿಯಲ್ಲಿ ವಿಶ್ವ ಬೌದ್ಧ ಮಹಿಳಾ ಸಮಾವೇಶ ಜರುಗಿತು. ಏಷ್ಯಾದ ಸಂಘಟಕಿ ಕರ್ಮಾ ಲೇಕಸೆ ಆಹ್ವಾನ ನೀಡಿದರು. ನನ್ನ ವಿಷಯ ತಿಳಿಸಿ, ಆಹ್ವಾನಿಸಿದ್ದಕ್ಕೆ ಧನ್ಯವಾದ ಹೇಳಿ, ಆಹ್ವಾನ ಒಪ್ಪಿಕೊಳ್ಳಲು ಅಸಾಧ್ಯವೆಂದು ತಿಳಿಸಿದೆ. ಇದೇ ಸಮಾವೇಶಕ್ಕೆ ಆಹ್ವಾನಿತಳಾಗಿದ್ದ ಸ್ನೇಹಿತೆಯೊಬ್ಬರು "ಬಾ ಹೋಗಿ ಬರೋಣ" ಎಂದು ಫೋನ್ ಕರೆ ಮಾಡಿದಾಗ, ಅವರಿಗೂ ವಿಷಯ ತಿಳಿಸಿದೆ. ಮಹಿಳಾ ಚಳವಳಿಯಲ್ಲಿ ಸಂಗಾತಿಯಾಗಿದ್ದ ಆಕೆಗೆ ಆತ್ಮೀಯತೆಯಿಂದ "ಮನೆ ಪರಿಸ್ಥಿತಿ, ಪತಿಯ ಅನಾರೋಗ್ಯಗಳಿಂದಾಗಿ ಮನಸ್ಸು ಮುದುಡಿ ಕೊಂಡಂತಾಗಿದೆ. ಒಂಥರ ಡಿಪ್ರೆಷನ್..." ಎಂದೆ. "ನಾವು ಮಹಿಳಾ ಆಂದೋಲನದ ಹಿನ್ನೆಲೆಯವರು; ನಮ್ಮ ಮನಸ್ಸು ಮುದುಡಬಾರದು; ಭಾವನೆಗಳ ಓಘದಲ್ಲಿ ಹರಿದು ಹೋಗಬಾರದು. ನಮಗೆಂಥ ಡಿಪ್ರೆಷನ್? ನಾವೆಲ್ಲ ಮಹಿಳಾ ವಿಮೋಚನಾವಾದಿಗಳು. ನಾವು ಬಾಂಧವ್ಯ, ಸಂಬಂಧಗಳಿಗೆ ಮಾರು ಹೋಗಬಾರದು......" ಎಂದು ಉಪದೇಶಿಸಿದಳು.

ಮಹಿಳಾ ವಿಮೋಚನಾವಾದಿಗಳು ಎಂದು ಲೇಬಲ್ ಅಂಟಿಸಿ ಕೊಂಡಿದ್ದವರ ಈ ಮುಖವನ್ನು ಮೊದಲೂ ನೋಡಿದ್ದೆ. ಆ ಘಟ್ಟದಲ್ಲಿ ಮತ್ತೊಮ್ಮೆ ಅಂಥವರ ಮುಖದರ್ಶನವಾಯಿತು. ವಿಮೋಚನಾವಾದಿಗಳಾದರೆ ಭಾವನೆಗಳನ್ನು ಕಳೆದುಕೊಳ್ಳಬೇಕೆ? ತಂದೆ–ತಾಯಿ, ಸೋದರ–ಸೋದರಿ, ಗಂಡ–ಮಕ್ಕಳು, ಬಂಧು–ಮಿತ್ರರು, ಮನೆ–ಮಾರು ಎಂಬ ಭಾವನೆಗಳೇ ಇರಬಾರದೆ? ಇದ್ದರೆ ವಿಮೋಚನಾವಾದಿಗಳಾಗುವುದಿಲ್ಲವೆ? ಅಥವಾ ಕಡಿಮೆ ದರ್ಜೆಯ ವಿಮೋಚನಾವಾದಿಗಳಾಗುತ್ತೇವೆಯೆ?" ಎಂದೆಲ್ಲ ಅನಿಸಿ, ಭಾವನೆಗಳನ್ನು ಕಳೆದುಕೊಳ್ಳಲೇ ಬೇಕು ಎನ್ನುವುದಾದರೆ, ಮಹಿಳಾ ವಿಮೋಚನಾವಾದಿಯಾಗುವುದೇ ಬೇಡ ಎಂದು ತೀರ್ಮಾನಿಸುವುದೇ ಲೇಸು ಎಂದುಕೊಂಡೆ.

* * *

ಕಡೆಗೂ ಆ ದಿನ ಬಂತು. ಆ ಬೆಳಿಗ್ಗೆ 11 ಗಂಟೆ ಸುಮಾರಿಗೆ ನಿದ್ರೆ ಹೋಗಿದ್ದ ಮಿಸ್ಟರ್ ಪವಾರ್–ಅದೇ ನನ್ನ ಹರಿಶ್ಚಂದ್ರ–ಕಣ್ತೆರೆಯಲಿಲ್ಲ. ತಪಾಸಣೆಗೆ ಬಂದ ಡ್ಯೂಟಿ ಡಾಕ್ಟರ್ ಮಿಸ್ಟರ್ ಪವಾರ್ ಕೈಮುಟ್ಟಿದಾಗಲೇ ವಿಷಯ ಗೊತ್ತಾಗಿದ್ದು. ಆ ದಿನ ಬೆಳಿಗ್ಗೆ ಏಳೂವರೆ ಹೊತ್ತಿಗೆ ಬ್ರಷ್ ಮಾಡಿ, ಚಹಾ ಕುಡಿದು, ಮಾತ್ರೆ ತೆಗೆದುಕೊಂಡು ಮಲಗಿದ್ದರು. ಹತ್ತು ಗಂಟೆ ಹೊತ್ತಿಗೆ ಅವರು ನಮ್ಮನ್ನಗಲಿದ್ದು ತಿಳಿಯಿತು.

ಬಂಧು–ಬಳಗದವರಿಗೆ ಸುದ್ದಿ ಹೋಯಿತು. ಆಸ್ಪತ್ರೆಯ ವಿಧಿ–ವಿಧಾನಗಳು ಮುಗಿದವು. ಪಾರ್ಥಿವ ಶರೀರವನ್ನು ನೇರವಾಗಿ ವಿದ್ಯುತ್ ಚಿತಾಗಾರಕ್ಕೆ ಒಯ್ದೆವು. ಕೆಲವರು ತಾಳಿ ಕಿತ್ತು ಹಾಕುವ, ಕಾಲುಂಗುರ ಕಳಚಿ ಬಿಸಾಡುವ, ಬಳೆ ಒಡೆಯುವ ಸಲಹೆ ನೀಡಿದರು. ಬೌದ್ಧರಲ್ಲಿ ಈ ಯಾವ ರೂಢಿಯೂ ಇಲ್ಲವೆಂದು ಹೇಳಿ ನಿರಾಕರಿಸಿದೆ. ಇದು ಮುಂದೆ ತುಸು ವಿವಾದದ ಸ್ವರೂಪ ಪಡೆಯಿತು. ಬೌದ್ಧ ಜನ ಪಂಚಾಯತ್ ಈ ಬಗ್ಗೆ ವಿಚಾರ ವಿನಿಮಯ ನಡೆಸಿ, 2002ರ ಏಪ್ರಿಲ್ 14ರಂದು "ಪತಿಯ ನಿಧನದ ಬಳಿಕ ತಾಳಿ, ಬಳೆ, ಕಾಲುಂಗುರ ಮುಂತಾದ ವಿವಾಹ ಸೂಚಕಗಳನ್ನು ಉಳಿಸಿಕೊಳ್ಳುವುದು ಅಥವಾ ತ್ಯಜಿಸುವುದು ಪತ್ನಿಯ ಇಚ್ಛೆಗೆ ಬಿಟ್ಟಿದೆ" ಎಂಬ ನಿರ್ಣಯ ಕೈಗೊಂಡಾಗ, ಈ ಕುರಿತ ವಿವಾದ ಕೊನೆಗೊಂಡಿತು.

ಅನೇಕ ಜನ ಬಂಧು–ಮಿತ್ರರು ಮನೆಗೆ ಬಂದು ಸಮಾಧಾನ ಹೇಳಿದರು. ಈ ನಡುವೆ ಸುಗಂಧಾ ಕೂಡ ಆಸ್ಪತ್ರೆಯಲ್ಲಿ ಅಸು ನೀಗಿದಳು.

ಒಂದೂವರೆ ವರ್ಷದ ಬಳಿಕ ಎರಡನೇ ಮಗಳು ಮಾನಿನಿಯ ಮದುವೆಯೂ ಆಯಿತು. ಈಗ ಇಬ್ಬರೂ ಮಕ್ಕಳು ಅನ್ಯೋನ್ಯವಾಗಿದ್ದಾರೆ. ಅವರ ಕುಟುಂಬ ವರ್ಗದವರೊಂದಿಗೆ ಸಂತೋಷದಿಂದಿದ್ದಾರೆ. ನನ್ನ ಮನೆಯಲ್ಲಿ ನಾನಿದ್ದೇನೆ. ಆಫೀಸ್ ಕೆಲಸ, ಸಾಹಿತ್ಯ, ಸಂಘಟನೆಯ ಕೆಲಸ ಸಾಗಿದೆ. ಪತ್ರ ಸಂಪರ್ಕ, ಸಮ್ಮೇಳನಗಳಲ್ಲಿ ಭಾಗಿಯಾಗುವುದು ಮುಂದುವರೆದಿದೆ. ನನ್ನ ಹರಿಶ್ಚಂದ್ರ ನನ್ನೊಂದಿಗೇ ಇದ್ದಾನೆ ಎಂಬ ಭಾವನೆ ಮನಸ್ಸಿನಲ್ಲಿ ಉಳಿದಿದೆ.

ನನ್ನ ಆಫೀಸ್ ಕೆಲಸ ಎಂದು ಕೊನೆಗೊಳ್ಳುವುದು ಎಂಬುದಕ್ಕೆ ಲೆಕ್ಕವಿದೆ. ಅದರ ದಿನ ನಿರ್ಧಾರವಾಗಿದೆ. ಆದರೆ ನನ್ನ ಜೀವನ? ಅದು ಎಂದು ಮುಗಿಯಲಿದೆ? ಯಾರಿಗೆ ಗೊತ್ತು? ನಾನು ಈ ಬಗ್ಗೆ ಚಿಂತಿಸುತ್ತಲೇ ಇಲ್ಲ. ಬರುವಾಗ ಬರಲಿ; ಅತ್ಯಂತ ನಿರುದ್ವಿಗ್ನಳಾಗಿ, ಸ್ಥಿತಪ್ರಜ್ಞೆಯಿಂದ ಸ್ವಾಗತಿಸುವ ಮನೋಧರ್ಮವನ್ನು ನನ್ನ ಜೀವನ ನನಗೆ ಕಲಿಸಿಕೊಟ್ಟಿದೆ. ಹೌದು ನನಗೆ ದಕ್ಕಿದ ತಿಳಿವಳಿಕೆ ಜ್ಞಾನ ವಿಚಾರ ಫಣಸ್‌ವಳೆ ರತ್ನಾಗಿರಿ, ಮುಂಬೈ ಹೀಗೆ ಸವೆಸಿ ಬಂದ ನನ್ನ ಜೀವನದ ದಾರಿಯಲ್ಲಿನ ಥರಾವರಿ ಅನುಭವಗಳ ಬಳಿಕ ನಾನು ಮನುಷ್ಯಳಾದುದು ಮಾತ್ರ ಬಹು ದೊಡ್ಡ ಕೌತುಕವೇ ಸೈ.

* * * *(ಮುಗಿಯಿತು)*

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

ಕನಸುಗಳಿನ್ನೂ ಇವೆ

ಬರೀ ಹಗಲಿರುಳುಗಳ
ಬೆಳಕು ಕತ್ತಲಿನಾಟ
ನಿರಂತರ ಚಲನೆ
ಇತ್ತ-ಚಿಗುರಲೂ ಬಾರದೆ
ಒಣಗಲೂ ಆಗದೆ ಟೊಳ್ಳು
ಗರ್ಭದಲ್ಲಿ ಹುಸಿಗನಸುಗಳು
ತೊಳಲಾಡುತ್ತವೆ ತಹತಹಿಸಿ

ಬಜಾರಿನಲ್ಲಿ ಹರವಿಟ್ಟ ಬಣ್ಣಗಳು
ಕರಿನೆರಳು ಕಣ್ಗಳಲ್ಲಿ
ಗದ್ದಲ ಸುತ್ತೆಲ್ಲ ಮಾತಿಲ್ಲ
ಒಡೆದ ಶಬ್ದಗಳ ಧ್ವನಿ
ಕಂಪಿಸುವ ಮನಗಳ
ಒಬ್ಬಂಟಿ ಪ್ರೇತಗಳೀ ಜನ
ಚಲನೆಯಿಲ್ಲ ಸ್ಥಿರವಾಗಿದೆ ಎಲ್ಲಾ

ವಲಸೆ ಹೋದ ಹಕ್ಕಿಗೆ
ಮತ್ತೆ ದಕ್ಕಲಿಲ್ಲ ಗೂಡು
ಮರಗಳುರುಳಿ ಬೇರುಗಳು
ತಳದಿ ಹಾತೊರೆಯುತ್ತವೆ ಚಿಗುರಲು
ಬತ್ತಿದ ಪಾಯಗಳೆಲ್ಲಾ ಮುಗಿಲೆತ್ತರ
ಬಡವಾಗಿವೆ ಭವ್ಯ ಅರಮನೆಗಳು
ಹರಿಯುತ್ತವೆ ಹೊಳೆ ನದಿಗಳು
ಪಾತಾಳದಲ್ಲಿ ಪುರಾಣಗಳಲ್ಲಿ

ಸೃಷ್ಟಿಯ ಮರ್ಮ ಕೆದಕಿ
ಹರಿದು ಹಂಚಿದ ಗರ್ಭದಿಂದ
ರಾಚಿ ಚೆಲ್ಲಿವೆ ಭ್ರೂಣಗಳು
ಚಿಗುರ ಮರೆತ ಭೂಮಿ
ಮಲಗಿದೆ ಮೈ ಹರವಿ
ಲಗಾಮಿಲ್ಲದ ಕುದುರೆಯ
ನಿಲ್ಲಲಾರದ ಪಯಣವಿದು
ಕನಸುಗಳಿನ್ನೂ ಇವೆ

■ ಜಯಶ್ರೀ ಸಿ. ಕಂಬಾರ

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018